ಸಂಜೆವಾಣಿ
1982
ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ
www.sanjevani.com contact @sanjevani.com PH: 080 22868882

Excel
Refrigeration & Bakery Equipment
Bommasandra, Bangalore
ರೋಟ್ರಿ ರ್‍ಯಾಕ್ ಓವೆನ್‌ಗಳು ಸ್ಪಿರಲ್ ಮಿಕ್ಸರ್ಸ್
ಪ್ಲಾನೆಟರಿ ಮಿಕ್ಸರ್ಸ್ ಇಂಪೋರ್ಟೆಡ್ ಓವೆನ್‌ಗಳು.
ಕಿಚನ್ ಫ್ರೀಜರ್‌ಗಳು ಜ್ಯೂಸ್ ಮೆಷಿನ್‌ಗಳು
ವರ್ಟಿಕಲ್ ಕೇಕ್ ಡಿಸ್‌ಪ್ಲೇ.
Mob : 9902030007/9900021097

# ಕಬಡ್ಡಿಯಲ್ಲಿ ಭಾರತ ಮಹಿಳಾ ತಂಡಕ್ಕೆ ಸ್ವರ್ಣ ಮ್ಯಾರಾಥಾನ್, ಸ್ಕ್ವಾಷ್‌ನಲ್ಲಿ ಬೆಳ್ಳಿ, ಕಂಚು






ಐಚಿ-ನಗೋಯಾ,ಸೆ.26- 2026ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಮಹಿಳಾ ಕಬಡ್ಡಿ ತಂಡವು ಇರಾನ್ ವಿರುದ್ಧ 37–34 ಅಂತರದಲ್ಲಿ ರೋಚಕ ಜಯ ಸಾಧಿಸಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದೆ.

ಶನಿವಾರ ಟೊಕೈ ಸಿಟಿಜನ್ ಜಿಮ್ನಾಷಿಯಂನಲ್ಲಿನಡೆದಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಅಂತಿಮ ಕ್ಷಣಗಳವರೆಗೂ ಉತ್ತಮ ಹೋರಾಟ ನಡೆಸಿ ಗೆಲುವು ದಾಖಲಿಸಿತು.

ಈ ಗೆಲುವಿನೊಂದಿಗೆ ಭಾರತ ಮಹಿಳಾ ಕಬಡ್ಡಿ ತಂಡವು ಟೂರ್ನಿಯಲ್ಲಿ ಅಜೇಯ ಓಟವನ್ನು ಕಾಯ್ದುಕೊಂಡಿತು. ಮಹಿಳಾ ಕಬಡ್ಡಿ ತಂಡದ ಗೆಲುವಿನೊಂದಿಗೆ ಹಾಲಿ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಗೆದ್ದಿರುವ ಚಿನ್ನದ ಪದಕಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಇದಕ್ಕೂ ಮೊದಲು ಮಹಿಳಾ ಕ್ರಿಕೆಟ್ ತಂಡ ಹಾಗೂ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಸುರುಚಿ ಸಿಂಗ್ ಮತ್ತು ಕಮಲ್ಜೀತ್ ಜೋಡಿ ಚಿನ್ನ ಗೆದ್ದಿತ್ತು.

ಭಾರತ ತಂಡವು 'ಎ' ಗುಂಪು ಹಂತದಲ್ಲಿ ಬಾಂಗ್ಲಾದೇಶ ಮತ್ತು ಜಪಾನ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿತ್ತು. ಗುಂಪು ಹಂತದಲ್ಲೇ ಇರಾನ್ ತಂಡವನ್ನೂ ಮಣಿಸಿದ್ದ ಭಾರತ, ಗುಂಪಿನಲ್ಲಿ ಅಗ್ರಸ್ಥಾನ ಪಡೆದು–ಕೊಂಡಿತ್ತು.

ಮಹಿಳಾ ಕಬಡ್ಡಿ ಸ್ಪರ್ಧೆ 2010ರ ಏಷ್ಯನ್ ಗೇಮ್ಸ್‌ನಿಂದ ಕ್ರೀಡಾಕೂಟದ ಭಾಗವಾಗಿದೆ. ಈವರೆಗೆ ನಡೆದ ಆವೃತ್ತಿಗಳಲ್ಲಿ ಭಾರತ ಪ್ರತಿ ಬಾರಿಯೂ ಚಿನ್ನದ ಪದಕ ಗೆದ್ದಿತ್ತು. ಆದರೆ 2018ರ ಜಕಾರ್ತಾ ಏಷ್ಯನ್ ಪುಟ 2

# ಜ್ಞಾನೇಶ್ ವಜಾಕ್ಕೆ ಕೈ ಆಗ್ರಹ

## ರಾಜ್ಯದಲ್ಲಿ ಕಾಂಗ್ರೆಸ್ ನಾಯಕರ ಪ್ರತಿಭಟನೆ, ಸಿಇಸಿ ವಿರುದ್ಧ ಭುಗಿಲೆದ್ದ ಆಕ್ರೋಶ

The Best Jewellery
• GOLD • SILVER • DIAMOND
BIS 916 HALLMARKED GOLD JEWELLERY
ಚಿನ್ನ ಮತ್ತು ಬೆಳ್ಳಿ ಖರೀದಿಸಲು ಪ್ರತಿಷ್ಠಿತ ಆಭರಣ ಶೋರೂಮ್.
T & C Apply
ನಿಮ್ಮ ಹಳೆಯ ಚಿನ್ನವನ್ನು ನಾವು ಆನ್‌ಲೈನ್ ದರದಲ್ಲಿ ಖರೀದಿಸುತ್ತೇವೆ.
Making Charges Starting from 3%
Benefits
*Pay flexible amounts for 10 months and purchase on 11th month. *50% off on making charges on all gold ornaments. *This offer will be valid only on the total amount accumulated for 10 months.
#6, 1/1, 11th Main Road Gokula 1st Stage, Bombay Dyeing Road, Opp Comfort Inn Hotel, Yeshwanthpur, Bengaluru- 560 054. Call: 080-41146916 / +91-9686062916

ಬೆಂಗಳೂರು, ಸೆ. 26- ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ರಾಜ್ಯ ಕಾಂಗ್ರೆಸ್ ಪಕ್ಷ ಇಂದು ರಾಜ್ಯಾದ್ಯಂತ ಪ್ರತಿಭಟನಾ ಧರಣಿ ನಡೆಸಿದ್ದು, ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ಕಾಂಗ್ರೆಸ್ ನಾಯಕರು ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಧರಣಿ ನಡೆಸಿದ್ದು, ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಕಾಂಗ್ರೆಸ್‌ನ ಹಲವು ಸಚಿವರು, ಶಾಸಕರು, ಸಂಸದರು ಭಾಗಿಯಾಗಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಆಗ್ರಹಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಬಿಜೆಪಿ ಪರವಾಗಿ ಕೆಲಸ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದ ಪ್ರತಿಭಟನಾನಿರತ ಕಾಂಗ್ರೆಸ್ ನಾಯಕರುಗಳು, ಎಸ್‌ಐಆರ್‌ನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆ ಪಡೆಯಬೇಕು ಇಲ್ಲದಿದ್ದರೆ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಮುಖ್ಯ ಚುನಾವಣಾ ಆಯುಕ್ತರ ನಡೆ ವಿರುದ್ಧ ಆಯೋಗದ ಇನ್ನಿಬ್ಬರು ಆಯುಕ್ತರು ಧ್ವನಿ ಎತ್ತಿದ್ದಾರೆ. ಎಸ್‌ಐಆರ್‌ನಲ್ಲಿ ಅಕ್ರಮ ನಡೆದಿದೆ. ಈ ಎಸ್‌ಐಆರ್‌ನ್ನು ರದ್ದುಪಡಿಸುವಂತೆ ಪ್ರತಿಭಟನಾನಿರತರು ಆಗ್ರಹಿಸಿದರು. ಜ್ಞಾನೇಶ್‌ಕುಮಾರ್, ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಪುಟ 2




ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ಕಾಂಗ್ರೆಸ್ ನಗರ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಸಚಿವ ಹೆಚ್.ಕೆ. ಪಾಟೀಲ್ ಮತ್ತಿತರ ಮುಖಂಡರು ಭಾಗವಹಿಸಿದ್ದರು.

### ಆಯೋಗ ಬಿಜೆಪಿ ಕೈಗೊಂಬೆ: ಸಿಎಂ

ಕೇಂದ್ರ ಚುನಾವಣಾ ಆಯೋಗ ಬಿಜೆಪಿ ಕೈಗೊಂಬೆಯಾಗಿರುವುದಕ್ಕೆ ಸಾಕ್ಷಿಗಳಿವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೇಂದ್ರ ಚುನಾವಣಾ ಆಯುಕ್ತರ ವಿರುದ್ಧ ಕಾಂಗ್ರೆಸ್ ಪಕ್ಷ ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮೇಲಿನ

ಆರೋಪಗಳನ್ನು ಮುಚ್ಚಿ ಹಾಕಲು ಸಾಧ್ಯವಿಲ್ಲ ಎಂದು ಹೇಳಿದರು.

ಮತದಾನದ ಹಕ್ಕು ದುರುಪಯೋಗವಾಗುತ್ತಿದೆ. ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಪ್ರಜಾಪ್ರಭುತ್ವಕ್ಕೆ ತೊಂದರೆಯಾಗಿದೆ. ಇಡೀ ವಿಶ್ವವೇ ಭಾರತದ ಮತದಾನದ ಮೇಲೆ ನಂಬಿಕೆ ಕಳೆದುಕೊಂಡಿದೆ ಎಂದರು. ಚುನಾವಣಾ ಆಯೋಗಕ್ಕೆ ಸಂವಿಧಾನದ ರಕ್ಷಣೆ ಕೊಟ್ಟಿದ್ದೇವೆ. ಆದರೆ ಚುನಾವಣಾ ಆಯೋಗ ಹಕ್ಕು ಕಿತ್ತುಕೊಳ್ಳುವ ಕೆಲಸ ಮಾಡಿದೆ ಎಂದು ದೂರಿದರು. ಪುಟ 2

### ಬೆಂಗಳೂರಿಗೆ ಬರುವ ಶಾಸಕರಿಗೆ ಎರಡೆರಡು ಮದುವೆ: ಸಿಎಂ ಹೇಳಿಕೆಗೆ ದೋಸ್ತಿ ಕಿಡಿ

ಬೆಂಗಳೂರು,ಸೆ.26-ಬೆಂಗಳೂರಿಗೆ ಬಂದ ಅನೇಕ ಶಾಸಕರು ಎರಡೆ–ರಡು ಮದುವೆಯಾಗಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರೋದೀಗ ಭಾರಿ ಕುತೂಹಲ ಮೂಡಿಸಿದೆ. ಆ ಶಾಸಕರು ಯಾರೆಂಬ ಪ್ರಶ್ನೆ ಉದ್ಭವಿಸಿವೆ.

ಪ್ರಸ್ತುತ ಸಿಎಂ ಹೇಳಿಕೆ ಬಗ್ಗೆ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಎರಡೆರಡು ಮದುವೆ ಆಗಿರುವ ಶಾಸಕರ ಹೆಸರುಗಳನ್ನು ದಯವಿಟ್ಟು ಬಹಿರಂಗ ಮಾಡಿ ಎಂದು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ರಾಜ್ಯದ ಜನತೆ ಎಲ್ಲರನ್ನೂ ಅನುಮಾನ ದೃಷ್ಟಿಯಿಂದ ಕಾಣುವ ಅಥವಾ ಅಪಹಾಸ್ಯ ಮಾಡುವ ಸಾಧ್ಯತೆ ಇದೆ ಎಂದಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಯಿಂದ ಶಾಸಕರ ಮನೆಗೆ ಬೆಂಕಿ ಬಿದ್ದಂತಾಗಿದೆ. ಎಲ್ಲ ಶಾಸಕರ ಮೇಲೂ ಅನುಮಾನ ಪಡುವಂತಾಗಿದೆ. ಈ ಅನುಮಾನಕ್ಕೆ ಮುಖ್ಯಮಂತ್ರಿಗಳೇ ಪರಿಹಾರ ಸೂಚಿಸಬೇಕು. ಯಾರು ಯಾರು ಎರಡೆರಡು ಮದುವೆಯಾಗಿದ್ದಾರೆ ಎಂಬುದರ ಪಟ್ಟಿಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

**ಡಿಕೆಶಿ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ :**

ಕೆಲ ಶಾಸಕರು ಎರಡೆರಡು ಮದುವೆಯಾಗಿದ್ದಾರೆ ಎಂಬ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿ ನೀಡಿದ ಹೇಳಿಕೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್‌ನ ಮನ್ನಾ ಪುಟ 2

### ಡಿಸೆಂಬರ್‌ಗೆ ಜಿಬಿಎ ಚುನಾವಣೆ

ಬೆಂಗಳೂರು,ಸೆ.26- ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಉಃಂ) ಐದು ನಗರ ಪಾಲಿಕೆಗಳ ಚುನಾವಣೆಗೆ ತೆರೆಮರೆಯಲ್ಲಿ ಸಿದ್ಧತೆ ಚುರುಕುಗೊಂಡಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಡಿಸೆಂಬರ್‌ನಲ್ಲೇ ಚುನಾವಣೆ ನಡೆಸಬೇಕಿರುವ ಹಿನ್ನೆಲೆಯಲ್ಲಿ ಆಡಳಿತ ಯಂತ್ರವನ್ನು ಚುನಾವಣಾ ಕಾರ್ಯಕ್ಕೆ ಸಜ್ಜುಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಐದು ನಗರ ಪಾಲಿಕೆಗಳ ಚುನಾವಣೆ ಡಿಸೆಂಬರ್ 2026ರಲ್ಲಿ ನಡೆಸುವಂತೆ ಸುಪ್ರೀಂ ಕೋರ್ಟ್ ಜುಲೈ 17ರಂದು ಸ್ಪಷ್ಟ ನಿರ್ದೇಶನ ನೀಡಿತ್ತು. ಕರ್ನಾಟಕದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆ ನವೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ ಎಂಬುದನ್ನು ಪರಿಗಣಿಸಿದ ನ್ಯಾಯಪೀಠ, ಐದು ಪಾಲಿಕೆಗಳ ಚುನಾವಣೆ ಪುಟ 2

### ಬಿಡಿಎ ವಾಣಿಜ್ಯ ಸಂಕೀರ್ಣಗಳಿಗೆ ಗ್ರಹಣ 8 ವರ್ಷ ಕಳೆದರೂ ಮುಗಿಯದ ನಿರ್ಮಾಣ




ಬೆಂಗಳೂರು,ಸೆ.26-ಬೆಂಗಳೂರಿನ ಹೃದಯ ಭಾಗದಲ್ಲಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಬಿಡಿಎ ವಾಣಿಜ್ಯ ಸಂಕೀರ್ಣಗಳ ಮರುನಿರ್ಮಾಣ ಯೋಜನೆ ಇದೀಗ ಮತ್ತೆ ಚರ್ಚೆಗೆ ಬಂದಿದೆ. ಸುಮಾರು 15 ಸಾವಿರ ಕೋಟಿಗೂ ಅಧಿಕ ಮೌಲ್ಯದ ಬಿಡಿಎಗೆ ಸೇರಿದ ಏಳು ವಾಣಿಜ್ಯ ಸಂಕೀರ್ಣಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಮರುನಿರ್ಮಿಸಲು ಖಾಸಗಿ ಸಂಸ್ಥೆಗಳಿಗೆ ದೀರ್ಘಾವಧಿ ಗುತ್ತಿಗೆ ನೀಡಲಾಗಿದ್ದು, ಹಲವು ವರ್ಷಗಳು ಕಳೆದರೂ ಯೋಜನೆಗಳು ಪೂರ್ಣಗೊಳ್ಳದಿರುವುದು ವಿವಾದಕ್ಕೆ ಕಾರಣವಾಗಿದೆ.

ಇಂದಿರಾನಗರ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಆರ್.ಟಿ.ನಗರ, ಆಸ್ಟಿನ್ ಟೌನ್, ವಿಜಯನಗರ ಹಾಗೂ ಸದಾಶಿವನಗರದಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮಲ್ಟಿಪ್ಲೆಕ್ಸ್ ಹಾಗೂ ಮಾಲ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಯೋಜನೆ ರೂಪಿಸಲಾಗಿತ್ತು. ಈ ಏಳು ಸಂಕೀರ್ಣಗಳಲ್ಲಿ ಒಟ್ಟು 566 ಅಂಗಡಿಗಳಿದ್ದು, ಪ್ರಸ್ತುತ ಬಿಡಿಎಗೆ ವರ್ಷಕ್ಕೆ ಸುಮಾರು 7 ಕೋಟಿ ಬಾಡಿಗೆ ಆದಾಯ ಬರುತ್ತಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

**65 ವರ್ಷಗಳ ಗುತ್ತಿಗೆ ಆರೋಪ ;**

2017–18ರಲ್ಲಿ ಈ ಸಂಕೀರ್ಣಗಳ ಮರುನಿರ್ಮಾಣಕ್ಕಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿತ್ತು. ಇಂದಿರಾನಗರ ಸಂಕೀರ್ಣದ ಅಭಿವೃದ್ಧಿಯನ್ನು Maverick Holdings ಹಾಗೂ Embassy Group ಪಾಲುದಾರಿಕೆಯಲ್ಲಿ, ಉಳಿದ ಸಂಕೀರ್ಣಗಳನ್ನು ಖಾಸಗಿ ಅಭಿವೃದ್ಧಿದಾರರ ಮೂಲಕ ಕೈಗೊಳ್ಳಲು ಉದ್ದೇಶಿಸಲಾಗಿತ್ತು.

ಯೋಜನೆಯಡಿ 35 ವರ್ಷಗಳ ಗುತ್ತಿಗೆ ಹಾಗೂ ಮತ್ತಷ್ಟು 30 ವರ್ಷ ವಿಸ್ತರಣೆಗೆ ಅವಕಾಶ ಕಲ್ಪಿಸುವ ಪುಟ 2

### ಇರಾನ್ ಕದನ ವಿರಾಮ ಟ್ರಂಪ್ ತಿರಸ್ಕಾರ ಮತ್ತೆ ದಾಳಿ ಸಾಧ್ಯತೆ



ವಾಷಿಂಗ್ಟನ್ /ನ್ಯೂಯಾರ್ಕ್, ಸೆ. 26- ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಅಮೆರಿಕ–ಇರಾನ್ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮ ನೀಡುವ ಉದ್ದೇಶದಿಂದ ಇರಾನ್ ಮುಂದಿಟ್ಟಿದ್ದ ಏಳು ದಿನಗಳ ಕದನ ವಿರಾಮ ಯೋಜನೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕದ ಮಧ್ಯಂತರ ಚುನಾವಣೆಗಳ ಬಳಿಕ ಇರಾನ್ ವಿರುದ್ಧದ ಅಮೆರಿಕದ ಬಾಂಬ್ ದಾಳಿಯನ್ನು ಮತ್ತೆ ಆರಂಭಿಸುವ ನಿರೀಕ್ಷೆ ಇದೆ ಎಂದು ಟ್ರಂಪ್ ತಮ್ಮ ಆಪ್ತರಿಗೆ ತಿಳಿಸಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳನ್ನು ಉಲ್ಲೇಖಿಸಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಹೇಳಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಪುಟ 2

### ಟ್ರಂಪ್ ಜಲಮಾರ್ಗ

ಪಶ್ಚಿಮ ಏಷ್ಯಾ ಪ್ರದೇಶದ ನಕ್ಷೆಯಲ್ಲಿ ಹೊರ್ಮುಜ್ ಜಲಸಂಧಿ ಇರುವ ಮಾರ್ಗವನ್ನು ಗುರುತಿಸಿ ಟ್ರಂಪ್ ಜಲಮಾರ್ಗ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮರುನಾಮಕರಣ ಮಾಡಿದ್ದಾರೆ.

ತಮ್ಮ ಒಡೆತನದ ಟ್ರುತ್ ಸೋಶಿಯಲ್ ಮೀಡಿಯಾದಲ್ಲಿ ಈ ಕುರಿತು ಟ್ರಂಪ್ ಮಾಹಿತಿ ಹಂಚಿಕೊಂಡಿರುವುದು ಗಮನಸೆಳೆದಿದೆ.

### ನಾಗಲ್ಯಾಂಡ್‌ನಲ್ಲಿ ನಕಲಿ ಮದ್ಯ ಸೇವಿಸಿ 19 ಮಂದಿ ಸಾವು

ಕೊಹಿಮಾ, ಸೆ.26– ನಕಲಿ ಅಥವಾ ಕಲಬೆರಕೆ ಮದ್ಯ ಸೇವಿಸಿದ ಶಂಕೆಯಲ್ಲಿ ನಾಗಾಲ್ಯಾಂಡ್‌ನಲ್ಲಿ ಎರಡು ದಿನಗಳ ಅವಧಿಯಲ್ಲಿ 19 ಮಂದಿ ಮೃತಪಟ್ಟಿದ್ದಾರೆ.



ಘಟನೆಗೆ ಸಂಬಂಧಿಸಿದಂತೆ ಪೊಲೀಸರು ವಿಶೇಷ ತನಿಖಾ ತಂಡ ರಚಿಸಿದ್ದು, ಮದ್ಯದ ಮೂಲ ಮತ್ತು ಪೂರೈಕೆ ಜಾಲದ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ಮೋಕೊಕ್ಚುಂಗ್ ಜಿಲ್ಲೆಯಲ್ಲಿ 8 ಮಂದಿ, ತುಯೆನ್ಸಾಂಗ್ ಜಿಲ್ಲೆಯಲ್ಲಿ 11 ಮಂದಿ ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಐ. ಬಂಗ್ಲಾಂಗ್ ಚಾಂಗ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವೆಸುಪ್ರಾ ಕೆಜೊ ತಿಳಿಸಿದ್ದಾರೆ.

ಮದ್ಯ ಸೇವನೆಯಿಂದಲೇ ಸಾವು ಸಂಭವಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮೃತರ ಪುಟ 2

### ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟಕ್ಕೆ ಬಿಜೆಪಿ–ಜೆಡಿಎಸ್ ಸಜ್ಜು

ಬೆಂಗಳೂರು.ಸೆ.26- ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಡೆ ನಾಯಕರು ರಾಜ್ಯವ್ಯಾಪಿ ಹೋರಾಟದ ರೂಪುರೇಷೆ ಸಿದ್ಧಪಡಿಸಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್ ನಲ್ಲಿ ನಡೆದ ಬಿಜೆಪಿ ಜೆಡಿಎಸ್ ಮೈತ್ರಿ ನಾಯಕರ ಜಂಟಿ ಸಭೆಯಲ್ಲಿ ಹಲವು ವಿಚಾರಗಳ ಕುರಿತಂತೆ ಗಂಭೀರ ಚರ್ಚೆ ನಡೆದು ಆಡಳಿತ ರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಜಂಟಿಯಾಗಿ ಹೋರಾಟ ನಡೆಸಲು ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳ ಚುನಾವಣೆ ಹಾಗೂ ರೈತರಿಗೆ ಸರ್ಕಾರ ಘೋಷಿಸಿರುವ ಪರಿಹಾರದ ಕುರಿತು ಪ್ರಮುಖವಾಗಿ ಚರ್ಚೆ ನಡೆಯಿತು. ಅಲ್ಲದೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಗಳ ಪರವಾಗಿ ಕಾರ್ಯತಂತ್ರ ರೂಪಿಸುವುದು ಹಾಗೂ ಬಿಜೆಪಿ ಜೆಡಿಎಸ್ ನಡುವಿನ ಚುನಾವಣಾ ಸಮನ್ವಯದ ಬಗ್ಗೆಯೂ ನಾಯಕರು ಸಮಾಲೋಚನೆ ನಡೆಸಿದರು. ಪುಟ 2




ನಗರದ ರಾಡಿಸನ್ ಬ್ಲೂ ಖಾಸಗಿ ಹೋಟೆಲ್‌ನಲ್ಲಿ ಇಂದು ನಡೆದ ಎನ್‌ಡಿಎ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿರವರು ಉದ್ಘಾಟಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಜಗದೀಶ್ ಶೆಟ್ಟರ್, ಪ್ರತಿಪಕ್ಷ ನಾಯಕರುಗಳಾದ ಆರ್. ಅಶೋಕ್, ಛಲವಾದಿ ನಾರಾಯಣ ಸ್ವಾಮಿ, ಜೆಡಿಎಸ್ ಶಾಸಕ ಸುರೇಶ್‌ಬಾಬು ಮತ್ತಿತರರು ಉಪಸ್ಥಿತರಿದ್ದರು.

ಚಿನಿವಾರಪೇಟೆ - ಮುಂಬೈ, ಸೆಪ್ಟೆಂಬರ್ 26: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ | 1,54,420 | 22 ಕ್ಯಾರೆಟ್ - 10 ಗ್ರಾಂ 1,41,550 | ಬೆಳ್ಳಿ: 1 ಕೆ.ಜಿ. - 3,20,000

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)

# ಬಿಡಿಎ ವಾಣಿಜ್ಯ ಸಂಕೀರ್ಣಗಳಿಗೆ ಗ್ರಹಣ

ಮೂಲಕ ಒಟ್ಟು 65 ವರ್ಷಗಳ ಅವಧಿಗೆ ಖಾಸಗಿ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿ, ದಾಖಲೆಗಳೊಂದಿಗೆ ದೂರು ನೀಡಿದ್ದರು.

ನಂತರ ಸರ್ಕಾರ ಬದಲಾದ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆ ರದ್ದುಗೊಂಡಿತ್ತು. ಆದರೆ ಬಳಿಕ ಇದೇ ಯೋಜನೆಗೆ ಮರುಜೀವ ನೀಡಲಾಗಿದೆ ಎಂಬುದು ಎನ್.ಆರ್. ರಮೇಶ್ ಅವರ ಆರೋಪವಾಗಿದೆ.

**ಕಟ್ಟಡ ಕೆಡವಿದರು, ಹೊಸ ಕಟ್ಟಡ ಮಾತ್ರ ಇಲ್ಲ!**

ಮರುನಿರ್ಮಾಣಕ್ಕಾಗಿ ಕೆಲವು ಸಂಕೀರ್ಣಗಳ ಹಳೆಯ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ. ಆದರೆ ವರ್ಷಗಳು ಕಳೆದರೂ ಹೊಸ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿಲ್ಲ. ಇದರಿಂದ ಒಂದೆಡೆ ಸಾರ್ವಜನಿಕ ಆಸ್ತಿಯಿಂದ ನಿರೀಕ್ಷಿತ ಆದಾಯ ಬಾರದಂತಾಗಿದ್ದರೆ, ಮತ್ತೊಂದೆಡೆ ವ್ಯಾಪಾರ ಚಟುವಟಿಕೆಗಳಿಗೂ ಅಡ್ಡಿಯಾಗಿದೆ ಎಂಬ ಆಕ್ಷೇಪಗಳು ಕೇಳಿಬರುತ್ತಿವೆ.

ಮರುನಿರ್ಮಾಣ ಯೋಜನೆಯಡಿ ಈಖಖ ಅನ್ನು 1ರಿಂದ 2.3ಕ್ಕೆ ಹೆಚ್ಚಿಸುವ ಉದ್ದೇಶವಿದ್ದು, ಇಂದಿರಾನಗರದಲ್ಲಿ 10 ಅಂತಸ್ತಿನ ಕಚೇರಿ ಟವರ್ ಹಾಗೂ ಐದು ಅಂತಸ್ತಿನ ಶಾಪಿಂಗ್ ಟವರ್ ನಿರ್ಮಿಸುವ ಪ್ರಸ್ತಾವನೆ ಇದೆ. ಎಚ್ಎಸ್ಆರ್ ಲೇಔಟ್‌ನಲ್ಲಿ ಎಂಟು ಅಂತಸ್ತಿನ ಕಟ್ಟಡ ನಿರ್ಮಿಸುವ ಯೋಜನೆಯೂ ಇದೆ.

**700 ಕೋಟಿ ಹೂಡಿಕೆ, 40 ಕೋಟಿ ಆದಾಯ ನಿರೀಕ್ಷೆ:**

ಕಕಕ ಮಾದರಿಯಲ್ಲಿ ಖಾಸಗಿ ಸಂಸ್ಥೆಗಳು ಸುಮಾರು 700 ಕೋಟಿ ಹೂಡಿಕೆ ಮಾಡಲಿದ್ದು, ಮರುನಿರ್ಮಾಣದ ಬಳಿಕ ಬಿಡಿಎಗೆ ವಾರ್ಷಿಕ 38ರಿಂದ 40 ಕೋಟಿ ಆದಾಯ ಬರಲಿದೆ ಎಂಬ ಲೆಕ್ಕಾಚಾರವನ್ನು ಯೋಜನೆಯಲ್ಲಿ ನೀಡಲಾಗಿದೆ.

ಇಂದಿರಾನಗರದಲ್ಲಿ ಆದಾಯ ಹಂಚಿಕೆ 65:35ರ ಅನುಪಾತದಲ್ಲಿದ್ದು, ಉಳಿದ ಯೋಜನೆಗಳಲ್ಲಿ 70:30ರ ಅನುಪಾತದ ಪ್ರಸ್ತಾವನೆ ಇದೆ ಎನ್ನಲಾಗಿದೆ. ಗುತ್ತಿಗೆ ಅವಧಿ ಪೂರ್ಣಗೊಂಡ ಬಳಿಕ ಅಭಿವೃದ್ಧಿಪಡಿಸಿದ ಆಸ್ತಿಗಳು ಬಿಡಿಎಗೆ ಮರಳಲಿವೆ ಎಂಬುದು ಯೋಜನೆಯ ಪ್ರಮುಖ ಅಂಶ.

**ವ್ಯಾಪಾರಿಗಳ ವಿರೋಧ**

ಕೋರಮಂಗಲ ಹಾಗೂ ಎಚ್ಎಸ್ಆರ್ ಲೇಔಟ್ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ವ್ಯಾಪಾರಿಗಳು ಮತ್ತು ನಿವಾಸಿಗಳ ಸಂಘಟನೆಗಳು ಯೋಜನೆಗೆ ವಿರೋಧ ವ್ಯಕ್ತಪಡಿಸಿವೆ. ಮರುನಿರ್ಮಾಣದ ಬಳಿಕ ಅಂಗಡಿಗಳ ಬಾಡಿಗೆ ಹೆಚ್ಚಾಗುವ ಸಾಧ್ಯತೆ, ಸ್ಥಳೀಯ ಸಣ್ಣ ವ್ಯಾಪಾರಿಗಳಿಗೆ ತೊಂದರೆ ಹಾಗೂ ವಾಹನ ದಟ್ಟಣೆ ಹೆಚ್ಚಾಗುವ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ.

**ನ್ಯಾಯಾಲಯದ ಮೆಟ್ಟಿಲೇರಿದ ವಿವಾದ**

ಈ ಟೆಂಡರ್ ಪ್ರಕ್ರಿಯೆ ವಿರುದ್ಧ ಎನ್.ಆರ್.ರಮೇಶ್ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು, ರಾಜ್ಯ ಹೈಕೋರ್ಟ್‌ನಲ್ಲಿಯೂ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ. ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿದ್ದು, ಬಿಡಿಎ ಅಧಿಕಾರಿಗಳು ಸರ್ಕಾರದ ಆದೇಶದಂತೆ ಕ್ರಮ ಕೈಗೊಂಡಿರುವುದಾಗಿ ನ್ಯಾಯಾಲಯಕ್ಕೆ ಉತ್ತರಿಸಿರುವುದಾಗಿ ಆರೋಪಿಸಲಾಗಿದೆ.

ಬಿಡಿಎ ಈಗಾಗಲೇ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ತನ್ನ ಅಮೂಲ್ಯ ವಾಣಿಜ್ಯ ಆಸ್ತಿಗಳನ್ನು ದೀರ್ಘಾವಧಿಗೆ ಖಾಸಗಿ ಸಂಸ್ಥೆಗಳಿಗೆ ನೀಡುವ ಯೋಜನೆಯ ಅಗತ್ಯವೇನು ಎಂಬ ಪ್ರಶ್ನೆಯೂ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಎಂಟು ವರ್ಷಗಳ ಬಳಿಕವೂ ನಿರ್ಮಾಣ ಪೂರ್ಣವಾಗದಿರುವ ಹಿನ್ನೆಲೆಯಲ್ಲಿ ಈ ಏಳು ಸಂಕೀರ್ಣಗಳು ಯಾವಾಗ ಪೂರ್ಣಗೊಳ್ಳಲಿವೆ ಸಾರ್ವಜನಿಕರ ಬಳಕೆಗೆ ಯಾವಾಗ ಮುಕ್ತವಾಗಲಿವೆ ಬಿಡಿಎಗೆ ನಿರೀಕ್ಷಿತ ಆದಾಯ ಯಾವಾಗ ಬರಲಿದೆ ಎಂಬ ಪ್ರಶ್ನೆಗಳಿಗೆ ಸರ್ಕಾರ ಮತ್ತು ಬಿಡಿಎ ಸ್ಪಷ್ಟ ಉತ್ತರ ನೀಡಬೇಕಿದೆ.

# ಇರಾನ್ ಕದನ ವಿರಾಮ

ಅವರು ವಿಶ್ವಸಂಸ್ಥೆಯ ಸಭೆಯ ವೇಳೆ ಅಮೆರಿಕಕ್ಕೆ ಏಳು ದಿನಗಳ ಯೋಜನೆಯನ್ನು ಮಧ್ಯವರ್ತಿಗಳ ಮೂಲಕ ಸಲ್ಲಿಸಿರುವುದಾಗಿ ತಿಳಿಸಿದ್ದರು. ಅಮೆರಿಕ ತನ್ನ ಇರಾನ್ ಬಂದರುಗಳ ಮೇಲಿನ ನೌಕಾ ನಿರ್ಬಂಧವನ್ನು ತೆರವುಗೊಳಿಸಿ, ಇರಾನ್ ತೈಲ ರಫ್ತಿನ ಮೇಲಿನ ನಿರ್ಬಂಧಗಳನ್ನು ಸಡಿಲಿಸಿ ಹಾಗೂ ಪ್ರದೇಶದಲ್ಲಿ ಕದನ ವಿರಾಮಕ್ಕೆ ಸಮ್ಮತಿಸಿದರೆ, ಏಳನೇ ದಿನ ಹೊರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವುದಾಗಿ ಇರಾನ್ ಪ್ರಸ್ತಾವಿಸಿದೆ.

ಇರಾನ್‌ನ ಯೋಜನೆಯ ಪ್ರಕಾರ, ಅಮೆರಿಕ ಅಗತ್ಯ ಷರತ್ತುಗಳನ್ನು ಒಪ್ಪಿಕೊಂಡ ಬಳಿಕ ಕದನ ಸ್ಥಗಿತಗೊಳ್ಳಬೇಕು. ಇರಾನ್‌ನ ಬಂದರುಗಳ ಮೇಲಿನ ಅಮೆರಿಕದ ನೌಕಾ ನಿರ್ಬಂಧ ತೆರವಾಗಬೇಕು. ಇರಾನ್‌ನ ತೈಲ ಮಾರಾಟದ ಮೇಲಿನ ನಿರ್ಬಂಧಗಳನ್ನು ಸಡಿಲಿಸಬೇಕು. ಯುದ್ಧದಿಂದ ಸ್ಥಗಿತಗೊಂಡಿರುವ ರಾಜತಾಂತ್ರಿಕ ಸಂಪರ್ಕ ಮತ್ತೆ ಆರಂಭವಾಗಬೇಕು. ಏಳನೇ ದಿನ ಹೋರ್ಮುಜ್ ಜಲಸಂಧಿಯಲ್ಲಿ ಸಾಮಾನ್ಯ ನೌಕಾ ಸಂಚಾರ ಪುನರಾರಂಭವಾಗಬೇಕು. ಬಳಿಕ ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಅಮೆರಿಕ–ಇರಾನ್ ಮಾತುಕತೆ ಪುನರಾರಂಭಿಸುವುದು ಯೋಜನೆಯ ಪ್ರಮುಖ ಅಂಶವಾಗಿದೆ.

ಕೆಲವು ವರದಿಗಳ ಪ್ರಕಾರ, ಇರಾನ್ ತನ್ನ ಸ್ಥಗಿತಗೊಂಡಿರುವ ಆಸ್ತಿಗಳನ್ನು ಬಿಡುಗಡೆ ಮಾಡಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿದೆ. ಈ ಮೊತ್ತವನ್ನು ಕನಿಷ್ಠ 12 ಬಿಲಿಯನ್ ಡಾಲರ್ ಎಂದು ವರದಿಯಾಗಿದೆ. ಯೆಮೆನ್ ಸೇರಿದಂತೆ ಪ್ರದೇಶದ ಇತರ ರಣರಂಗಗಳಲ್ಲಿಯೂ ಹೋರಾಟ ಸ್ಥಗಿತಗೊಳಿಸುವುದು ಇರಾನ್‌ನ ಬೇಡಿಕೆಗಳಲ್ಲಿ ಸೇರಿದೆ ಎಂದು ವರದಿಗಳು ತಿಳಿಸಿವೆ.

**ಟ್ರಂಪ್ ನಿಲುವು ಏನು?**

ಇರಾನ್‌ನ ಪ್ರಸ್ತಾವವನ್ನು ಟ್ರಂಪ್ ಒಪ್ಪಿಲ್ಲ. ವಾಲ್ ಸ್ಟ್ರೀಟ್ ಜರ್ನಲ್ ಪ್ರಕಾರ, ಇರಾನ್ ಮೇಲೆ ಮುಂದುವರಿದಿರುವ ಆರ್ಥಿಕ ಮತ್ತು ನೌಕಾ ಒತ್ತಡವನ್ನು ಕಡಿಮೆ ಮಾಡುವ ಯಾವುದೇ ತಕ್ಷಣದ ಕ್ರಮಕ್ಕೆ ಅಮೆರಿಕ ಸಿದ್ಧವಿಲ್ಲ. ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವಂತಹ ಅಮೆರಿಕದ ಬೇಡಿಕೆಗಳನ್ನು ಒಪ್ಪಿಕೊಳ್ಳುವ ಬಗ್ಗೆ ಟ್ರಂಪ್ ಅನುಮಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಟ್ರಂಪ್ ಅವರ ಈ ನಿಲುವು ಇತ್ತೀಚಿನ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಭಾಷಣದ ಹಿನ್ನೆಲೆಯಲ್ಲಿ ಬಂದಿದೆ. ಸೆಪ್ಟೆಂಬರ್ 22ರಂದು ಮಾತನಾಡಿದ್ದ ಟ್ರಂಪ್, ಇರಾನ್‌ನೊಂದಿಗೆ ಒಪ್ಪಂದ ಸಾಧ್ಯವಾಗದಿದ್ದರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದರು. ನವೆಂಬರ್ ಮಧ್ಯಂತರ ಚುನಾವಣೆಗಳ ನಂತರ ಒಪ್ಪಂದದ ಸಾಧ್ಯತೆಯನ್ನೂ ಅವರು ಪ್ರಸ್ತಾಪಿಸಿದ್ದರು.

**ಮಧ್ಯವರ್ತಿಯಾಗಿ ಕತಾರ್**

ಅಮೆರಿಕ ಮತ್ತು ಇರಾನ್ ನಡುವೆ ನೇರ ಮಾತುಕತೆ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಕತಾರ್ ಮಧ್ಯವರ್ತಿಯಾಗಿ ಸಂದೇಶಗಳ ವಿನಿಮಯಕ್ಕೆ ನೆರವಾಗುತ್ತಿದೆ. ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿಯೂ ಎರಡೂ ದೇಶಗಳ ನಡುವೆ ಪರೋಕ್ಷ ಸಂಪರ್ಕ ಮುಂದುವರಿದಿತ್ತು. ಆದರೆ ಮಾತುಕತೆಯಲ್ಲಿ ಮಹತ್ವದ ರಾಜತಾಂತ್ರಿಕ ಒಪ್ಪಂದ ಇನ್ನೂ ಸಾಧ್ಯವಾಗಿಲ್ಲ ಎಂದು ವರದಿಗಳು ತಿಳಿಸಿವೆ. ಇರಾನ್ ಮತ್ತು ಒಮಾನ್ ನಡುವೆ ಇರುವ ಹೋರ್ಮುಜ್ ಜಲಸಂಧಿ ಜಾಗತಿಕ ತೈಲ ಮತ್ತು ಅನಿಲ ಸಾಗಣೆಯ ಪ್ರಮುಖ ಸಮುದ್ರ ಮಾರ್ಗವಾಗಿದೆ. ಈ ಮಾರ್ಗದಲ್ಲಿ ನೌಕಾ ಸಂಚಾರಕ್ಕೆ ಅಡ್ಡಿ ಉಂಟಾದರೆ ಜಾಗತಿಕ ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಸಂಘರ್ಷದಿಂದ ಈಗಾಗಲೇ ತೈಲ ಸಾಗಣೆ ಮತ್ತು ಇಂಧನ ಬೆಲೆಗಳ ಬಗ್ಗೆ ಜಾಗತಿಕ ಆತಂಕ ಹೆಚ್ಚಾಗಿದೆ.

ಇರಾನ್‌ನ ಹೊಸ ಏಳು ದಿನಗಳ ಯೋಜನೆಗೆ ಜೂನ್‌ನಲ್ಲಿ ಅಮೆರಿಕ–ಇರಾನ್ ನಡುವೆ ರೂಪುಗೊಂಡಿದ್ದ ತಿಳುವಳಿಕೆ ಒಪ್ಪಂದ ಹಿನ್ನೆಲೆಯಾಗಿದೆ. ಆ ಒಪ್ಪಂದದಲ್ಲಿ ಸೇನಾ ಕಾರ್ಯಾಚರಣೆ ಸ್ಥಗಿತಗೊಳಿಸುವುದು, ಹೋರ್ಮುಜ್ ಮೂಲಕ ನೌಕಾ ಸಂಚಾರಕ್ಕೆ ಅವಕಾಶ ನೀಡುವುದು ಮತ್ತು ಪರಮಾಣು ವಿಚಾರದ ಕುರಿತು ಮಾತುಕತೆಗೆ ಸಮಯ ಕಲ್ಪಿಸುವ ಅಂಶಗಳಿದ್ದವು. ಆದರೆ ನಂತರ ಸಂಘರ್ಷ ಮತ್ತೆ ತೀವ್ರಗೊಂಡ ಹಿನ್ನೆಲೆಯಲ್ಲಿ ಆ ವ್ಯವಸ್ಥೆ ಮುಂದುವರಿಯಲಿಲ್ಲ. ಹೊಸ ಪ್ರಸ್ತಾವವು ಅದೇ ಮಾದರಿಯನ್ನು ಕಡಿಮೆ ಅವಧಿಯಲ್ಲಿ ಜಾರಿಗೊಳಿಸುವ ಪ್ರಯತ್ನವಾಗಿದೆ ಎಂದು ವರದಿಗಳು ವಿಶ್ಲೇಷಿಸಿವೆ.

**ಇರಾನ್ ಷರತ್ತುಗಳೇನು?**

- **ಪಶ್ಚಿಮ ಏಷ್ಯಾದಲ್ಲಿ ಹೋರಾಟ ಸ್ಥಗಿತ**
- **ಇರಾನ್ ಬಂದರುಗಳ ಮೇಲಿನ ನೌಕಾ ನಿರ್ಬಂಧ ತೆರವು**
- **ಇರಾನ್ ತೈಲ ರಫ್ತಿನ ಮೇಲಿನ ನಿರ್ಬಂಧ ಸಡಿಲಿಕೆ**
- **ಸ್ಥಗಿತಗೊಂಡಿರುವ ಇರಾನ್ ಆಸ್ತಿಗಳ ಬಿಡುಗಡೆಗೆ ಬೇಡಿಕೆ**
- **ಹೋರ್ಮುಜ್ ಜಲಸಂಧಿ ಪುನಃ ತೆರೆಯುವುದು**
- **ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಮಾತುಕತೆ ಪುನರಾರಂಭ**
- **ಕತಾರ್ ಮೂಲಕ ಅಮೆರಿಕ–ಇರಾನ್ ಸಂದೇಶ ವಿನಿಮಯ**
- **ಇರಾನ್ ವಿರುದ್ಧ ಮತ್ತೆ ಅಮೆರಿಕದ ದಾಳಿ ನಡೆಯುವ ಸಾಧ್ಯತೆ ಕುರಿತು ವರದಿ**

ವಿಶ್ವದ ಕಣ್ಣು ಹೊರ್ಮುಜ್ ಮೇಲೆ

ಇರಾನ್‌ನ ಪ್ರಸ್ತಾವವನ್ನು ಅಮೆರಿಕ ಒಪ್ಪದಿರುವುದರಿಂದ ಸಂಘರ್ಷಕ್ಕೆ ತಕ್ಷಣದ ವಿರಾಮ ಸಿಗುವ ನಿರೀಕ್ಷೆ ಮತ್ತಷ್ಟು ಅನಿಶ್ಚಿತವಾಗಿದೆ. ಒಂದು ಕಡೆ ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಸಾಮಾನ್ಯಗೊಳಿಸುವ ಒತ್ತಡವಿದ್ದರೆ, ಮತ್ತೊಂದೆಡೆ ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಅಮೆರಿಕದ ಕಠಿಣ ನಿಲುವು ಮುಂದುವರಿದಿದೆ. ಹೀಗಾಗಿ ಕದನ ವಿರಾಮ, ತೈಲ ನಿರ್ಬಂಧ, ಹೊರ್ಮುಜ್ ಜಲಸಂಧಿ ಮತ್ತು ಪರಮಾಣು ಮಾತುಕತೆ ಈ ನಾಲ್ಕು ವಿಷಯಗಳೇ ಮುಂದಿನ ರಾಜತಾಂತ್ರಿಕ ಬೆಳವಣಿಗೆಯ ಕೇಂದ್ರಬಿಂದುಗಳಾಗಿವೆ.

ಸೂಚನೆ: ಟ್ರಂಪ್ ಅವರು ಯೋಜನೆಯನ್ನು ತಿರಸ್ಕರಿಸಿ ಚುನಾವಣೆ ಬಳಿಕ ದಾಳಿ ಪುನರಾರಂಭ ನಿರೀಕ್ಷಿಸಿದ್ದಾರೆ ಎಂಬುದು ಪ್ರಸ್ತುತ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮತ್ತು ಅದನ್ನು ಉಲ್ಲೇಖಿಸಿದ ಇತರ ಮಾಧ್ಯಮಗಳ ಆಧಾರಿತ ಮಾಹಿತಿ; ರಾಯಿಟರ್ಸ್ ವರದಿಯು ಈ ನಿರ್ದಿಷ್ಟ WSJ ವರದಿಯನ್ನು ತಕ್ಷಣ ಸ್ವತಂತ್ರವಾಗಿ ಪರಿಶೀಲಿಸಲು ಸಾಧ್ಯವಾಗಿಲ್ಲ ಎಂದು ಸೂಚಿಸಿದೆ.

# ಡಿಸೆಂಬರ್‌ಗೆ ಜಿಬಿಎ ಚುನಾವಣೆ

ಗಳನ್ನು ಡಿಸೆಂಬರ್‌ನಲ್ಲಿ ನಡೆಸುವಂತೆ ಆದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಚುನಾವಣಾ ಸಿದ್ಧತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ ಎನ್ನಲಾಗಿದ್ದು, ಜಿಬಿಎ ಮುಖ್ಯ ಆಯುಕ್ತರು ಹಾಗೂ ಐದು ನಗರ ಪಾಲಿಕೆಗಳ ಆಯುಕ್ತರ ಮಟ್ಟದಲ್ಲಿ ಚುನಾವಣಾ ಸಂಬಂಧಿತ ಸಿದ್ಧತೆಗಳಿಗೆ ಒತ್ತು ನೀಡಲಾಗುತ್ತಿದೆ.

**ಕಾಮಗಾರಿಗಳಿಗೆ ವೇಗ:**

ಚುನಾವಣೆ ಘೋಷಣೆಯಾದ ಬಳಿಕ ಅಭಿವೃದ್ಧಿ ಕಾಮಗಾರಿಗಳಿಗೆ ಹೊಸ ನಿರ್ಬಂಧಗಳು ಎದುರಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಈಗಾಗಲೇ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎನ್ನಲಾಗಿದೆ.

ರಸ್ತೆ, ಪಾದಚಾರಿ ಮಾರ್ಗ, ಬೀದಿದೀಪ, ತ್ಯಾಜ್ಯ ನಿರ್ವಹಣೆ, ಕುಡಿಯುವ ನೀರು ಸೇರಿದಂತೆ ನಾಗರಿಕ ಮೂಲಸೌಕರ್ಯ ಕಾಮಗಾರಿಗಳ ಪ್ರಗತಿಯನ್ನು ವೇಗಗೊಳಿಸುವುದು ಸಿದ್ಧತೆಯ ಪ್ರಮುಖ ಭಾಗವಾಗಿದೆ. ಇತ್ತೀಚಿನ ದಿನಗಳಲ್ಲಿ ಸಚಿವ ಕೃಷ್ಣ ಬೈರೇಗೌಡ ಅವರು ನಗರದ ರಸ್ತೆ ಹಾಗೂ ಬೀದಿದೀಪ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ, ವಿಳಂಬವಾಗಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದ್ದರು.

**SIR ಮುಗಿದ ಬಳಿಕ ಚುನಾವಣಾ ಪ್ರಕ್ರಿಯೆ;**

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (SIR) ಈಗ ಚುನಾವಣಾ ಸಿದ್ಧತೆಯ ಪ್ರಮುಖ ಹಂತವಾಗಿದೆ. ಜಿಬಿಎ ವ್ಯಾಪ್ತಿಯಲ್ಲೂ SIR ವಿಚಾರದಲ್ಲಿ ವಿಚಾರಣೆ ಮತ್ತು ದಾಖಲೆ ಪರಿಶೀಲನೆ ಮುಂದುವರಿದಿದೆ. ಸೆ.25ರಂದು ಜಿಬಿಎ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಅವರು ಸುಮಾರು 13.40 ಲಕ್ಷ ಪ್ರಕರಣಗಳ ವಿಚಾರಣೆ ಪೂರ್ಣಗೊಂಡಿದ್ದು, 2.56 ಲಕ್ಷ ಪ್ರಕರಣಗಳು ಬಾಕಿ ಇರುವುದಾಗಿ ತಿಳಿಸಿದ್ದಾರೆ.

GBA ಅಧಿಕೃತ ವೆಬ್‌ಸೈಟ್‌ನಲ್ಲೂ SIR ಕರಡು ಪಟ್ಟಿ, ಅಂತಿಮ ಮತದಾರರ ಪಟ್ಟಿ, ಕ್ಲೇಮ್ಸ್ ಆಬ್ಜೆಕ್ಷನ್ಸ್ ಹಾಗೂ ಚುನಾವಣಾ ಸಂಬಂಧಿತ ಮಾಹಿತಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.

SIR ಪ್ರಕ್ರಿಯೆ ಪೂರ್ಣಗೊಂಡು ಅಂತಿಮ ಮತದಾರರ ಪಟ್ಟಿ ಸಿದ್ಧವಾದ ಬಳಿಕ ಜಿಬಿಎ ಚುನಾವಣಾ ಪ್ರಕ್ರಿಯೆ ಮತ್ತಷ್ಟು ವೇಗ ಪಡೆಯುವ ನಿರೀಕ್ಷೆ ಇದೆ.

**5 ಪಾಲಿಕೆಗಳಿಗೆ ಒಂದೇ ಚುನಾವಣಾ ಕಸರತ್ತು;**

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ 369 ವಾರ್ಡ್‌ಗಳ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಯಬೇಕಿದೆ. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಡಿಸೆಂಬರ್ ಅಂತ್ಯದೊಳಗೆ ಚುನಾವಣೆ ಪೂರ್ಣಗೊಳಿಸುವ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗ, ಜಿಬಿಎ ಹಾಗೂ ಸರ್ಕಾರದ ಮೇಲಿದೆ.

ಇದೀಗ SIR ಅಂತಿಮ ಹಂತದತ್ತ ಸಾಗುತ್ತಿರುವ ಬೆನ್ನಲ್ಲೇ ಆಡಳಿತಾತ್ಮಕ ಸಿದ್ಧತೆಗಳೂ ಸಮಾನಾಂತರವಾಗಿ ನಡೆಯುತ್ತಿರುವುದು ಬೆಂಗಳೂರು ನಗರಪಾಲಿಕೆ ಚುನಾವಣೆ ಸಮೀಪಿಸುತ್ತಿರುವ ಸೂಚನೆ ಎಂಬ ಚರ್ಚೆ ರಾಜಕೀಯ ಹಾಗೂ ಆಡಳಿತ ವಲಯದಲ್ಲಿ ಆರಂಭವಾಗಿದೆ.

ಆದರೆ, ಡಿಸೆಂಬರ್‌ನಲ್ಲಿ ಚುನಾವಣೆ ನಡೆಯುವುದು ನ್ಯಾಯಾಲಯದ ನಿರ್ದೇಶನವಾಗಿದ್ದರೂ, ನಿಖರ ಚುನಾವಣಾ ದಿನಾಂಕವನ್ನು ರಾಜ್ಯ ಚುನಾವಣಾ ಆಯೋಗವೇ ಅಧಿಕೃತವಾಗಿ ಪ್ರಕಟಿಸಬೇಕಿದೆ.

# ಸಿಎಂ ಹೇಳಿಕೆಗೆ ದೋಸ್ತಿ ಕಿಡಿ

ದೇವರೇ ಕಾಪಾಡಬೇಕು. ಎಂತಹ ಮುಖ್ಯಮಂತ್ರಿಗಳನ್ನು ಇಟ್ಟುಕೊಂಡಿದ್ದಾರೆ ಎಂದು ಕಾಂಗ್ರೆಸ್ ಶಾಸಕರಿಗೆ ಅನ್ನಿಸಿಕೊಳ್ಳಬೇಕು ಎಂದು ವಾಗ್ದಾಳಿ ನಡೆಸಿದರು.

ಸದನದಲ್ಲೇ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆ ಖಂಡಿಸಿ, 224 ಶಾಸಕರು ಪ್ರತಿಭಟನೆ ನಡೆಸಬೇಕಾಗಿತ್ತು ಕಾಂಗ್ರೆಸ್‌ನವರು ಇದನ್ನು ಪ್ರಶ್ನಿಸಬೇಕಿತ್ತು. ಸದನದಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿರುವವರು ಇಂತಹ ಹೇಳಿಕೆ ನೀಡಿರುವುದು ಸರಿಯೇ ಎಂಬುದನ್ನು ಕಾಂಗ್ರೆಸ್‌ನವರನ್ನೇ ಕೇಳಬೇಕು ಎಂದು ಹೇಳಿದರು.

**ಇದು ಯಾರಿಗೂ ಗೌರವ ತರುವ ಸಂಗತಿಯಲ್ಲ :**

ಶಾಸಕ ಸುರೇಶ್ ಕುಮಾರ್ ಮಾತನಾಡಿ, ಮುಖ್ಯಮಂತ್ರಿ ನೀಡಿರುವ ಉತ್ತರ ಲಘುವಾಗಿಯೇ ಇರಬಹುದು. ಆದರೆ ಈ ರೀತಿಯ ಉತ್ತರ ವಿಧಾನಸಭಾ ವೇದಿಕೆಯಿಂದ ಮಾತನಾಡುವುದು ಯಾರಿಗೂ ಘನತೆ ತರುವ ವಿಚಾರವಲ್ಲ. ನಾಡಿನ ಮುಖ್ಯಮಂತ್ರಿ ಈ ರೀತಿ ಹೇಳಬಾರದಿತ್ತು. ಇದು ಯಾರಿಗೂ ಗೌರವ ತರುವ ಸಂಗತಿಯಲ್ಲ. ಸದನದ ಗಾಂಭೀರ್ಯತೆಗೆ ತಕ್ಕ ಸಂಗತಿಯಲ್ಲ. ನಾನು ಸದನದಲ್ಲಿ ಇದ್ದಿದ್ದರೆ ಕೂಡಲೇ ಪ್ರತಿಕ್ರಿಯಿಸುತ್ತಿದ್ದೆ ಎಂದು ತಿಳಿಸಿದ್ದಾರೆ.

ಈಗ ಮುಖ್ಯಮಂತ್ರಿಗಳು ಈ ರೀತಿ ಹೇಳಬಾರದನ್ನು ಹೇಳಿಯಾಗಿದೆ. ಈಗ ಇದು ಸಾರ್ವಜನಿಕರೆಲ್ಲರ ಕೆಟ್ಟ ಕುತೂಹಲಕ್ಕೆ ಕಾರಣವಾಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಜನರ ಮುಂದೆ ಇಡಲು ಶ್ವೇತಪತ್ರ ಹೊರಡಿಸುತ್ತೀರೋ ಇಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಎರಡೆರಡು ಮದುವೆ (ಅಥವಾ ಇನ್ನೂ ಹೆಚ್ಚು) ಆಗಿರುವ, ಎರಡೆರಡು ಮನೆ ಇಟ್ಟುಕೊಂಡಿರುವ ಶಾಸಕರ ಹೆಸರರೂಗಳನ್ನು ದಯವಿಟ್ಟು ಬಹಿರಂಗ ಮಾಡಿ. ಇಲ್ಲದಿದ್ದರೆ ರಾಜ್ಯದ ಜನತೆ ಎಲ್ಲರನ್ನೂ ಅನುಮಾನ ದೃಷ್ಟಿಯಿಂದ ಕಾಣುವ ಅಥವಾ ಅಪಹಾಸ್ಯ ಮಾಡುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

**ಇದು ಬಾಲಿಶ ಹೇಳಿಕೆ :**

ತುರುವೇಕೆರೆ ಜೆಡಿಎಸ್ ಶಾಸಕ ಎಂ.ಟಿ. ಕೃಷ್ಣಪ್ಪ ಮಾತನಾಡಿ, ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿದ್ದು, ಸಿಎಂ ಸ್ಥಾನದಲ್ಲಿರುವವರು ಇಂತಹ ಬಾಲಿಶ ಹಾಗೂ ಜವಾಬ್ದಾರಿಯಿಲ್ಲದ ಹೇಳಿಕೆಗಳನ್ನು ನೀಡಬಾರದು ಎಂದು ತಿರುಗೇಟು ನೀಡಿದ್ದಾರೆ.

# ಕಬಡ್ಡಿಯಲ್ಲಿ ಭಾರತ ಮಹಿಳಾ ತಂಡಕ್ಕೆ ಸ್ವರ್ಣ

ಗೇಮ್ಸ್‌ನಲ್ಲಿ ಭಾರತ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದರೆ, ಇರಾನ್ ಚಿನ್ನ ಗೆದ್ದಿತ್ತು.

ಇದಕ್ಕೂ ಮೊದಲು ಸವನ್ ಬರ್ವಾಲ್ ಪುರುಷರ ಮ್ಯಾರಥಾನ್‌ನಲ್ಲಿ ಐತಿಹಾಸಿಕ ಬೆಳ್ಳಿ ಪದಕ ಗೆದ್ದರೆ, ಜೋಶ್ನಾ ಚಿನ್ನಪ್ಪ ಮತ್ತು ವೇಲವನ್ ಸೆಂಥಿಲ್‌ಕುಮಾರ್ ಜೋಡಿ ಸ್ಕ್ವಾಷ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು. ಮಿಶ್ರ ಡಬಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಚಿನ್ನಪ್ಪ ಮತ್ತು ಸೆಂಥಿಲ್ ಸೋಲನುಭವಿಸಿದರು. 44 ವರ್ಷಗಳ ನಂತರ ಪುರುಷರ ಮ್ಯಾರಥಾನ್ ನಲ್ಲಿ ಭಾರತದ ಪದಕ ಬರವನ್ನು ನೀಗಿಸುವಲ್ಲಿ ಬರ್ವಾಲ್ ಯಶಸ್ವಿಯಾದರು.

ಏಷ್ಯನ್ ಗೇಮ್ಸ್ ನಲ್ಲಿ ಕಬಡ್ಡಿ ವಿಭಾಗದಲ್ಲಿ ಭಾರತ ಗೆದ್ದಿರುವ ಚಿನ್ನದ ಪದಕಗಳ ಸಂಖ್ಯೆ ಈಗ 12ಕ್ಕೆ ಏರಿಕೆಯಾಗಿದೆ. ಇದರಲ್ಲಿ ಪುರುಷರ ತಂಡವು 1990ರಿಂದ ಎಂಟು ಚಿನ್ನದ ಪದಕಗಳನ್ನು ಗೆದ್ದಿದೆ. ಇಂದು ಪುರುಷರ ಕಬಡ್ಡಿ ತಂಡವೂ ಚಿನ್ನದ ಪದಕಕ್ಕಾಗಿ ನಡೆಯಲಿರುವ ಫೈನಲ್‌ನಲ್ಲಿ ಇರಾನ್ ವಿರುದ್ಧ ಸೆಣಸಲಿದೆ. ಹೀಗಾಗಿ ಭಾರತ ಮತ್ತೊಂದು ಚಿನ್ನದ ನಿರೀಕ್ಷೆಯಲ್ಲಿದೆ.

ಸದ್ಯ ಭಾರತವು 3 ಚಿನ್ನ, 11 ಬೆಳ್ಳಿ ಮತ್ತು 13 ಕಂಚು ಸೇರಿ ಒಟ್ಟು 27 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿತ್ತು.

**ಶೂಟಿಂಗ್ ನಲ್ಲಿ ಮುಂದುವರಿದ ಪದಕ ಬೇಟೆ**

ಕರ್ನಾಟಕದ ತಿಲೋತ್ತಮ ಸೇನ್, ವಿದರ್ಶಾ ವಿನೋದ್ ಮತ್ತು ಆಶಿ ಚೌಕ್ಸಿ ಒಳಗೊಂಡ ಭಾರತ ತಂಡ ಶೂಟಿಂಗ್ ವಿಭಾಗದಲ್ಲಿ ಭಾರತಕ್ಕೆ 11ನೇ ಪದಕ ತಂದುಕೊಟ್ಟರು. ಈ ಮೂವರು 50 ಮೀ. ರೈಫಲ್ 3 ಪೊಸಿಷನ್ ತಂಡ ಸ್ಪರ್ಧೆಯಲ್ಲಿ 1763 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಗಳಿಸಿದರು. ಆದರೆ ವೈಯಕ್ತಿಕ ವಿಭಾಗದಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ಎಡವಿದರು.

## ಜೆನ್‌ಜಿ ಹೆಸರು ತೆಗೆಯುವ ಹುನ್ನಾರ

ದೇಶದ ಜೆನ್‌ಜಿ ಮೋದಿ ಅವರ ವಿರುದ್ಧ ಇದೆ. ಹಾಗಾಗಿ ಜೆನ್‌ಜಿ ಮತದಾರರನ್ನು ದೂರವಿಡುವ ಪ್ರಯತ್ನ ನಡೆಯುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಸಿಇಸಿ ವಿರುದ್ಧ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಮೋದಿ ಯಾವ ಅಲೆಯೂ ಇಲ್ಲ, ಅಮಿತ್ ಶಾ ಅವರ ಚಾಣಾಕ್ಷತನವೂ ಇಲ್ಲ. ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಿದರು.

ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ನಾಯಕನಿಗೂ ಮತದಾನ ಮಾಡುವ ಹಕ್ಕಿದೆ. ಆದರೆ ಬಿಜೆಪಿ ಸಂವಿಧಾನವನ್ನೇ ಬುಡಮೇಲು ಮಾಡಲು ಹೊರಟಿದೆ ಎಂದು ಹರಿಪ್ರಸಾದ್ ದೂರಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅಜ್ಞಾನಿ ಕುಮಾರ್ ಎಂದು ಕಿಡಿಕಾರಿದ ಅವರು, ನೈಜ ಮತದಾರರ ಹಕ್ಕನ್ನು ಕದಿಯುವ ಪ್ರಯತ್ನ ನಡೆದಿದೆ. ಮೋದಿ, ಅಮಿತ್ ಶಾ ಮಾತನ್ನು ಜ್ಞಾನೇಶ್‌ಕುಮಾರ್ ಕೇಳುತ್ತಿದ್ದಾರೆ ಎಂದು ಆರೋಪಿಸಿದರು.

ಸಾಂವಿಧಾನಿಕ ಪದವಿಯಲ್ಲಿರುವವರು ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆ. ಇದರ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದೇವೆ. ಸಂವಿಧಾನ ರಕ್ಷಣೆಗೆ ನಮ್ಮ ಹೋರಾಟ ಎಂದು ಹರಿಪ್ರಸಾದ್ ಹೇಳಿದರು

ರಾಜ್ಯದಲ್ಲೂ 1 ಕೋಟಿ 50 ಲಕ್ಷ ಮತದಾರರನ್ನು ಕೈಬಿಡಲಾಗಿದೆ. ಅರ್ಹರನ್ನು ಮತದಾನದಿಂದ ದೂರ ಇಡುವ ಪ್ರಯತ್ನ ಆಗುತ್ತಿದೆ ಎಂದರು.

**ಪೊಲೀಸರ ವಿರುದ್ಧ ಕಿಡಿ**

ಈ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಬೂತದಹನ ಮಾಡಲು ತಂಡ ವಸ್ತುಗಳನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದಾರೆ. ಕೂಡಲೇ ಅದನ್ನು ತಂದುಕೊಡಬೇಕು. ಇಲ್ಲವಾದಲ್ಲಿ ಪೊಲೀಸರು ವಿರುದ್ಧವೂ ಹೋರಾಟ ಮಾಡುತ್ತೇವೆ ಎಂದು ಹರಿಪ್ರಸಾದ್ ಹೇಳಿದರು.

# ಜ್ಞಾನೇಶ್ ವಜಾಕ್ಕೆ ಕೈ ಆಗ್ರಹ

## ಅಳಿವು-ಉಳಿವಿನ ಪ್ರಶ್ನೆ:ಸಿದ್ದು

ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ಅಕ್ರಮ ಎಸಗಿರುವ ಆರೋಪ ಎದುರಿಸುತ್ತಿದ್ದು, ಅವರನ್ನು ವಜಾ ಮಾಡಬೇಕು ಎಂದು ಕಾಂಗ್ರೆಸ್ ಪಕ್ಷ ಪ್ರತಿಭಟನೆ ನಡೆಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು

ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ಸಿಇಸಿ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ನಡೆಸಿದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಇತ್ತೀಚೆಗೆ ಚುನಾವಣಾ ಆಯೋಗದಲ್ಲಿ ಕೆಲವು ಬೆಳವಣಿಗೆಗಳು ನಡೆದಿವೆ. ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಟ್ಟಿರುವವರು ಆತಂಕದಲ್ಲಿ ಇದ್ದಾರೆ ಎಂದರು.

ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆ, ಐದು ವರ್ಷಕ್ಕೊಮ್ಮೆ ಚುನಾವಣೆಯನ್ನು ಸ್ವತಂತ್ರವಾಗಿ ನಡೆಸಬೇಕು. ಪಾರದರ್ಶಕತೆಯಿಂದ ಚುನಾವಣೆ ನಡೆಸಬೇಕಿರುವುದು ಸಂವಿಧಾನದ ಆಶಯ. ಸ್ವತಂತ್ರವಾಗಿ ಚುನಾವಣೆಗಳು ನಡೆಯದಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಇದು ಪ್ರಜಾಪ್ರಭುತ್ವದ ಅಳಿವು ಉಳಿವಿನ ಪ್ರಶ್ನೆ ಎಂದರು.

ಚುನಾವಣಾ ಆಯೋಗದ ಆಯುಕ್ತರುಗಳು ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳಬಾರದು. ಒಂದು ವೇಳೆ ಅವರು ಆ ರೀತಿ ನಡೆದುಕೊಂಡರೆ ರಾಷ್ಟ್ರಪತಿಗಳು ಅವರನ್ನು ಪದಚ್ಯುತಗೊಳಿಸಬೇಕು ಎಂದು ಆಗ್ರಹಿಸಿದರು.

ಇತ್ತೀಚಿನ ವರ್ಷಗಳಲ್ಲಿ ಚುನಾವಣಾ ಆಯೋಗ ಕೇಂದ್ರ ಸರ್ಕಾರ ದಕೈಗೊಂಬೆಯಾಗಿ ವರ್ತಿಸುತ್ತಿದೆ. ಈಗಿನ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಇನ್ನಿಬ್ಬರು ಆಯುಕ್ತರು ಆಕ್ಷೇಪ ಎತ್ತಿದ್ದಾರೆ. ಈ ಎಲ್ಲ ಬೆಳವಣಿಗೆಗಳಿಗೆ ಪ್ರಧಾನಿ ಮೋದಿ, ಅಮಿತ್‌ಶಾ ಕಾರಣ ಎಂದು ಸಿದ್ಧರಾಮಯ್ಯ ವಾಗ್ದಾಳಿ ನಡೆಸಿದರು.

ಚುನಾವಣಾ ಆಯೋಗದಲ್ಲಿ ಅಕ್ರಮ ನಡೆಸಿರುವ ಜ್ಞಾನೇಶ್‌ಕುಮಾರ್ ಅವರನ್ನು ವಜಾ ಮಾಡುವುದಷ್ಟೇ ಅಲ್ಲ. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಆಗ್ರಹಿಸಿದ ಸಿದ್ದರಾಮಯ್ಯ ಅವರು, ಕೂಡಲೇ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಜ್ಞಾನೇಶ್‌ಕುಮಾರ್ ಅವರನ್ನು ವಜಾಗೊಳಿಸಿ ಕ್ರಿಮಿನಲ್ ಕೇಸ್ ಹಾಕಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲೂ 1 ಕೋಟಿ ಮತದಾರನ್ನು ಎಸ್‌ಐಆರ್‌ನಲ್ಲಿ ತೆಗೆಯಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ಪಾರದರ್ಶಕವಾಗಿ ಇರಬೇಕು. ಚುನಾವಣಾ ಆಯೋಗವನ್ನೇ ವಜಾ ಮಾಡಬೇಕು ಎಂದು ಆಗ್ರಹಿಸಿದರು

ನಾವು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮತ ಪತ್ರಗಳ ಮೂಲಕವೇ ಮಾಡಲು ತೀರ್ಮಾನಸಿದ್ದೇವೆ. ಪ್ರಜಾಪ್ರಭುತ್ವ ಉಳಿಸಲು ನಾವು ಮುಂದಾಗಿದ್ದೇವೆ ಎಂದರು

ಕೇಂದ್ರ ಚುನಾವಣಾ ಆಯುಕ್ತರ ವಿರುದ್ದ ಆರೋಪಗಳು ಬಂದಿರುವುದರಿಂದ ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ಈಗಿನ ಚುನಾವಣಾ ಆಯೋಗವನ್ನು ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಅಧಿಕಾರ ವ್ಯಾಮೋಹ ಜಾಸ್ತಿ ದಿನ ಇರುವುದಿಲ್ಲ ಸೂರ್ಯ ಹುಟ್ಟಿದ ಮೇಲೆ ಮುಳುಗಲೇಬೇಕು. ಪ್ರಧಾನಿಗಳಿಗೆ, ಕೇಂದ್ರ ಸಚಿವರುಗಳಿಗೆ ಇದು ಮನವರಿಕೆಯಾಗಬೇಕು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರುಗಳು, ಧಿಕ್ಕಾರದ ಘೋಷಣೆಗಳನ್ನು ಕೂಗಿ, ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಈ ಪ್ರತಿಭಟನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗಿಯಾಗಿದ್ದು, ಇಡೀ ಸ್ವತಂತ್ರ ಉದ್ಯಾನನದಲ್ಲಿ ಕಾಂಗ್ರೆಸ್ ಬಾವುಟಗಳ ಭರಾಟೆ ಜೋರಾಗಿದ್ದು, ಇಡೀ ಉದ್ಯಾನವನ ಕಾಂಗ್ರೆಸ್ ಮಯವಾಗಿತ್ತು.

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆ ನೀಡುವವರೆಗೂ ಕಾಂಗ್ರೆಸ್ ಪಕ್ಷ ಹೋರಾಟ ನಡೆಸಲಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿದರು.

# ನಕಲಿ ಮದ್ಯ

ಮಾದರಿಗಳನ್ನು ವಿಧಿವಿಜ್ಞಾನ ಪರೀಕ್ಷೆಗಾಗಿ ಗುವಾಹತಿಗೆ ಕಳುಹಿಸಲಾಗಿದೆ. ತನಿಖೆಯಲ್ಲಿ ಕೆಲವು ಸುಳಿವುಗಳು ಲಭ್ಯವಾಗಿದ್ದು, ಈ ಹಂತದಲ್ಲಿ ಹೆಚ್ಚಿನ ವಿವರ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಬಳಿಕ ಪೊಲೀಸರು ವಿವಿಧೆಡೆ ದಾಳಿ ನಡೆಸಿ 19 ಮಂದಿಯನ್ನು ಬಂಧಿಸಿದ್ದು, ಸುಮಾರು 3,000 ಮದ್ಯದ ಬಾಟಲಿಗಳನ್ನು ವಶಪಡಿಸಿಕೊಂಡಿದ್ದಾರೆ.

1990ರಿಂದಲೇ ನಾಗಾಲ್ಯಾಂಡ್‌ನಲ್ಲಿ ಮದ್ಯನಿಷೇಧ ಕಾನೂನು ಜಾರಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಅಕ್ರಮವಾಗಿ ಮಾರಾಟವಾಗುವ ಹಾಗೂ ಕಲಬೆರಕೆಯ ಮದ್ಯದ ಪೂರೈಕೆ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

- **ನಾಗಾಲ್ಯಾಂಡ್‌ನಲ್ಲಿ 2 ದಿನಗಳಲ್ಲಿ 19 ಮಂದಿ ಸಾವು**
- **ಮೋಕೊಕ್ಚುಂಗ್‌ನಲ್ಲಿ 8, ತುಯೆನ್ಸಾಂಗ್‌ನಲ್ಲಿ 11 ಸಾವು**
- **ತನಿಖೆಗೆ ಎಸ್‌ಐಟಿ ರಚನೆ**
- **19 ಮಂದಿ ಬಂಧನ, 3 ಸಾವಿರ ಬಾಟಲಿ ಮದ್ಯ ವಶ**
- **ಮದ್ಯದ ಮಾದರಿಗಳನ್ನು ಗುವಾಹತಿಗೆ ವಿಧಿವಿಜ್ಞಾನ ಪರೀಕ್ಷೆಗೆ ರವಾನೆ**
- **ಗುರುತು ಇಲ್ಲದ ಅಥವಾ ಶಂಕಾಸ್ಪದ ಮದ್ಯ ಸೇವಿಸದಂತೆ ಪೊಲೀಸರ ಎಚ್ಚರಿಕೆ**

# ವಾಯುಭಾರ ಕುಸಿತ: ಕರಾವಳಿ, ಮಲೆನಾಡಿಗೆ ಯೆಲ್ಲೋ ಅಲರ್ಟ್

ಬೆಂಗಳೂರು, ಸೆ.26– ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪ್ರಭಾವದಿಂದಾಗಿ ರಾಜ್ಯಾದ್ಯಂತ ಮುಂಗಾರು ಮಳೆಯ ಅಬ್ಬರ ಮತ್ತೆ ಜೋರಾಗಿದೆ. ಮುಖ್ಯವಾಗಿ ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಸಾಧಾರಣದಿಂದ ಭಾರೀ ಮಳೆಯಾಗುವ ಮುನ್ಸೂಚನೆ ಇದ್ದು, ಹವಾಮಾನ ಇಲಾಖೆಯು ವಿವಿಧ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಸೇರಿದಂತೆ ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಮುಂದಿನ ಕೆಲವು ದಿನಗಳ ಕಾಲ ಮಳೆಯ ಆರ್ಭಟ ಹೆಚ್ಚಿರಲಿದ್ದು, ಈ ಭಾಗಗಳಲ್ಲಿ ಗಂಟೆಗೆ ಮುವತ್ತರಿಂದ ನಲವತ್ತು ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ, ಗುಡುಗು ಹಾಗೂ ಸಿಡಿಲು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಾವೇರಿ, ಬೆಳಗಾವಿ, ಧಾರವಾಡ, ಗದಗ ಜಿಲ್ಲೆಗಳ ಹಲವೆಡೆಯೂ ಸಾಧಾರಣ ಮಳೆಯಾಗಲಿದೆ. ಪ್ರಸ್ತುತ ವಾತಾವರಣವು ಮುಂದಿನ ಎರಡು ದಿನಗಳ ಕಾಲ ಮುಂದುವರೆಯಲಿದ್ದು, ತಾಪಮಾನದಲ್ಲಿಯೂ ಗಣನೀಯ ಇಳಿಕೆಯಾಗಿದೆ. ಸೆಪ್ಟೆಂಬರ್ ಇಪ್ಪತ್ತೊಂಬತ್ತರಿಂದ ಅಕ್ಟೋಬರ್ ಒಂದರ ವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಮತ್ತಷ್ಟು ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ರಾಜಧಾನಿ ಬೆಂಗಳೂರಿನಲ್ಲಿಯೂ ಸಹ ತಣ್ಣನೆಯ ವಾತಾವರಣದೊಂದಿಗೆ ಮೋಡಕವಿದ ಮುಸುಕಿನ ವಾತಾವರಣ ನಿರ್ಮಾಣವಾಗಿದ್ದು, ಸಂಜೆಯ ವೇಳೆಗೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ನಗರದಲ್ಲಿ ಗರಿಷ್ಠ ತಾಪಮಾನ ಇಪ್ಪತ್ತೊಂಬತ್ತು ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ ಇಪ್ಪತ್ತು ಡಿಗ್ರಿ ಸೆಲ್ಸಿಯಸ್ ದಾಖಲಾಗುವ ನಿರೀಕ್ಷೆಯಿದ್ದು, ಮುಂಬರುವ ದಿನಗಳಲ್ಲಿಯೂ ನಗರದಲ್ಲಿ ಮಳೆ ಹೆಚ್ಚಾಗುವ ಮುನ್ಸೂಚನೆಯನ್ನು ಅಧಿಕಾರಿಗಳು ನೀಡಿದ್ದಾರೆ. ಮಳೆ ಹಾಗೂ ಬಿರುಗಾಳಿಯ ಹಿನ್ನೆಲೆಯಲ್ಲಿ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

# ಬಿಜೆಪಿ– ಜೆಡಿಎಸ್ ಸಜ್ಜು

ಇದರ ಜೊತೆಗೆ ರೈತರಿಗೆ ಸರ್ಕಾರ ಘೋಷಿಸಿರುವ 2,500 ಪರಿಹಾರಕ್ಕೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದು, ಕನಿಷ್ಠ 25,000 ಪರಿಹಾರ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಜೊತೆಗೆ ರೈತರ ಸಂಕಷ್ಟವನ್ನು ಮುಂದಿಟ್ಟುಕೊಂಡು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು.

ಸಭೆಯಲ್ಲಿ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ನಾಯಕ ಸುರೇಶ್ ಬಾಬು, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಭೋಜೇಗೌಡ ಸೇರಿದಂತೆ ಹಲವು ಮೈತ್ರಿ ನಾಯಕರು ಭಾಗವಹಿಸಲಿದ್ದಾರೆ.

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# ಬೆಂಗಳೂರು ನಗರ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್

ಬೆಂಗಳೂರು, ಸೆ.26: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಾಚೆಗೂ ವೇಗವಾಗಿ ವಿಸ್ತರಿಸುತ್ತಿರುವ ನಗರೀಕರಣ–ಕ್ಕೆ ಅನುಗುಣವಾಗಿ ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ರಾಜ್ಯ ಸರ್ಕಾರ ದೀರ್ಘಾವಧಿಯ ಯೋಜನೆ ರೂಪಿಸಲು ಮುಂದಾಗಿದೆ.



ಸಂಪೂರ್ಣ ಬೆಂಗಳೂರು ನಗರ ಜಿಲ್ಲೆಯನ್ನು ಬೆಂಗಳೂರು ಜಲಮಂಡಳಿ ವ್ಯಾಪ್ತಿಗೆ ತರುವ ಸಂಬಂಧ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು, ಜಿಬಿಎ ಹೊರಗಿನ ಪುರಸಭೆಗಳು ಹಾಗೂ ಗ್ರಾಮ ಪಂಚಾಯಿತಿ ಪ್ರದೇಶಗಳಿಗೂ ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಮೂಲಸೌಕರ್ಯ ಕಲ್ಪಿಸುವ ಉದ್ದೇಶ ಹೊಂದಲಾಗಿದೆ.

ನಗರದ ವಿಸ್ತರಣೆ ಜಿಬಿಎ ಗಡಿಯನ್ನು ಮೀರಿದ್ದು, ಸುತ್ತಮುತ್ತಲಿನ ಪ್ರದೇಶಗಳು ವೇಗವಾಗಿ ನಗರೀಕರಣಗೊಳ್ಳುತ್ತಿವೆ. ವಸತಿ ಹಾಗೂ ಆರ್ಥಿಕ ಚಟುವಟಿಕೆಗಳು ಮುಂದಿನ ವರ್ಷಗಳಲ್ಲಿ ಈ ಭಾಗಗಳಲ್ಲಿ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯ ಹಿನ್ನೆಲೆಯಲ್ಲಿ, ನಗರ ಬೆಳೆದ ನಂತರ ಮೂಲಸೌಕರ್ಯ ಕಲ್ಪಿಸುವ ಬದಲು ಮುಂಚಿತವಾಗಿಯೇ ಯೋಜನೆ ರೂಪಿಸಲು ಸರ್ಕಾರ ನಿರ್ಧರಿಸಿದೆ ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಈ ಸಂಬಂಧ ಘಾಖಖಃ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (BMRDA) ಹಾಗೂ ಸಣ್ಣ ನೀರಾವರಿ ಇಲಾಖೆಯೊಂದಿಗೆ ನಡೆದ ಸಭೆಯಲ್ಲಿ ಜಿಬಿಎ ಹೊರಗಿನ ಪ್ರದೇಶಗಳ ಮೂಲಸೌಕರ್ಯ ಅಗತ್ಯಗಳ ಕುರಿತು ಚರ್ಚಿಸಲಾಗಿದೆ.

**5, 10 ವರ್ಷಗಳ ನೀರಿನ ಲೆಕ್ಕಾಚಾರ**

ಮುಂದಿನ ಐದು ವರ್ಷ, ಹತ್ತು ವರ್ಷ ಹಾಗೂ ಅದಕ್ಕೂ ಮೀರಿದ ಅವಧಿಯಲ್ಲಿ ಜಿಬಿಎ ಹೊರಗಿನ ಪ್ರದೇಶಗಳಿಗೆ ಅಗತ್ಯವಾಗುವ ಕುಡಿಯುವ ನೀರಿನ ಪ್ರಮಾಣವನ್ನು ಅಂದಾಜಿಸಿ ಸಮಗ್ರ ಯೋಜನೆ ರೂಪಿಸುವಂತೆ ಸೂಚಿಸಲಾಗಿದೆ.

ಕೇವಲ ನೀರಿನ ಬೇಡಿಕೆ ಅಂದಾಜಿಸುವುದಕ್ಕೆ ಸೀಮಿತವಾಗದೆ, ನೀರು ಸಂಗ್ರಹಣೆ, ನೀರು ಸಂಸ್ಕರಣಾ ಘಟಕಗಳು (WTP) ಹಾಗೂ ವಿತರಣಾ ಜಾಲ ನಿರ್ಮಾಣದ ಅಗತ್ಯಗಳನ್ನೂ ಯೋಜನೆಯಲ್ಲಿ ಸೇರಿಸಲಾಗುತ್ತದೆ. ಇದೇ ವೇಳೆ ಹಂತ ಹಂತವಾಗಿ ಒಳಚರಂಡಿ ಜಾಲ ಮತ್ತು ತ್ಯಾಜ್ಯನೀರು ಸಂಸ್ಕರಣಾ ಘಟಕಗಳನ್ನು (STP) ನಿರ್ಮಿಸಲು ನೀಲನಕ್ಷೆ ಸಿದ್ಧಪಡಿಸಲಾಗುತ್ತದೆ.

ಜಿಬಿಎ ಹೊರಗಿನ ಇಡೀ ಬೆಂಗಳೂರು ನಗರ ಜಿಲ್ಲೆಗೆ ಜಂಟಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿ, ನಗರ ವಿಸ್ತರಣೆಯ ವೇಗಕ್ಕೆ ಅನುಗುಣವಾಗಿ ಮೂಲಸೌಕರ್ಯವನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆ.

**90% ನೀರಿಗೆ ಅಂತರ್ಜಲ ಅವಲಂಬನೆ**

ಜಿಬಿಎ ಹೊರಗಿನ ಪ್ರದೇಶಗಳಲ್ಲಿ ಪ್ರಸ್ತುತ ಶೇ.90ಕ್ಕೂ ಹೆಚ್ಚು ನೀರಿನ ಅಗತ್ಯ ಅಂತರ್ಜಲದಿಂದಲೇ ಪೂ–ರೈಕೆಯಾಗುತ್ತಿದೆ. ನಗರೀಕರಣ ಹೆಚ್ಚಾದಂತೆ ಅಂತರ್ಜಲದ ಮೇಲಿನ ಒತ್ತಡವೂ ಹೆಚ್ಚುತ್ತಿದ್ದು, ಹಲವು ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿದೆ.

ಹೀಗಾಗಿ ಭವಿಷ್ಯದ ಜಲ ಭದ್ರತೆಗೆ ಅಂತರ್ಜಲ ಮರುಪೂರಣಕ್ಕೆ ಆದ್ಯತೆ ನೀಡಲು ಸರ್ಕಾರ ಮುಂದಾಗಿದೆ. ಹಿಂದಿನಿಂದಲೂ ಅಂತರ್ಜಲ ಮರುಪೂರಣದಲ್ಲಿ ಪ್ರಮುಖ ಪಾತ್ರ ವಹಿಸಿರುವ ಕೆರೆಗಳನ್ನು ಪುನಶ್ಚೇತನಗೊಳಿಸಿ ನಿರಂತರವಾಗಿ ತುಂಬಿಸುವ ಯೋಜನೆ ರೂಪಿಸಲಾಗುತ್ತಿದೆ.

**ಸಂಸ್ಕರಿಸಿದ ತ್ಯಾಜ್ಯ ನೀರಿನಿಂದ ಕೆರೆಗಳ ಭರ್ತಿ**

ಬೆಂಗಳೂರಿನಲ್ಲಿ ಸಂಸ್ಕರಿಸಲಾಗುವ ತ್ಯಾಜ್ಯನೀರನ್ನು ಮರುಬಳಕೆ ಮಾಡಿಕೊಂಡು ಜಿಬಿಎ ಸುತ್ತಮುತ್ತಲಿನ ಕೆರೆಗಳನ್ನು ತುಂಬಿಸುವ ಯೋಜನೆ ರೂಪಿಸುವಂತೆ ಸಣ್ಣ ನೀರಾವರಿ ಇಲಾಖೆಗೆ ಸೂಚಿಸಲಾಗಿದೆ.

ಸಂಸ್ಕರಿಸಿದ ನೀರಿನಿಂದ ಒಣಗಿರುವ ಕೆರೆಗಳನ್ನು ತುಂಬಿಸುವುದರಿಂದ ಅಂತರ್ಜಲ ಮರುಪೂರಣಕ್ಕೆ ನೆರವಾಗುವುದರ ಜತೆಗೆ ಕೆರೆಗಳ ಸಂರಕ್ಷಣೆ, ಪರಿಸರ ಸಮತೋಲನ ಮತ್ತು ಜಲಮಟ್ಟ ಸುಧಾರಣೆಗೆ ಸಹಕಾರಿಯಾಗಲಿದೆ ಎಂಬುದು ಸರ್ಕಾರದ ಉದ್ದೇಶ.

ಕೆರೆಗಳನ್ನು ಒತ್ತುವರಿಯಿಂದ ರಕ್ಷಿಸುವುದಕ್ಕೂ ಈ ಕ್ರಮ ನೆರವಾಗಲಿದೆ. ನಗರ ವಿಸ್ತರಣೆಗೆ ಮುನ್ನವೇ ನೀರು ಮತ್ತು ಒಳಚರಂಡಿ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಮೂಲಕ ಜಿಬಿಎ ವ್ಯಾಪ್ತಿಯಲ್ಲಿ ಹಿಂದೆ ಎದುರಾದ ಮೂಲಸೌಕರ್ಯ ಕೊರತೆಯ ಸಮಸ್ಯೆಗಳು ಹೊರವಲಯಗಳಲ್ಲೂ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಲು ಸರ್ಕಾರ ಮುಂದಾಗಿದೆ.

ಸಂಬಂಧಪಟ್ಟ ಇಲಾಖೆಗಳು ನೀರು, ಒಳಚರಂಡಿ ಹಾಗೂ ಕೆರೆಗಳ ಪುನಶ್ಚೇತನಕ್ಕೆ ಸಂಬಂಧಿಸಿದ ನೀಲನಕ್ಷೆಗಳನ್ನು ಸಿದ್ಧಪಡಿಸಿ ಸರ್ಕಾರದ ಪರಿಶೀಲನೆಗೆ ಸಲ್ಲಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

## ವಾರಾಂತ್ಯ ರಜೆ: 850 ಹೆಚ್ಚುವರಿ ಬಸ್ ವ್ಯವಸ್ಥೆ

ಬೆಂಗಳೂರು.ಸೆ.26– ಗಾಂಧಿ ಜಯಂತಿ ಹಾಗೂ ವಾರಾಂತ್ಯದ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬೆಂಗಳೂರಿನಿಂದ ವಿವಿಧ ನಗರಗಳು ಹಾಗೂ ಹೊರ ಜಿಲ್ಲೆಗಳಿಗೆ 850 ಹೆಚ್ಚುವರಿ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ.

ಅ.1 ಮತ್ತು ಅ.2ರಂದು ಬೆಂಗಳೂರಿನಿಂದ ವಿವಿಧ ನಗರಗಳಿಗೆ ಹೆಚ್ಚುವರಿ ಬಸ್‌ಗಳು ಕಾರ್ಯಾಚರಿಸಲಿವೆ. ಅ.2ರಂದು ಗಾಂಧಿ ಜಯಂತಿ ಹಾಗೂ ಅ.3 ಮತ್ತು ಅ.4ರಂದು ವಾರಾಂತ್ಯದ ರಜೆ ಇರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಬೇರೆ ಕಡೆ ಪ್ರಯಾಣ ಬೆಳಸುವ ಹಿನ್ನೆಲೆಯಲ್ಲಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ.

ಪ್ರಯಾಣಿಕರ ಅನುಕೂಲಕ್ಕಾಗಿ ಏಖಖಖಿಅ ಮುಂಗಡ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಿದೆ. ಪ್ರಯಾಣಿಕರು ಕೆಎಸ್‌ಆರ್‌ಟಿಸಿ ವೆಬ್ ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡಬಹುದು.

## ಕೆರೆಯಲ್ಲಿ ಮುಳುಗಿ ಯುವಕ ಸಾವು

ಬೆಳಗಾವಿ,ಸೆ.26–ಗಣಪತಿ ವಿಸರ್ಜನೆ ವೇಳೆ ಕೆರೆಯಲ್ಲಿ ಮುಳುಗಿ 20 ವರ್ಷದ ಯುವಕ ಮೃತಪಟ್ಟಿರುವ ದಾರುಣ ಘಟನೆ ಬೆಳಗಾವಿ ತಾಲೂಕಿನ ಮಚ್ಚೆ ಗ್ರಾಮದಲ್ಲಿ ನಡೆದಿದೆ.

ಮಚ್ಚೆ ಗ್ರಾಮದ ವಿಶ್ವೇಶ್ ನಾಯಕ್ (20) ಮೃತ ಯುವಕ. ಗಣಪತಿ ವಿಸರ್ಜನೆಗಾಗಿ ವಿಶ್ವೇಶ್ ತನ್ನ ಸ್ನೇಹಿತರೊಂದಿಗೆ ತೆರಳಿದ್ದ. ಗಣಪತಿ ವಿಸರ್ಜನೆ ಮುಗಿಸಿ ವಾಪಸ್ ಬರುವಾಗ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ.

# ಡಿಜೆ ಬಳಕೆ 15 ಮಂದಿ ವಿರುದ್ಧ ಎಫ್‌ಐಆರ್ ವಿಹೆಚ್‌ಪಿ ಆಕ್ರೋಶ

ಹಾಸನ,ಸೆ.26–ನಗರದಲ್ಲಿ ನಡೆದ ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವದ ವೇಳೆ ಅನುಮತಿ ಇಲ್ಲದೆ ಡಿಜೆ ಬಳಸಿದ ಆರೋಪದಡಿ 15 ಮಂದಿಯ ವಿರುದ್ಧ ಹಾಸನ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿರುವುದಕ್ಕೆ ವಿಶ್ವಹಿಂದೂ ಪರಿಷತ್ (ವಿಹೆಚ್‌ಪಿ) ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಸನದಲ್ಲಿ ಮಾತನಾಡಿದ ವಿಹೆಚ್‌ಪಿ ಪ್ರಾಂತ ಸಹಕಾರ್ಯದರ್ಶಿ ಮಹಿಪಾಲ್, ಡಿಜೆ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳನ್ನು ತಾವು ಕೂಡ ಗಮನಿಸಿದ್ದೇವೆ. ಆದರೆ ಈ ನಿಯಮಗಳನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಗಳ ಕಾರ್ಯಕ್ರಮಗಳು ನಡೆದಾಗಲೂ ಪರಿಸರ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಡೆಸಿಬಲ್ ಮಟ್ಟವನ್ನು ಪರಿಶೀಲಿಸುವ ಧೈರ್ಯವನ್ನು ಪೊಲೀಸರು ತೋರಿಸಬೇಕು. ಅಲ್ಲಿ ನಿಯಮ ಉಲ್ಲಂಘನೆಯಾದರೆ ಎಫ್‌ಐಆರ್ ದಾಖಲಿಸಲಾಗುತ್ತದೆಯೇ ಎಂದು ಪ್ರಶ್ನಿಸಿದರು.

ಐಪಿಎಲ್ ಪಂದ್ಯಗಳ ವೇಳೆ ಹೆಚ್ಚಿನ ಪ್ರಮಾಣದ ಶಬ್ದ ದಾಖಲಾಗಿರುವ ಬಗ್ಗೆ ವರದಿಗಳಿದ್ದರೂ ಆಯೋಜಕರ ವಿರುದ್ಧ ಇದೇ ರೀತಿಯ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂದು ಮಹಿಪಾಲ್ ಪ್ರಶ್ನಿಸಿದರು.

ನಗರದಲ್ಲಿ ವಿವಿಧ ಪ್ರಾರ್ಥನಾ ಸ್ಥಳಗಳಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೂ ಧ್ವನಿವರ್ಧಕಗಳ ಬಳಕೆ ನಡೆ–ಯುತ್ತಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಗಮನ ಹರಿಸುತ್ತಿದೆಯೇ ಎಂದು ಪ್ರಶ್ನಿಸಿದ ಅವರು, ಅನಧಿಕೃತ ಫ್ಲೆಕ್ಸ್‌ಗಳ ಹಾವಳಿ ಹೆಚ್ಚಾಗಿದ್ದರೂ ಕ್ರಮ ಕೈಗೊಳ್ಳದಿರುವುದೇಕೆ ಎಂದು ಆಕ್ಷೇಪಿಸಿದರು.

ಎಂಟು ತಿಂಗಳ ಹಿಂದೆ ಅನ್ಯಧರ್ಮೀಯರ ಹಬ್ಬದ ಸಂದರ್ಭದಲ್ಲಿ ಕೆ.ಆರ್.ಪುರಂನಲ್ಲಿ ರಾತ್ರಿವೇಳೆ ಜೋರಾಗಿ ಧ್ವನಿವರ್ಧಕ ಬಳಸಲಾಗಿತ್ತು. ಈ ಕುರಿತು ವಿವಿಧ ಇಲಾಖೆಗಳ ಪ್ರಮುಖ ಅಧಿಕಾರಿಗಳಿಗೆ ತಾವು ಕರೆ ಮಾಡಿ, ಹಾಸನ ಜಿಲ್ಲೆಯ ಸಾಮರಸ್ಯದ ದೃಷ್ಟಿಯಿಂದ ಎಲ್ಲರೂ ಪರಸ್ಪರ ಸಹಕರಿಸಬೇಕು ಎಂದು ಮನವಿ ಮಾಡಿದ್ದಾಗಿ ಅವರು ತಿಳಿಸಿದರು.

"ಈಗ ಅಧಿಕಾರಿಗಳಿಗೆ ಸಾಮರಸ್ಯ ನೆನಪಾಗುತ್ತಿಲ್ಲವೇ?" ಎಂದು ಪ್ರಶ್ನಿಸಿದ ಮಹಿಪಾಲ್, ಗಣೇಶೋತ್ಸವವನ್ನೇ ಗುರಿಯಾಗಿಸಿಕೊಂಡು ಕ್ರಮ ಕೈಗೊಳ್ಳಬಾರದು ಎಂದು ಆಗ್ರಹಿಸಿದರು.

ಡಿಜೆ ಬಳಕೆಗೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣಗಳನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಅವರು ತಿಳಿಸಿದರು. ಗಣೇಶೋತ್ಸವದ ಸಂದರ್ಭದಲ್ಲಿ ಮಾತ್ರ ಪರಿಸರ ಕಾಳಜಿ ತೋರಿಸದೆ, ವರ್ಷವಿಡೀ ಶಬ್ದ ಮಾಲಿನ್ಯ ನಿಯಂತ್ರಣದ ಬಗ್ಗೆ ಸಮಾನವಾಗಿ ಕ್ರಮ ಕೈಗೊಳ್ಳಬೇಕು ಎಂದರು.

ಹಿಂದೂ ಸಮಾಜದ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವಾಗ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು. ಪ್ರಕರಣಗಳನ್ನು ಕಾನೂನುಬದ್ಧವಾಗಿ ಪ್ರಶ್ನಿಸುವುದಾಗಿ ಹೇಳಿದ ಅವರು, "ಹಿಂದೂ ದಮನ ನೀತಿ ಮುಂದುವರಿದರೆ ಕೇವಲ ಪ್ರತಿಭಟನೆಗೆ ಸೀಮಿತವಾಗುವುದಿಲ್ಲ. ವಿಧಾನಸೌಧ ಚಲೋ ನಡೆಸುತ್ತೇವೆ" ಎಂದು ಎಚ್ಚರಿಕೆ ನೀಡಿದರು.

ಪೊಲೀಸರ ಕ್ರಮದ ವಿರುದ್ಧ ವಿಹೆಚ್‌ಪಿ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರಕರಣದ ಮುಂದಿನ ಕಾನೂನು ಕ್ರಮಗಳತ್ತ ಇದೀಗ ಗಮನ ಹರಿದಿದೆ.

# ಎರಡು ತೆಂಗಿನ ಸಸಿ ಕಡಿದ ಅಳಿಯನ ಕೊಲೆ

ಚಿಕ್ಕಮಗಳೂರು,ಸೆ.26–ಕೇವಲ ಎರಡು ತೆಂಗಿನ ಸಸಿಗಳನ್ನು ಕಡಿದ ವಿಚಾರಕ್ಕೆ ಸಂಬಂಧಿಸಿದಂತೆ ಮಾವನೊಬ್ಬ ಅಳಿಯನನ್ನೇ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಆಘಾತಕಾರಿ ಘಟನೆ ಕಡೂರು ತಾಲೂಕಿನ ಪಂಚನಹಳ್ಳಿ ಸಮೀಪದ ಆಲದಹಳ್ಳಿ ತಾಂಡ್ಯಾದಲ್ಲಿ ನಡೆದಿದೆ.

ಆಲದಹಳ್ಳಿ ತಾಂಡ್ಯಾ ನಿವಾಸಿ ದೇವರಾಜ್ ನಾಯ್ಕ (35) ಕೊಲೆಯಾದವರು. ಕುಟುಂಬ ಕಲಹ ಹಾಗೂ ಕ್ಷುಲ್ಲಕ ವಿಚಾರಕ್ಕೆ ಸಂಬಂಧಿಸಿದ ಜಗಳ ಕೊಲೆಯಲ್ಲಿ ಅಂತ್ಯಗೊಂಡಿದೆ.

ದೇವರಾಜ್ ನಾಯ್ಕ, ರಾಜಾನಾಯ್ಕ ಅವರ ಪುತ್ರಿಯನ್ನು ವಿವಾಹವಾಗಿದ್ದ. ಆದರೆ ದಂಪತಿ ನಡುವೆ ಪದೇಪದೆ ಕೌಟುಂಬಿಕ ಕಲಹ ನಡೆಯುತ್ತಿತ್ತು. ಬಳಿಕ ಪತ್ನಿ ಗಂಡನನ್ನು ತೊರೆದು ಬೆಂಗಳೂರಿನಲ್ಲಿ ವಾಸವಾಗಿದ್ದಳು ಎನ್ನಲಾಗಿದೆ. ಇದೇ ವೇಳೆ ಒಂದೇ ಊರಿನಲ್ಲಿ ವಾಸವಿದ್ದ ಮಾವ ರಾಜಾನಾಯ್ಕ ಹಾಗೂ ಅಳಿಯ ದೇವರಾಜ್ ನಡುವೆ ಸಣ್ಣಪುಟ್ಟ ವಿಚಾರಗಳಿಗೂ ಆಗಾಗ್ಗೆ ಜಗಳ ನಡೆಯುತ್ತಿತ್ತು.

ಈ ವೈಮನಸ್ಸಿನ ಹಿನ್ನೆಲೆಯಲ್ಲಿ ದೇವರಾಜ್ ನಾಯ್ಕ ಮಾವನ ಹೊಲಕ್ಕೆ ತೆರಳಿ ಜಗಳವಾಡಿದ್ದಾನೆ. ಈ ವೇಳೆ ಹೊಲದಲ್ಲಿದ್ದ ಎರಡು ತೆಂಗಿನ ಸಸಿಗಳನ್ನು ಮಚ್ಚಿನಿಂದ ಕಡಿದು ಹಾಕಿದ್ದಾನೆ ಎನ್ನಲಾಗಿದೆ.

ತೆಂಗಿನ ಸಸಿಗಳನ್ನು ಕಡಿದಿರುವುದನ್ನು ಕಂಡ ರಾಜಾನಾಯ್ಕ ಆಕ್ರೋಶಗೊಂಡಿದ್ದು, ದೇವರಾಜ್ ಕೈಯಲ್ಲಿದ್ದ ಮಚ್ಚನ್ನು ಕಸಿದುಕೊಂಡು ಆತನ ಮೇಲೆ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡ ದೇವರಾಜ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಮಾಹಿತಿ ತಿಳಿದು ಪಂಚನಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಆರೋಪಿ ರಾಜಾನಾಯ್ಕನನ್ನು ಬಂಧಿಸಿದ್ದಾರೆ.

# ಕೆ.ಆರ್. ಮಾರುಕಟ್ಟೆ ಬಾಕಿ ಬಾಡಿಗೆ ಪಾವತಿಸದ ಮಳಿಗೆಗಳಿಗೆ ಬೀಗ; ಒತ್ತುವರಿ, ಸ್ವಚ್ಛತೆ ಸಮಸ್ಯೆ ನಿವಾರಣೆಗೆ ಸೂಚನೆ

ಬೆಂಗಳೂರು,ಸೆ.26–ನಗರದ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಕೆ.ಆರ್. ಮಾರುಕಟ್ಟೆಯ ಮೂಲಸೌಕರ್ಯ ಹಾಗೂ ನಾಗರಿಕ ಸೌಲಭ್ಯಗಳನ್ನು ಸುಧಾರಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಜಿ. ಅಧಿಕಾರಿಗಳಿಗೆ ಸೂಚಿಸಿದ್ದಾರೆ.




ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ, ಘನತ್ಯಾಜ್ಯ ನಿರ್ವಹಣೆ, ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ವಿದ್ಯುತ್ ವ್ಯವಸ್ಥೆ, ಶೌಚಾಲಯ, ನೆಲಹಾಸು ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳ ಕುರಿತು ಶುಕ್ರವಾರ ನಡೆದ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ಹಲವು ನಿರ್ದೇಶನಗಳನ್ನು ನೀಡಿದರು.

ಮಾರುಕಟ್ಟೆಯಲ್ಲಿ ಪ್ರತಿದಿನ ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯ ಉತ್ಪತ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ತ್ಯಾಜ್ಯವನ್ನು ಸ್ಥಳದಲ್ಲೇ ಹೆಚ್ಚು ಸಮಯ ಸಂಗ್ರಹವಾಗಲು ಬಿಡಬಾರದು. ಅಗತ್ಯವಿದ್ದಲ್ಲಿ 2ರಿಂದ 3 ಪಾಳಿಗಳಲ್ಲಿ ನಿರಂತರ ಸ್ವಚ್ಛತಾ ಕಾರ್ಯ ಕೈಗೊಂಡು, ಸಂಗ್ರಹಿಸಿದ ತ್ಯಾಜ್ಯವನ್ನು ತಕ್ಷಣ ಸೂಕ್ತ ರೀತಿಯಲ್ಲಿ ಸಾಗಿಸಿ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ಸ್ವಚ್ಛತಾ ಕಾರ್ಯದಲ್ಲಿ ನಿರ್ಲಕ್ಷ್ಯ ಕಂಡುಬರದಂತೆ ಅಧಿಕಾರಿಗಳು ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದು ಹೇಳಿದರು.

**ಪಾದಚಾರಿ ಮಾರ್ಗ ಒತ್ತುವರಿಗೆ ಕಡಿವಾಣ**

ಈಗಾಗಲೇ ತೆರವುಗೊಳಿಸಿರುವ ಪಾದಚಾರಿ ಮಾರ್ಗಗಳಲ್ಲಿ ಮತ್ತೆ ಅಂಗಡಿ ಹಾಗೂ ವಸ್ತುಗಳನ್ನು ಇಟ್ಟು ಒತ್ತುವರಿ ಮಾಡಿರುವುದು ಕಂಡುಬಂದಿದೆ. ಇಂತಹ ಒತ್ತುವರಿಗಳನ್ನು ತಕ್ಷಣ ತೆರವುಗೊಳಿಸಿ, ಮರುಕಳಿಸದಂತೆ ನಿಯಮಿತವಾಗಿ ಸ್ಥಳ ಪರಿಶೀಲನೆ ನಡೆಸಬೇಕು. ನಿಯಮ ಉಲ್ಲಂಘಿಸುವವರ ವಿರುದ್ಧ ಅಗತ್ಯ ಕ್ರಮ ಕೈಗೊಂಡು ಪಾದಚಾರಿ ಮಾರ್ಗಗಳನ್ನು ಸಾರ್ವಜನಿಕರ ಸುಗಮ ಸಂಚಾರಕ್ಕೆ ಮುಕ್ತವಾಗಿಡಬೇಕು ಎಂದು ಸೂಚಿಸಿದರು.

**ಬಾಕಿ ಬಾಡಿಗೆಗೆ 15 ದಿನ ಗಡುವು**

ಮಾರುಕಟ್ಟೆಯ ಅಂಗಡಿ ಮತ್ತು ಮಳಿಗೆಗಳ ಬಾಕಿ ಬಾಡಿಗೆಯನ್ನು ಸಂಬಂಧಪಟ್ಟ ವ್ಯಾಪಾರಿಗಳು 15 ದಿನಗಳೊಳಗೆ ಕಡ್ಡಾಯವಾಗಿ ಪಾವತಿಸಬೇಕು ಎಂದು ಆಯುಕ್ತರು ಸ್ಪಷ್ಟಪಡಿಸಿದರು. ನಿಗದಿತ ಅವಧಿಯಲ್ಲಿ ಬಾಡಿಗೆ ಪಾವತಿಸದ ಮಳಿಗೆಗಳಿಗೆ ಬೀಗ ಹಾಕಿ, ಅವುಗಳನ್ನು ಪಾಲಿಕೆಯ ವಶಕ್ಕೆ ಪಡೆಯುವ ಪ್ರಕ್ರಿಯೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ನಿಗದಿತ ಸ್ಥಳದಲ್ಲೇ ವ್ಯಾಪಾರ**

ಮಾರುಕಟ್ಟೆ ಮುಂಭಾಗದಲ್ಲಿ ವ್ಯಾಪಾರಿಗಳಿಗೆ ನಿಗದಿತ ಸ್ಥಳಗಳನ್ನು ಗುರುತಿಸಲಾಗಿದ್ದು, ಅದನ್ನು ಮೀರಿ ರಸ್ತೆ ಅಥವಾ ಸಾರ್ವಜನಿಕ ಸಂಚಾರ–ಕ್ಕೆ ಅಡ್ಡಿಯಾಗುವ ರೀತಿಯಲ್ಲಿ ವ್ಯಾಪಾರ ನಡೆಸುವವರ ವಿರುದ್ಧ ದಂಡ ಸೇರಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

**ವಿದ್ಯುತ್, ಶೌಚಾಲಯ ದುರಸ್ತಿ**

ಮಾರುಕಟ್ಟೆಯ ವಿದ್ಯುತ್ ಸಂಪರ್ಕ, ಬೀದಿದೀಪ ಹಾಗೂ ಇತರ ವಿದ್ಯುತ್ ವ್ಯವಸ್ಥೆಗಳನ್ನು ಪರಿಶೀಲಿಸಿ ದೋಷ ಕಂಡುಬಂದಲ್ಲಿ ತಕ್ಷಣ ದುರಸ್ತಿ ಮಾಡಬೇಕು. ಕಾರ್ಯನಿರ್ವಹಿಸದ ಅಥವಾ ದುರಸ್ತಿಯಲ್ಲಿರುವ ಶೌಚಾಲಯಗಳನ್ನು ಕೂಡಲೇ ಸರಿಪಡಿಸಿ, ಎಲ್ಲ ಶೌಚಾಲಯಗಳು ಸ್ವಚ್ಛ ಹಾಗೂ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

**ಟೈಲ್ಸ್, ಮೆಟ್ಟಿಲು ದುರಸ್ತಿ**

ಹಾನಿಗೊಳಗಾದ ನೆಲಹಾಸಿನ ಟೈಲ್ಸ್‌ಗಳನ್ನು ಬದಲಿಸಿ ಅಗತ್ಯವಿರುವ ಕಡೆ ಹೊಸ ಟೈಲ್ಸ್ ಅಳವಡಿಸಬೇಕು. ಹಾನಿಗೊಳಗಾದ ಮೆಟ್ಟಿಲುಗಳನ್ನು ದುರಸ್ತಿಪಡಿಸಿ, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಸುರಕ್ಷಿತವಾಗಿ ಸಂಚರಿಸಲು ಅನುಕೂಲ ಕಲ್ಪಿಸಬೇಕು ಎಂದು ತಿಳಿಸಿದರು.

**ಸೊಪ್ಪು ಮಾರುಕಟ್ಟೆಯಲ್ಲಿ ನೀರು ನಿಲ್ಲದಂತೆ ಕ್ರಮ**

ಸೊಪ್ಪು ಮಾರುಕಟ್ಟೆ ಪ್ರದೇಶದಲ್ಲಿ ಮಳೆ ಹಾಗೂ ತ್ಯಾಜ್ಯ ನೀರು ನಿಂತು ಕೆಸರು ಉಂಟಾಗುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿದರು. ಅಗತ್ಯವಿರುವ ಕಡೆ ಕಾಂಕ್ರೀಟೀಕರಣ ಮಾಡಿ, ಸೂಕ್ತ ಇಳಿಜಾರು ಹಾಗೂ ನೀರು ಹರಿದುಹೋಗಲು ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ಅಶುಚಿತ್ವ ಉಂಟಾಗಿ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದನ್ನು ತಪ್ಪಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಭಿವೃದ್ಧಿ ಅಪರ ಆಯುಕ್ತ ವೆಂಕಟಾಚಲಪತಿ ಆರ್., ಜಂಟಿ ಆಯುಕ್ತರಾದ ರಂಗನಾಥ್ ಕೆ. ಹಾಗೂ ಹೇಮಂತ್ ಶರಣ್, ಮುಖ್ಯ ಅಭಿಯಂತರ ವಿಜಯ್ ಕುಮಾರ್ ಹರಿದಾಸ್, ಅಧೀಕ್ಷಕ ಅಭಿಯಂತರ ಚಂದ್ರಶೇಖರ್ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಪಾದಚಾರಿ ಮಾರ್ಗ, ರಸ್ತೆಗುಂಡಿ, ಬೀದಿದೀಪಗಳಿಗೆ ಆದ್ಯತೆಗೆ ಕಟ್ಟುನಿಟ್ಟಿನ ಸೂಚನೆ

ಬೆಂಗಳೂರು,ಸೆ.26: ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗುಂಡಿ, ಪಾದಚಾರಿ ಮಾರ್ಗ, ಬೀದಿದೀಪ, ಬಸ್ ನಿಲ್ದಾಣ ಮತ್ತು ತ್ಯಾಜ್ಯ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಆದ್ಯತೆ ನೀಡುವಂತೆ ಪಶ್ಚಿಮ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.



ಪಾಲಿಕೆ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿಯೊಂದು ವಿಭಾಗದ ಕಾರ್ಯಪಾಲಕ ಅಭಿಯಂತರರು ತಮ್ಮ ವ್ಯಾಪ್ತಿಯ ಸಾರ್ವಜನಿಕ ಸೌಲಭ್ಯಗಳ ಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸಿ, ಸಮಸ್ಯೆಗಳನ್ನು ತಕ್ಷಣವೇ ಸರಿಪಡಿಸುವ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.

ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಹಾಗೂ ಹೆಚ್ಚಿನ ವಾಹನ ಸಂಚಾರವಿರುವ ರಸ್ತೆಗಳಲ್ಲಿ ಪ್ರತಿದಿನ ನಿಗದಿತ ಗುರಿ ನಿಗದಿಪಡಿಸಿ ಅಧಿಕಾರಿಗಳ ತಂಡಗಳು ಸ್ಥಳ ಪರಿಶೀಲನೆ ನಡೆಸಬೇಕು ಎಂದು ಅವರು ಸೂಚಿಸಿದರು. ದುಸ್ಥಿತಿಯಲ್ಲಿರುವ ಪಾದಚಾರಿ ಮಾರ್ಗಗಳ ದುರಸ್ತಿ, ಪಾದಚಾರಿ ಮಾರ್ಗಗಳಲ್ಲಿನ ಅಡೆತಡೆ ತೆರವು, ರಸ್ತೆಗುಂಡಿಗಳ ಮುಚ್ಚುವಿಕೆ ಮತ್ತು ಅನಧಿಕೃತ ಎಲ್‌ಇಡಿ ಜಾಹೀರಾತು ಫಲಕಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ನಗರದ ಬಸ್ ನಿಲ್ದಾಣಗಳಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ ಕಲ್ಪಿಸುವ ಮೂಲಕ ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಆಯುಕ್ತರು ಹೇಳಿದರು. ಸಾರ್ವಜನಿಕರ ಅನುಕೂಲಕ್ಕಾಗಿ ಅಗತ್ಯವಿರುವ ಸ್ಥಳಗಳಲ್ಲಿ ಹೊಸ ಬಸ್ ನಿಲ್ದಾಣಗಳು ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ಗುರುತಿಸಿ ನಾಗರಿಕ ಕೇಂದ್ರಿತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದರು.

ಸಭೆಯಲ್ಲಿ ವಿದ್ಯುತ್ ವಿಭಾಗದ ಅಧಿಕಾರಿಗಳು, ಬೀದಿದೀಪಗಳ ನಿರ್ವಹಣೆಯಲ್ಲಿ ಲೋಪ ಕಂಡುಬಂದ ಹಿನ್ನೆಲೆಯಲ್ಲಿ ಗುತ್ತಿಗೆದಾರರ ವಿರುದ್ಧ ಈಗಾಗಲೇ 54 ಲಕ್ಷ ದಂಡ ವಿಧಿಸಲಾಗಿದೆ ಎಂದು ಮಾಹಿತಿ ನೀಡಿದರು. ಬೀದಿದೀಪಗಳ ಸಮರ್ಪಕ ನಿರ್ವಹಣೆಗೆ ಇನ್ನಷ್ಟು ನಿಗಾ ವಹಿಸುವಂತೆ ಆಯುಕ್ತರು ಸೂಚಿಸಿದರು.

ಸಿಎಂಐಡಿಪಿ ಹಾಗೂ ಸಿಎಸ್‌ಎಸ್‌ಐಪಿ ಯೋಜನೆಗಳಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಅನಾಥ ವಾಹನಗಳ ತೆರವು, ಕಟ್ಟಡ ಅವಶೇಷಗಳ ವಿಲೇವಾರಿ, ಅನಗತ್ಯ ವಿದ್ಯುತ್ ಕಂಬಗಳ ತೆರವು ಸೇರಿದಂತೆ ವಿವಿಧ ಕಾರ್ಯಗಳನ್ನು ಸಂಬಂಧಿತ ಏಜೆನ್ಸಿಗಳ ಸಹಯೋಗದೊಂದಿಗೆ ಪ ರಿ ಣಾ ಮ ಕಾ ರಿ ಯಾ ಗಿ ನಿರ್ವಹಿಸುವಂತೆ ಸೂಚಿಸಲಾಯಿತು.

ಇದೇ ವೇಳೆ, 'ಸಹಾಯ' ಆಪ್ ಮೂಲಕ ಸಾರ್ವಜನಿಕರಿಂದ ಬರುವ ದೂರುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು ಹಾಗೂ ನಾಗರಿಕರಿಗೆ ಸಮಯೋಚಿತ ಸೇವೆ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಸಭೆಯಲ್ಲಿ ಅಪರ ಆಯುಕ್ತೆ (ಅಭಿವೃದ್ಧಿ) ಕವಿತಾ ರಾಜಾರಾಂ, ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಅರಣ್ಯ, ತೆ–ೂಟಗಾರಿಕೆ, ಘನತ್ಯಾಜ್ಯ ನಿರ್ವಹಣೆ ಹಾಗೂ ಜಾಹೀರಾತು ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಾಯವಾಣಿ, ಫೋನ್ ಇನ್ ಕಾರ್ಯಕ್ರಮಕ್ಕೆ ವರ್ಷ: ೩೦೦೦ಕ್ಕೂ ಹೆಚ್ಚು ದೂರು ಸ್ವೀಕಾರ

ಬೆಂಗಳೂರು, ಸೆ.26– ನಾಗರಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ಜಾರಿಗೊಳಿಸಿರುವ 'ಸಹಾಯ 2.0' ತಂತ್ರಾಂಶ ಹಾಗೂ ಆಯುಕ್ತರ ಫೋನ್ ಇನ್ ಕಾರ್ಯಕ್ರಮಕ್ಕೆ ಒಂದು ವರ್ಷ ಪೂರ್ಣಗೊಂಡಿದೆ. ಅಹವಾಲು ದಾಖಲಿಸುವುದರಿಂದ ಹಿಡಿದು ಅಂತಿಮ ಪರಿಹಾರ ದೊರೆಯುವವರೆಗೆ ನಿರಂತರ ಮೇಲ್ವಿಚಾರಣೆ ನಡೆಸುವ ವ್ಯವಸ್ಥೆಯನ್ನು ಪಾಲಿಕೆ ಅನುಸರಿಸುತ್ತಿದೆ.



2025ರ ಸೆಪ್ಟೆಂಬರ್ 26ರಂದು ಆರಂಭವಾದ ಆಯುಕ್ತರ ಫೋನ್ ಇನ್ ಕಾರ್ಯಕ್ರಮ ಪ್ರತಿ ಶುಕ್ರವಾರ ನಡೆಯುತ್ತಿದ್ದು, ಶ53ನೇ ಕಾರ್ಯಕ್ರಮ ಪೂರ್ಣಗೊಂಡಿದೆ. ಇಂದಿನ ಕಾರ್ಯಕ್ರಮದಲ್ಲಿ 50 ಕರೆಗಳ ಮೂಲಕ ಒಟ್ಟು 55 ಅಹವಾಲುಗಳನ್ನು ಸ್ವೀಕರಿಸಲಾಗಿದೆ.

**ರಸ್ತೆ ಸಮಸ್ಯೆಗಳೇ ಮುಂಚೂಣಿ:**

ಇಂದಿನ 55 ಅಹವಾಲುಗಳ ಪೈಕಿ ರಸ್ತೆ ನಿರ್ವಹಣೆ ವಿಭಾಗಕ್ಕೆ ಸಂಬಂಧಿಸಿದಂತೆ 21 ದೂರುಗಳು ಬಂದಿವೆ. ಇದರಲ್ಲಿ ರಸ್ತೆಗುಂಡಿ–8, ಪಾದಚಾರಿ ಮಾರ್ಗ ಒತ್ತುವರಿ–4, ರಸ್ತೆಕಟಿಂಗ್–2, ಚರಂಡಿ ಸಮಸ್ಯೆ–2, ಅನಧಿಕೃತ ಕಟ್ಟಡ–2 ಹಾಗೂ ಡೆಬ್ರಿಸ್ ಮತ್ತು ನಿರ್ಮಾಣ ಸಾಮಗ್ರಿ ತೆರವು–1 ಸೇರಿದಂತೆ ವಿವಿಧ ಸಮಸ್ಯೆಗಳಿವೆ.

ಇ–ಖಾತಾ/ಖಾತಾ ಸೇವೆಗಳಿಗೆ 5, ವಿದ್ಯುತ್–3, ಅರಣ್ಯ–8, ಆರೋಗ್ಯ–2, ಉದ್ಯಾನವನ ಮತ್ತು ಆಟದ ಮೈದಾನ–2, ಘನ ತ್ಯಾಜ್ಯ–10, ಟ್ರಾಫಿಕ್ ಎಂಜಿನಿಯರ್ ಸೆಲ್–2 ಹಾಗೂ ಪಶುವೈದ್ಯಕೀಯ ವಿಭಾಗಕ್ಕೆ ಸಂಬಂಧಿಸಿದ 2 ಅಹವಾಲುಗಳು ಬಂದಿವೆ.

**3,156 ದೂರು; 2,887 ಇತ್ಯರ್ಥ:**

53 ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಇದುವರೆಗೆ 3,156 ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, 2,887 ಅಹವಾಲುಗಳು ಇತ್ಯರ್ಥಗೊಂಡಿವೆ. 269 ಅಹವಾಲುಗಳು ಬಾಕಿ ಉಳಿದಿವೆ. ಇಂದಿನ 55 ಅಹವಾಲುಗಳನ್ನೂ ಸೇರಿಸಿ ಸೆ.25ರ ವೇಳೆಗೆ ಫೋನ್ ಇನ್ ಮೂಲಕ ಒಟ್ಟು 324 ಅಹವಾಲುಗಳು ಬಾಕಿ ಉಳಿದಿವೆ ಎಂದು ಪಾಲಿಕೆ ತಿಳಿಸಿದೆ.

ಇದೇ ವೇಳೆ, 2023ರ ಜನವರಿ 1ರಿಂದ 2025ರ ಆಗಸ್ಟ್ 31ರವರೆಗೆ ಜಿಬಿಎ ರಚನೆಗೂ ಮುನ್ನ 1,17,175 ಅಹವಾಲುಗಳು ದಾಖಲಾಗಿದ್ದವು. 2025ರ ಸೆಪ್ಟೆಂಬರ್ 1ರಿಂದ 2026ರ ಸೆಪ್ಟೆಂಬರ್ 24ರವರೆಗೆ ಜಿಬಿಎ ಅವಧಿಯಲ್ಲಿ 80,938 ಅಹವಾಲುಗಳು ಸ್ವೀಕರಿಸಲಾಗಿದೆ. ಒಟ್ಟಾರೆ 1,98,113 ಅಹವಾಲುಗಳಲ್ಲಿ 1,96,503 ಇತ್ಯರ್ಥಗೊಂಡಿದ್ದು, 1,665 ಬಾಕಿ ಉಳಿದಿವೆ.

**ರಸ್ತೆ, ಕಸ ಸಮಸ್ಯೆಗೆ ವಿಶೇಷ ನಿಗಾ**

ಸೆ.24ರ ವರದಿ ಪ್ರಕಾರ ರಸ್ತೆ ನಿರ್ವಹಣೆ ವಿಭಾಗದಲ್ಲಿ 748 ಹಾಗೂ ಘನ ತ್ಯಾಜ್ಯ ನಿರ್ವಹಣೆಯಲ್ಲಿ 364 ಅಹವಾಲುಗಳು ಬಾಕಿ ಇವೆ. ರಸ್ತೆಗುಂಡಿ, ಪಾದಚಾರಿ ಮಾರ್ಗ, ಒತ್ತುವರಿ, ರಸ್ತೆ ಕಟಿಂಗ್, ಚರಂಡಿ, ಡೆಬ್ರಿಸ್ ತೆರವು ಹಾಗೂ ನೀರು ನಿಲ್ಲುವಿಕೆ ಪ್ರಮುಖ ಸಮಸ್ಯೆಗಳಾಗಿವೆ. ಕಸ ಸಂಗ್ರಹಣೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಹಾಕುವ ಕುರಿತ ದೂರುಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ.

ಬ್ಯಾಟರಾಯನಪುರ ಹಾಗೂ ಸರ್ವಜ್ಞನಗರ ವಿಭಾಗಗಳಲ್ಲಿ ತಲಾ 356, ದಾಸರಹಳ್ಳಿ 246, ವಿದ್ಯಾರಣ್ಯಪುರ 244, ಹೆಬ್ಬಾಳ 221, ಪುಲಕೇಶಿನಗರ 159 ಹಾಗೂ ಯಲಹಂಕ ವಿಭಾಗದಲ್ಲಿ 141 ಅಹವಾಲುಗಳು ಬಾಕಿ ಉಳಿದಿವೆ.

**25ಕ್ಕೂ ಹೆಚ್ಚು ಮೂಲಗಳಿಂದ ದೂರು ಸ್ವೀಕಾರ:**

ಪಾಲಿಕೆ ಕಚೇರಿ, ಇ–ಮೇಲ್, ದಿನಪತ್ರಿಕೆಗಳು, ವಾಟ್ಸ್‌ಆ?ಯಪ್, ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಎಕ್ಸ್ ಸೇರಿದಂತೆ 25ಕ್ಕೂ ಹೆಚ್ಚು ಮೂಲಗಳಿಂದ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಲಾಗುತ್ತಿದೆ. ಬಳಿಕ ಅವುಗಳನ್ನು 'ಸಹಾಯ 2.0'ನಲ್ಲಿ ದಾಖಲಿಸಿ, ಐಸಿಸಿಸಿ ಮೂಲಕ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳಿಗೆ ವರ್ಗಾಯಿಸಲಾಗುತ್ತಿದೆ.

ಅಹವಾಲುಗಳನ್ನು ಕೇವಲ ತಾಂತ್ರಿಕವಾಗಿ ಮುಕ್ತಾಯಗೊಳಿಸುವ ಬದಲು ಅಗತ್ಯವಿದ್ದಲ್ಲಿ ಸ್ಥಳ ಪರಿಶೀಲನೆ ನಡೆಸಿ, ನಾಗರಿಕರಿಗೆ ವಾಸ್ತವಿಕ ಪರಿಹಾರ ದೊರೆತಿರುವುದನ್ನು ಖಚಿತಪಡಿಸಿಕೊಂಡ ಬಳಿಕ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ ಈ ವ್ಯವಸ್ಥೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಉತ್ತರ ನಗರಪಾಲಿಕೆ ಅಯುಕ್ತರು ತಿಳಿಸಿದರು.

# ತಾಯಿ ಸಾವಿನ ನೋವಿನ ನಡುವೆಯೂ ಕುಟುಂಬ ಅಂಗಾಂಗ ದಾನ

ಬೆಂಗಳೂರು,ಸೆ.26–ತಾಯಿಯನ್ನು ಕಳೆದುಕೊಂಡ ನೋವಿನ ನಡುವೆಯೂ ಪತಿ ಹಾಗೂ ಇಬ್ಬರು ಮಕ್ಕಳು ಕೈಗೊಂಡ ಮಹತ್ವದ ನಿರ್ಧಾರ ಹಲವರ ಬದುಕಿಗೆ ಹೊಸ ಆಶಾಕಿರಣವಾಗಿದೆ. ಮೆದುಳು ನಿಷ್ಕ್ರಿಯಗೊಂಡ ಮಹಿಳೆಯೊಬ್ಬರ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಕುಟುಂಬ ಮಾನವೀಯತೆ ಮೆರೆದಿದೆ.

ಜಿಗಣಿ ಸಮೀಪದ ಹಾರಗದ್ದೆಯ ದ್ಯಾವಸಂದ್ರ ಗ್ರಾಮದ ನಿವಾಸಿ ಕುಸುಮಾ (39) ಅಂಗಾಂಗ ದಾನ ಮಾಡಿದ ಮಹಿಳೆ. ಕುಸುಮಾ ಅವರ ಪತಿ ಜಯಶಂಕರ್ ಖಾಸಗಿ ಕಂಪನಿಯೊಂದನ್ನು ನಡೆಸುತ್ತಿದ್ದು, ದಂಪತಿಗೆ ಓರ್ವ ಪುತ್ರಿ ಹಾಗೂ ಓರ್ವ ಪುತ್ರ ಇದ್ದಾರೆ.

ಕುಟುಂಬದೊಂದಿಗೆ ಮನೆಯಲ್ಲಿದ್ದ ವೇಳೆ ಕುಸುಮಾ ಅವರ ಆರೋಗ್ಯದಲ್ಲಿ ಏಕಾಏಕಿ ಏರುಪೇರಾಗಿದ್ದು, ಹೃದಯಾಘಾತದಿಂದ ಕುಸಿದುಬಿದ್ದಿದ್ದರು. ಕೂಡಲೇ ಅವರನ್ನು ಬೊಮ್ಮಸಂದ್ರದ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ, ವೈದ್ಯಕೀಯ ಪರೀಕ್ಷೆಗಳ ಬಳಿಕ ಕುಸುಮಾ ಅವರ ಮೆದುಳು ನಿಷ್ಕ್ರಿಯಗೊಂಡಿರುವುದನ್ನು ವೈದ್ಯರು ಕುಟುಂಬಕ್ಕೆ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಪತಿ ಜಯಶಂಕರ್ ಹಾಗೂ ಇಬ್ಬರು ಮಕ್ಕಳು ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ. ಸಾವಿನ ಬಳಿಕವೂ ಹಲವು ಜೀವಗಳಿಗೆ ನೆರವಾಗಲಿ ಎಂಬ ಉದ್ದೇಶದಿಂದ ಕುಸುಮಾ ಅವರ ಅಂಗಾಂಗಗಳನ್ನು ದಾನ ಮಾಡಲು ಕುಟುಂಬ ಒಪ್ಪಿಗೆ ನೀಡಿದೆ.

ಅದರಂತೆ ಕುಸುಮಾ ಅವರ ಕಣ್ಣು, ಹೃದಯ, ಶ್ವಾಸಕೋಶ, ಲಿವರ್ ಹಾಗೂ ಕಿಡ್ನಿಗಳನ್ನು ದಾನ ಮಾಡಲಾಗಿದೆ. ಈ ಅಂಗಾಂಗ ದಾನದಿಂದ ಸುಮಾರು 7ರಿಂದ 8 ಮಂದಿಯ ಜೀವ ಉಳಿಸಲು ನೆರವಾಗಲಿದೆ ಎಂದು ತಿಳಿಸಲಾಗಿದೆ.

ತಾಯಿಯನ್ನು ಕಳೆದುಕೊಂಡ ದುಃಖದ ನಡುವೆಯೂ ಪತಿ ಹಾಗೂ ಮಕ್ಕಳು ಕೈಗೊಂಡ ಈ ಮಾನವೀಯ ನಿರ್ಧಾರ ಅನೇಕರಿಗೆ ಪ್ರೇರಣೆಯಾಗಿದೆ. ಕುಸುಮಾ ಅವರ ಅಂಗಾಂಗ ದಾನದಿಂದ ಹಲವು ಕುಟುಂಬಗಳಿಗೆ ಹೊಸ ಆಶಾಕಿರಣ ದೊರೆತಿದೆ.

# ಎಐ ದುರುಪಯೋಗದಿಂದ 1 ಬಿಲಿಯನ್ ಜನರ ಸಾವಿನ ಭೀತಿ

ನ್ಯೂಯಾರ್ಕ್/ಕ್ಯಾನ್‌ಬೆರ್ರಾ,ಸೆ.26– ತಪ್ಪು ಕೈಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಅತ್ಯಂತ ಅಪಾಯಕಾರಿಯಾಗಿ ಮಾರ್ಪಡಲಿದ್ದು, ಇದು ಭವಿಷ್ಯದಲ್ಲಿ ಬರೋಬ್ಬರಿ 1 ಬಿಲಿಯನ್ (100 ಕೋಟಿ) ಜನರ ಸಾವಿಗೆ ಕಾರಣವಾಗಬಹುದು ಎಂದು ಮೈಕ್ರೋಸಾಫ್ಟ್ ಸಹ–ಸಂಸ್ಥಾಪಕ ಬಿಲ್ ಗೇಟ್ಸ್ ಆತಂಕಕಾರಿ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ಎಐ ಪರಿಕರಗಳನ್ನು ದುಷ್ಟಶಕ್ತಿಗಳು ದುರುಪಯೋಗಪಡಿಸಿಕೊಂಡರೆ ಅದು ಮಾನವಕುಲ ಇದುವರೆಗೆ ಕಂಡುಕೊಂಡ ಯಾವುದೇ ವಿನಾಶಕಾರಿ ಆಯುಧಕ್ಕಿಂತಲೂ ಹೆಚ್ಚು ಭೀಕರ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ. ಕೇವಲ ಕಾರ್ಪೊರೇಟ್ ಹಂತದ ನಿಯಂತ್ರಣಗಳು ಈ ತಂತ್ರಜ್ಞಾನಕ್ಕೆ ಸಾಕಾಗುವುದಿಲ್ಲವಾದ್ದರಿಂದ, ಅಮೆರಿಕ ಸೇರಿದಂತೆ ವಿಶ್ವದ ಪ್ರಮುಖ ಸರ್ಕಾರಗಳು ತಕ್ಷಣವೇ ಕಟ್ಟುನಿಟ್ಟಿನ ನಿಯಂತ್ರಣ ಹಾಗೂ ಕಾನೂನುಗಳನ್ನು ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದ್ದಾರೆ.

ಇದೇ ವೇಳೆ, ವಿಶ್ವದಲ್ಲೇ ಮೊದಲ ಬಾರಿಗೆ ಎಐ ಮಾದರಿಯೊಂದು ಆಸ್ಟ್ರೇಲಿಯಾದ ಸರ್ಕಾರಿ ಪೋರ್ಟಲ್ ಒಂದನ್ನು ಹ್ಯಾಕ್ ಮಾಡಿರುವುದು ಜಾಗತಿಕ ಮಟ್ಟದಲ್ಲಿ ಭಾರೀ ಆತಂಕಕ್ಕೆ ಕಾರಣವಾಗಿದೆ. ಓಪನ್‌ಎಐ ಸಂಸ್ಥೆಯ ಎಐ ಮಾದರಿಯು ಆಸ್ಟ್ರೇಲಿಯಾದ ಆರೋಗ್ಯ ದತ್ತಾಂಶ ವ್ಯವಸ್ಥೆಗೆ ಅಕ್ರಮವಾಗಿ ನುಸುಳಿ, ಅಲ್ಲಿನ ಆರೋಗ್ಯ ವೆಚ್ಚ ಹಾಗೂ ಔಷಧ ಸಬ್ಸಿಡಿಗಳಿಗೆ ಸಂಬಂಧಿಸಿದ ಪ್ರಮುಖ ಫೈಲ್‌ಗಳನ್ನು ಪ್ರವೇಶಿಸಿದೆ.

ಈ ಗಂಭೀರ ಘಟನೆ ನಡೆದ 54 ದಿನಗಳ ನಂತರ ಓಪನ್‌ಎಐ ಆಸ್ಟ್ರೇಲಿಯಾ ಸರ್ಕಾರಕ್ಕೆ ಮಾಹಿತಿ ನೀಡಿದ್ದು, ಇದು ಆಸ್ಟ್ರೇಲಿಯಾ ಪ್ರಧಾನಿ ಆಲ್ಬನೀಸ್ ಅವರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಅವರು ಓಪನ್‌ಎಐ



ಸಿಇಒ ಸ್ಯಾಮ್ ಆಲ್ಟ್‌ಮನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಮಾಹಿತಿ ನೀಡಲು ಮಾಡಿದ ವಿಳಂಬವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಈ ಘಟನೆಯ ನಂತರ ಆಸ್ಟ್ರೇಲಿಯಾ ಸರ್ಕಾರವು ಸಮಗ್ರ ತನಿಖೆಗೆ ಆದೇಶಿಸಿದ್ದು, ಓಪನ್‌ಎಐ ಸಂಸ್ಥೆಯು ಕ್ರಿಮಿನಲ್ ಆರೋಪಗಳನ್ನು ಎದುರಿಸಬೇಕಾಗುತ್ತದೆಯೇ ಹಾಗೂ ಆಸ್ಟ್ರೇಲಿಯಾದ ಭದ್ರತಾ ಸಂಸ್ಥೆಗಳು ಆರಂಭದಲ್ಲೇ ಈ ಸೈಬರ್ ನುಸುಳುವಿಕೆಯನ್ನು ಪತ್ತೆಹಚ್ಚಲು ಏಕೆ ವಿಫಲವಾದವು ಎಂಬ ಬಗ್ಗೆ ತನಿಖೆ ನಡೆಸುತ್ತಿದೆ. ಘಟನೆಯನ್ನು ಒಪ್ಪಿಕೊಂಡಿರುವ ಓಪನ್‌ಎಐ ಸಿಇಒ ಸ್ಯಾಮ್ ಆಲ್ಟ್‌ಮನ್, ತಮ್ಮ ಎಐ ಮಾದರಿಗಳು ಕಂಪನಿಯು ನಿರೀಕ್ಷಿಸದ ಮತ್ತು ಉದ್ದೇಶಿಸದ ಕೆಲವು ಸ್ವತಂತ್ರ ಕ್ರಮಗಳನ್ನು ತೆಗೆದುಕೊಂಡಿವೆ ಎಂದು ಸಮ್ಮತಿಸಿದ್ದಾರೆ.

ಮಾನವಕುಲವು ಎಐ ಮೇಲಿನ ನಿಯಂತ್ರಣವನ್ನು ಕಳೆದುಕೊಂಡರೆ ಭವಿಷ್ಯದಲ್ಲಿ ಗಂಭೀರ ವಿಕೋಪಗಳು ಸಂಭವಿಸಬಹುದು ಎಂದಿರುವ ಅವರು, ತಂತ್ರಜ್ಞಾನವು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಅದನ್ನು ಮಾನವನ ನಿಯಂತ್ರಣದಲ್ಲೇ ಇರಿಸಲು ವಿಶ್ವದ ಎಲ್ಲಾ ದೇಶಗಳು ಒಗ್ಗೂಡಿ ಜಾಗತಿಕ ಸುರಕ್ಷತಾ ಮಾನದಂಡಗಳನ್ನು ತಕ್ಷಣವೇ ರೂಪಿಸಬೇಕಾಗಿದೆ ಎಂದು ಪ್ರತಿಪಾದಿಸಿದ್ದಾರೆ.

# ವೀರಶೈವ ಲಿಂಗಾಯತ ಧರ್ಮ ಸಂರಕ್ಷಣಾ ಸಮ್ಮೇಳನ



ಬೆಂಗಳೂರು.ಸೆ. 26:– ನಾಳೆ 26 ಮತ್ತು 27 ರಂದು ನಗರದ ಸುಜ್ಞಾನ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಅಖಿಲಭಾರತ ವೀರಶೈವ ಶಿವಾಚಾರ್ಯರ ಆಶ್ರಯದಲ್ಲಿ ವೀರಶೈವ ಲಿಂಗಾಯತರ ಸಂರಕ್ಷಣಾ ಸಮ್ಮೇಳನವನ್ನು ಬಿಜೆಪಿ ರಾಜ್ಯದ್ಯಕ್ಷರಾದ ಬಿ.ವೈ.ವಿಜಯೇಂದ್ರ ರವರು ವಿಚಾರ ಸಂಕೀರಣ ವನ್ನುಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮವನ್ನು ಶ್ರೀಶೈಲ ಜಗದ್ಗುರುಗಳು ಉದ್ಘಾಟಿಸಲಿದ್ದಾರೆ.

26 ನೇ ತಾರೀಖು 4 ವಿಚಾರ ಸಂಕೀರಣಗಳು ನಡೆಯಲಿದೆ.

27 ನೇ ತಾರೀಖು ಭಾನುವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ.

ಪಂಚಪೀಠಾಧೀಶರುಗಳು ದಿವ್ಯಸಾನಿಧ್ಯವಹಿಸಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಈಶ್ವರಖಂಡ್ರೆ,ಸಚಿವರಾದ ವಿಜಯಾನಂದ ಕಾಶಪ್ಪನವರ್. ಹಾಜರಿಲಿದ್ದಾರೆ.

ಆಂಧ್ರ, ಮಹಾರಾಷ್ಟ, ತೆಲಂಗಾಣ, ಸೇರಿದಂತೆ ರಾಜ್ಯದಾದ್ಯಂತ ಸುಮಾರು 500 ಮಠಾದೀಶರುಗಳು ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಪ್ರದಾನಕಾರ್ಯದರ್ಶಿ ಶಿವಗಂಗೆಯ ಮೇಲಣಗವಿಯ ಮಠಾದೀಶರಾದ ಡಾ.ಮಲಯಶಾಂತಮುನಿಶಿವಾಚಾರ್ಯ ಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು..ಪತ್ರಿಕಾಗೋಷ್ಠಿಯಲ್ಲಿ ಸಾರಂಗ ಮಠದ ಡಾ.ಪ್ರಭುದೇವಸಾರಂಗಸ್ವಾಮೀಜಿ ಮತ್ತು ಮಹಾರಾಷ್ಟದ ಸ್ವಾಮೀಜಿಗಳು ಹಾಜರಿದ್ದರು.

# ಭಾರತ - ಪನಾಮಾ ಡ್ರಾನಲ್ಲಿ ಅಂತ್ಯ

ಬೆಂಗಳೂರು, ಸೆ. 26: ದಾಳಿ ಮತ್ತು ರಕ್ಷಣೆ ವಿಭಾಗದಲ್ಲಿ ಅತ್ಯಅಮೋಘ ಪ್ರದರ್ಶನ ನೀಡಿದ ಭಾರತ ಫುಟ್ಬಾಲ್ ತಂಡ ಫಿಫಾ ಅಂತಾರಾಷ್ಟ್ರೀಯ ಸೌಹಾರ್ದ ಪಂದ್ಯದಲ್ಲಿ ವಿಶ್ವ ಶ್ರೇಯಾಂಕದಲ್ಲಿ 44ನೇ ಸ್ಥಾನದಲ್ಲಿರುವ ಪನಾಮಾ ತಂಡದ ವಿರುದ್ಧ 1–1 ಗೋಲುಗಳಿಂದ ಡ್ರಾ ಮಾಡಿಕೊಂಡಿತು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಮೇಲುಗೈ ಸಾಧಿಸಿತ್ತಾದರೂ ಐತಿಹಾಸಿಕ ಜಯ ದಾಖಲಿಸಲು ಸಾಧ್ಯವಾಗಲಿಲ್ಲ. ಆದರೆ ಇತ್ತೀಚಿನ ಫಿಫಾ ವಿಶ್ವಕಪ್ ಅಭಿಯಾನದಲ್ಲಿ ಆಡಿದ್ದ ಹಲವು ಆಟಗಾರರನ್ನು ಒಳಗೊಂಡಿದ್ದ ಪನಾಮಾ ವಿರುದ್ಧದ ಈ ಪ್ರದರ್ಶನ ಭಾರತಕ್ಕೆ ಸಾಕಷ್ಟು ಆತ್ಮವಿಶ್ವಾಸವನ್ನು ತಂದುಕೊಟ್ಟಿತು.

ಮುಖ್ಯ ಕೋಚ್ ಖಾಲಿದ್ ಜಮೀಲ್ ಅವರ ನೇತೃತ್ವದಲ್ಲಿ ಭಾರತ ನೀಡಿದ ಅತ್ಯಂತ ಪ್ರೋತ್ಸಾಹದಾಯಕ ಪ್ರದರ್ಶನಗಳಲ್ಲಿ ಇದೂ ಒಂದಾಗಿದೆ. ಭಾರತ ಪರ ರಯಾನ್ ವಿಲಿಯಮ್ಸ್ 41ನೇ ನಿಮಿಷದಲ್ಲಿ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ 68ನೇ ನಿಮಿಷದಲ್ಲಿ ಓಮರ್ ವ್ಯಾಲೆನ್ಸಿಯಾ ಪನಾಮಾ ಪರ ಸಮಬಲದ ಗೋಲು ದಾಖಲಿಸಿದರು.

ಪಂದ್ಯದಾದ್ಯಂತ ಭಾರತ ಕೇವಲ ರಕ್ಷಣಾತ್ಮಕವಾಗಿ ಆಡದೆ, ಆಕ್ರಮಣಕಾರಿ ಆಟಕ್ಕೂ ಒತ್ತು ನೀಡಿದ್ದು ಗಮನ ಸೆಳೆಯಿತು. ಮುಂಬರುವ ಎರಡು ಮಹತ್ವದ ಸ್ನೇಹಪಂದ್ಯಗಳಲ್ಲಿ ಐದು ಬಾರಿ ವಿಶ್ವ ಚಾಂಪಿಯನ್ ಬ್ರೆಜಿಲ್ ವಿರುದ್ಧ ಅಕ್ಟೋಬರ್ 3ರಂದು ಕೋಲ್ಕತ್ತಾದಲ್ಲಿ ಹಾಗೂ ಎರಡು ಬಾರಿ ವಿಶ್ವ ಚಾಂಪಿಯನ್ ಉರುಗ್ವೆ ವಿರುದ್ಧ ಅಕ್ಟೋಬರ್ 6ರಂದು ಭಾರತ ಸೆಣಸಲಿದ್ದು, ಈ ಪ್ರದರ್ಶನ ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಭಾರತದ ರಕ್ಷಣಾ ವಿಭಾಗ, ವಿಶೇಷವಾಗಿ ಅನ್ವರ್ ಅಲಿ, ಪಂದ್ಯದುದ್ದಕ್ಕೂ ಉತ್ತಮ ಪ್ರದರ್ಶನ ನೀಡಿದರು. ಎಡಪಾರ್ಶ್ವದಿಂದ ಭಾರತ ಹಲವು ಅಪಾಯಕಾರಿ ದಾಳಿಗಳನ್ನು ನಡೆಸಿತು. ಅಂತಹದ್ದೇ ಒಂದು ದಾಳಿಯ ಫಲವಾಗಿ ಭಾರತ ಮೊದಲ ಗೋಲು ಗಳಿಸಿತು. ಆಕಾಶ್ ಮಿಶ್ರಾ ಅವರು ಬಿಜೋಯ್ ವರ್ಗೀಸ್ ಅವರೊಂದಿಗೆ ತ್ವರಿತ ಪಾಸ್ ವಿನಿಮಯ ಮಾಡಿಕೊಂಡು ಚೆಂಡನ್ನು ಮುಂದೆ ಕಳುಹಿಸಿದರು. ವಿಲಿಯಮ್ಸ್ ಪನಾಮಾದ ರಕ್ಷಣಾ ಸಾಲಿನ ಹಿಂದೆ ಚಾಣಾಕ್ಷವಾಗಿ ಓಡಿ, ಎಡಗಾಲಿನಿಂದ ನಿಖರವಾದ ಹೊಡೆತದ ಮೂಲಕ ಮಾರ್ಕೋಸ್ ರೆಯೆಸ್ ಅವರನ್ನು ಮೀರಿಸಿ ಗೋಲು ದಾಖಲಿಸಿದರು.

79ನೇ ನಿಮಿಷದಲ್ಲಿ ಭಾರತ ಮತ್ತೆ ಮುನ್ನಡೆ ಸಾಧಿಸುವ ಸಮೀಪಕ್ಕೆ ಬಂದಿತ್ತು. ಆಶಿಕ್ ಬಾಕ್ಸ್ ಒಳಗೆ ನೆಲಮಟ್ಟದ ಕ್ರಾಸ್ ನೀಡಿದರು. ಆದರೆ ಎಡ್ಮಂಡ್ ಆ ಅವಕಾಶವನ್ನು ಗೋಲಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.

ಕೊನೆಯವರೆಗೂ ಪನಾಮಾದ ಒತ್ತಡವನ್ನು ಸಮರ್ಥವಾಗಿ ಎದುರಿಸಿದ ಭಾರತ ಅಂತಿಮವಾಗಿ 1–1ರ ಸಮಬಲ ಸಾಧಿಸಿತು. ಈ ಫಲಿತಾಂಶ ಖಾಲಿದ್ ಜಮೀಲ್ ಅವರ ತಂಡಕ್ಕೆ ಮುಂಬರುವ ಬ್ರೆಜಿಲ್ ಮತ್ತು ಉರುಗ್ವೆ ವಿರುದ್ಧದ ಹೈ–ಪ್ರೊಫೈಲ್ ಪಂದ್ಯಗಳಿಗೆ ಮುನ್ನ ಮಹತ್ವದ ಆತ್ಮವಿಶ್ವಾಸವನ್ನು ನೀಡಿದೆ.

# ಬೆಸ್ಪೋಕ್ ಎಐ ಉಪಕರಣಗಳ ಶ್ರೇಣಿ ಬಿಡುಗಡೆ

ಗುರುಗ್ರಾಮ.ಸೆ.26: ಗ್ರಾಹಕರ ದೈನಂದಿನ ಜೀವನವನ್ನು ಮತ್ತಷ್ಟು ಸರಳಗೊಳಿಸುವ ಉದ್ದೇಶದಿಂದ ಸ್ಯಾಮ್‌ಸಂಗ್ ಇಂಡಿಯಾ 2026ರ ಗೃಹೋಪಯೋಗಿ ಉಪಕರಣಗಳ ಶ್ರೇಣಿಯನ್ನು ಬಿಡುಗಡೆ ಮಾಡಿದೆ.

ದ್ಧಿ ಆಧಾರಿತ 32 ಇಂಚಿನ ಡಿಸ್‌ಪ್ಲೇ, ವೀಡಿಯೊದಿಂದ ರೆಸಿಪಿ, ಕುಟುಂಬ ಹಾಗೂ ಸಾಕುಪ್ರಾಣಿ ಆರೈಕೆ ವೈಶಿಷ್ಟ್ಯಗಳು.

ಎಐ ನಿಯಂತ್ರಣ, ಶುದ್ಧೀಕರಣ, ಷಿಂಗ್ಸ್ ಮೂಲಕ ಸ್ಮಾರ್ಟ್ ಹವಾಮಾನ ನಿರ್ವಹಣೆ.23,000 ಮೈಕ್ರೋ ರಂಧ್ರಗಳ ಮೂಲಕ ನೇರ ಗಾಳಿಯ ಹೊಡೆತವಿಲ್ಲದ ತಂಪು; ಎಐ ಎನರ್ಜಿ ಮೋಡ್ ಮೂಲಕ ಶೇ.30ರವರೆಗೆ ಇಂಧನ ಉಳಿತಾಯ ಎಂದು ಸಂಸ್ಥೆ ತಿಳಿಸಿದೆ.

ವೈಯಕ್ತಿಕ ಅನುಭವಕ್ಕೆ ಎಐ ಉತ್ತಮ ಆಯ್ಕೆಗಳಲ್ಲಿ ಒಂದಾಗಿದೆ.

ಹೊಸ ಶ್ರೇಣಿಯಲ್ಲಿ ಎಐ ಹೋಮ್ ಬಿಕ್ಸ್‌ಬಿ ವಾಯ್ಸ್ ಸಹಾಯಕ ಮತ್ತು , ಷಿಂಗ್ಸ್ ಪ್ರಮುಖ ಪಾತ್ರವಹಿಸಲಿವೆ. ಧ್ವನಿ ಗುರುತಿಸುವ ವ್ಯವಸ್ಥೆಯ ಮೂಲಕ ಬಳಕೆದಾರರಿಗೆ ವೈಯಕ್ತೀಕರಿಸಿದ ಅನುಭವ ಒದಗಿಸಲಾಗುತ್ತದೆ. ಕುಟುಂಬದ ಸದಸ್ಯರ ಅಸಾಮಾನ್ಯ ಚಟುವಟಿಕೆಗಳನ್ನು ಗುರುತಿಸಿ ಎಚ್ಚರಿಕೆ ನೀಡುವ ಸೇವೆಯನ್ನೂ ಪರಿಚಯಿಸಲಾಗಿದೆ. ಜತೆಗೆ ಕಾರ್ಯನಿರ್ವಹಿಸುವ ವೈಶಿಷ್ಟ್ಯವು ನಿದ್ರೆಯ ಮಾದರಿಗೆ ಅನುಗುಣವಾಗಿ ಂಅ ಸೆಟ್ಟಿಂಗ್‌ಗಳನ್ನು ಹೊಂದಿಸಲು ನೆರವಾಗಲಿದೆ.

ಮೂಲಕ ಬಹು–ಪದರದ ಭದ್ರತೆ ಒದಗಿಸಲಾಗಿದ್ದು,7 ವರ್ಷಗಳವರೆಗೆ ಸಾಫ್ಟ್‌ವೇರ್ ಅಪ್‌ಡೇಟ್‌ಗಳು ಲಭ್ಯವಾಗಲಿವೆ ಎಂದು ಕಂಪನಿ ಹೇಳಿದೆ.

ಸ್ಯಾಮ್‌ಸಂಗ್ ಸೌತ್‌ವೆಸ್ಟ್ ಏಷ್ಯಾ ಅಧ್ಯಕ್ಷ ಹಾಗೂ ಸಿಇಒ ಜೆಬಿ ಪಾರ್ಕ್, AI ತಂತ್ರಜ್ಞಾನವು ಗ್ರಾಹಕರ ಜೀವನಶೈಲಿಗೆ ಹೊಂದಿಕೊಳ್ಳುವಂತೆ ಸ್ಮಾರ್ಟ್ ಹೋಮ್ ರೂಪಿಸುವುದು ಸಂಸ್ಥೆಯ ಉದ್ದೇಶವಾಗಿದೆ ಎಂದು ಹೇಳಿದರು.

# ಜಾಗತಿಕ ಸ್ಪರ್ಧೆಗೆ ಇಬ್ಬರು ಯುವಕರು ಆಯ್ಕೆ

ಬೆಂಗಳೂರು,ಸೆ.26– ಚೀನಾದ ಶಾಂಘೈನಲ್ಲಿ ನಡೆಯಲಿರುವ ಪ್ರತಿಷ್ಠಿತ ವರ್ಲ್ಡ್ ಸ್ಕಿಲ್ಸ್ ಶಾಂಘೈ 2026 ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲು ಪಿಡಿಲೈಟ್ ಇಂಡಸ್ಟ್ರೀಸ್ ಲಿಮಿಟೆಡ್‌ನ ತರಬೇತಿ ಪಡೆದ ಇಬ್ಬರು ಯುವ ಪ್ರತಿಭೆಗಳು ಆಯ್ಕೆಯಾಗಿದ್ದಾರೆ.

ಪ್ರಕಾಶ್ ಸುತಾರ್ ಹಾಗೂ ಪಂಕಜ್ ಜಂಗ್ರಾ ಅವರು ಅಹಮದಾಬಾದ್‌ನ ಪಿಡಿಲೈಟ್ ವುಡ್‌ವರ್ಕಿಂಗ್ ಆ?ಯಂಡ್ ಪ್ಲಂಬಿಂಗ್ ಸೆಂಟರ್ ಫಾರ್ ಅಡ್ವಾನ್ಸ್ಡ್ ಸ್ಕಿಲ್ಸ್ ನಲ್ಲಿ ಉನ್ನತ ಮಟ್ಟದ ತರಬೇತಿ ಪಡೆದಿದ್ದಾರೆ. ಇತ್ತೀಚೆಗೆ ನಡೆದ ಇಂಡಿಯಾಸ್ಕಿಲ್ಸ್ 2026 ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಗಮನಾರ್ಹ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಇವರಿಬ್ಬರು ಜಾಗತಿಕ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸೆಪ್ಟೆಂಬರ್ 22ರಿಂದ 27ರವರೆಗೆ ಶಾಂಘೈನಲ್ಲಿ ನಡೆಯುತ್ತಿರುವ 48ನೇ ಆವೃತ್ತಿಯ ವರ್ಲ್ಡ್ ಸ್ಕಿಲ್ಸ್ ಸ್ಪರ್ಧೆಯಲ್ಲಿ 70ಕ್ಕೂ ಹೆಚ್ಚು ದೇಶಗಳು ಮತ್ತು ಪ್ರಾಂತ್ಯಗಳಿಂದ ಸುಮಾರು 1,400 ಯುವ ವೃತ್ತಿಪರರು ಭಾಗವಹಿಸಲಿದ್ದಾರೆ. ಒಟ್ಟು 64 ಕೌಶಲ್ಯ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಪಿಡಿಲೈಟ್ ಇಂಡಸ್ಟ್ರೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಸುಧಾಂಶು ವತ್ಸ್ ಮಾತನಾಡಿ, ದೇಶದ ಆರ್ಥಿಕ ಬೆಳವಣಿಗೆಗೆ ಬೃಹತ್ ಮೂಲಸೌಕರ್ಯಗಳ ಜೊತೆಗೆ ನುರಿತ ಮಾನವ ಸಂಪನ್ಮೂಲವೂ ಅಗತ್ಯವಾಗಿದೆ ಎಂದು ಹೇಳಿದ್ದಾರೆ.

ಇಂಡಿಯಾಸ್ಕಿಲ್ಸ್‌ನಲ್ಲಿ ಪಿಡಬ್ಲ್ಯೂಪಿ ಕೇಂದ್ರದ ತರಬೇತಿ ಪಡೆದ ಅಭ್ಯರ್ಥಿಗಳು ತೋರಿದ ಸಾಧನೆ ಮತ್ತು ವರ್ಲ್ಡ್ ಸ್ಕಿಲ್ಸ್ ಶಾಂಘೈಗೆ ಅವರ ಆಯ್ಕೆ, ಕೈಗಾರಿಕಾ ಅಗತ್ಯಗಳಿಗೆ ಅನುಗುಣವಾದ ವೃತ್ತಿಪರ ತರಬೇತಿಯ ಮಹತ್ವವನ್ನು ತೋರಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

# 'ದಿ ಒನ್' ಸಿನಿಮಾಗೆ ಮಿಶ್ರ ಪ್ರತಿಕ್ರಿಯೆ



ಬೆಂಗಳೂರು, ಸೆ.26: ಸಿದ್ಧಾರ್ಥ್ ಮಲ್ಹೋತ್ರಾ ಮತ್ತು ತಮನ್ನಾ ಭಾಟಿಯಾ ಅಭಿನಯದ ಜಾನಪದ ಆಧಾರಿತ ಅಲೌಕಿಕ ಥ್ರಿಲ್ಲರ್ 'ದಿ ಒನ್' ಚಿತ್ರವು ಅಂತಿಮವಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ. ಪ್ರೇಕ್ಷಕರು ಹಾಗೂ ವಿಮರ್ಶಕರಿಂದ ಮಿಶ್ರ ಪ್ರತಿಕ್ರಿಯೆ ಪಡೆದಿರುವ ಈ ಚಿತ್ರದಲ್ಲಿ ತಮನ್ನಾ ಭಾಟಿಯಾ ಅವರ ಅಭಿನಯಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ವಿಶೇಷವಾಗಿ ಜಾನಪದ ಮತ್ತು ಅರಣ್ಯ ದೇವತೆಗೆ ಸಂಬಂಧಿಸಿದ ನಿಗೂಢ ದೃಶ್ಯಗಳಲ್ಲಿ ಅವರ ನಟನೆ ಹಾಗೂ ಪರದೆಯ ಮೇಲಿನ ಉಪಸ್ಥಿತಿಯನ್ನು ವಿಮರ್ಶಕರು ಮುಕ್ತಕಂಠದಿಂದ ಹೊಗಳಿದ್ದಾರೆ. ಹಳೆಯ ದೇವಾಲಯ, ಅರಣ್ಯದೇವತೆ ಮತ್ತು ಛಠ್ ಪೂಜೆಗೆ ಸಂಬಂಧಿಸಿದ ಜಾನಪದ ಕಥೆಯೊಂದಿಗೆ ಆಕರ್ಷಕವಾಗಿ ಪ್ರಾರಂಭವಾಗುವ ಚಿತ್ರವು, ದ್ವಿತೀಯಾರ್ಧದಲ್ಲಿ ಮೂಲ ವಿಷಯದಿಂದ ಕೊಂಚ ಪಥಬದಲಿಸುತ್ತದೆ. ಹಾರರ್–ಥ್ರಿಲ್ಲರ್ ನಿರೂಪಣೆಯಲ್ಲಿ ಬಲವಂತವಾಗಿ ಸೇರಿಸಲಾದ ಹಾಡುಗಳು ಚಿತ್ರದ ಸಸ್ಪೆನ್ಸ್ ಅನ್ನು ದುರ್ಬಲಗೊಳಿಸಿದ್ದು, ನಿರ್ಮಾಪಕರು ಈ ಕಥಾವಸ್ತುವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬುದು ವಿಮರ್ಶಕರ ಅಭಿಪ್ರಾಯವಾಗಿದೆ.

ಸುಮಾರು 80 ಕೋಟಿ ಭಾರಿ ಬಜೆಟ್‌ನಲ್ಲಿ ನಿರ್ಮಾಣಗೊಂಡಿರುವ ಈ ಚಿತ್ರವು ಸೆಪ್ಟೆಂಬರ್ 25 ರಂದು ತೆರೆಕಂಡಿದ್ದು, ಮೊದಲ ದಿನವೇ ಭಾರತೀಯ ಬಾಕ್ಸ್ ಆಫೀಸ್‌ನಲ್ಲಿ 8 ಕೋಟಿಯಿಂದ 9.60 ಕೋಟಿ ವರೆಗೆ ಗಳಿಸುವ ಮೂಲಕ ಗೌರವಾನ್ವಿತ ಆರಂಭವನ್ನು ಪಡೆದುಕೊಂಡಿದೆ. ಖಂಅಓಖಐಐ ವರದಿಯ ಪ್ರಕಾರ, ದೇಶಾದ್ಯಂತ ಒಟ್ಟು 6,746 ಪ್ರದರ್ಶನಗಳನ್ನು ಕಂಡಿರುವ ಈ ಚಿತ್ರವು ಶೇಕಡಾ 28.5 ರಷ್ಟು ಒಟ್ಟಾರೆ ಆಕ್ಯುಪೆನ್ಸಿ ಪಡೆದಿದೆ. ಬೆಳಗಿನ ಪ್ರದರ್ಶನಗಳಲ್ಲಿ ಶೇಕಡಾ 12.23 ರಷ್ಟು ಆಕ್ಯುಪೆನ್ಸಿ ಕಂಡುಬಂದರೆ, ರಾತ್ರಿಯ ಪ್ರದರ್ಶನಗಳಲ್ಲಿ ಗರಿಷ್ಠ ಶೇಕಡಾ 41 ರಷ್ಟು ವೀಕ್ಷಕರು ಭಾಗವಹಿಸಿದ್ದಾರೆ. ವಾರಾಂತ್ಯದಲ್ಲಿ ಈ ಗಳಿಕೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.

ಈ ಉತ್ತಮ ಆರಂಭದೊಂದಿಗೆ 'ದಿ ಒನ್' ಚಿತ್ರವು ಇತ್ತೀಚೆಗೆ ಬಿಡುಗಡೆಯಾದ ಪ್ರಮುಖ ಚಿತ್ರಗಳ ಮೊದಲ ದಿನದ ಗಳಿಕೆಯನ್ನು ಮೀರಿಸಿದೆ. ಸನ್ನಿ ಡಿಯೋಲ್ ಮತ್ತು ಪ್ರೀತಿ ಜಿಂಟಾ ಅಭಿನಯದ 'ಪಾರ್ಟಿಷನ್ 1947' ಮೊದಲ ದಿನ 5.75 ಕೋಟಿ ಗಳಿಸಿದ್ದರೆ, ಅಕ್ಷಯ್ ಕುಮಾರ್ ಮತ್ತು ಸೈಫ್ ಅಲಿ ಖಾನ್ ಅವರ 'ಹೈವಾನ್' ಚಿತ್ರವು 3 ಕೋಟಿ ಗಳಿಸಿ ನಿಧಾನಗತಿಯ ಆರಂಭ ಪಡೆದಿತ್ತು. ಅಷ್ಟೇ ಅಲ್ಲದೆ, ಕಳೆದ ವಾರ ಬಿಡುಗಡೆಯಾಗಿದ್ದ 'ವೈಬ್' ಚಿತ್ರದ ಬಾಕ್ಸ್ ಆಫೀಸ್ ವೇಗಕ್ಕೂ 'ದಿ ಒನ್' ತಡೆ ನೀಡಿದೆ. ಸಿದ್ಧಾರ್ಥ್ ಮಲ್ಹೋತ್ರಾ ಮತ್ತು ತಮನ್ನಾ ಭಾಟಿಯಾ ಅವರಲ್ಲದೆ, ಈ ಚಿತ್ರದಲ್ಲಿ ಸುನಿಲ್ ಗ್ರೋವರ್, ಶ್ವೇತಾ ತಿವಾರಿ, ಅನುಪ್ ಸೋನಿ ಮತ್ತು ಮನೀಶ್ ಪಾಲ್ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ.

# ಬಿಗ್ ಬಾಸ್‌ನಲ್ಲಿ ಮನೋಜ್ ತಿವಾರಿ ಪುತ್ರಿ ರೀತಿ ಭಾವುಕ

ಮುಂಬೈ, ಸೆ. 26– ಖ್ಯಾತ ಗಾಯಕ ಹಾಗೂ ರಾಜಕಾರಣಿ ಮನೋಜ್ ತಿವಾರಿ ಅವರ ಪುತ್ರಿ ರೀತಿ ತಿವಾರಿ ಪ್ರಸ್ತುತ 'ಬಿಗ್ ಬಾಸ್ 20' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮದ ಇತ್ತೀಚಿನ ಸಂಚಿಕೆಯಲ್ಲಿ ತಮ್ಮ ತಂದೆ–ತಾಯಿಯ ವಿಚ್ಛೇದನ ಮತ್ತು ಬಾಲ್ಯದ ಕಹಿ ನೆನಪುಗಳನ್ನು ನೆನಪಿಸಿಕೊಂಡು ಕಣ್ಣೀರಿಟ್ಟಿದ್ದಾರೆ. ಶೋನ ಸಹಸ್ಪರ್ಧಿ ಮತ್ತು ಭೋಜಪುರಿ ನಟಿ ಆಮ್ರಪಾಲಿ ದುಬೆ ಅವರೊಂದಿಗೆ ಸಂಭಾಷಣೆ ನಡೆಸುವಾಗ ರೀತಿ ತಮ್ಮ ಮನದ ನೋವನ್ನು ತೋಡಿಕೊಂಡಿದ್ದಾರೆ.

ತಮಗೆ ಕೇವಲ ಎಂಟು ವರ್ಷ ವಯಸ್ಸಿದ್ದಾಗ ಹೆತ್ತವರು ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದರು ಮತ್ತು ಒಂಬತ್ತನೇ ವಯಸ್ಸಿನಲ್ಲಿ ವಿಚ್ಛೇದನ ಅಂತಿಮಗೊಂಡಿತು ಎಂದು ರೀತಿ ತಿಳಿಸಿದ್ದಾರೆ. ವಿಚ್ಛೇದನದ ನಂತರ ತಾಯಿಗೆ ತಮ್ಮ ಕಸ್ಟಡಿ ದೊರೆತಿತ್ತಾದರೂ, ತಂದೆ ಮನೋಜ್ ತಿವಾರಿ ತಮ್ಮ ಮಗಳ ಕಸ್ಟಡಿಗಾಗಿ ಸಾಕಷ್ಟು ಹೋರಾಡಿದ್ದರು ಹಾಗೂ ದಂಪತಿ ಮತ್ತೆ ಒಂದಾಗಬಹುದು ಎಂಬ ಭರವಸೆಯನ್ನು ದೀರ್ಘಕಾಲದವರೆಗೆ ಹೊಂದಿದ್ದರು ಎಂದು ಅವರು ಹೇಳಿದ್ದಾರೆ. ತಂದೆಯಿಂದ ದೂರ ಉಳಿದಿದ್ದರಿಂದ ಅವರೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಭೇಟಿಯಾದಾಗಲೆಲ್ಲಾ ಇಬ್ಬರೂ ಭಾವುಕರಾಗಿ ಕಣ್ಣೀರಿಡುತ್ತಿದ್ದರು ಎಂದು ರೀತಿ ನೆನಪಿಸಿಕೊಂಡಿದ್ದಾರೆ. ಇದೇ ವೇಳೆ ತಮ್ಮ ತಂದೆಯ ಎರಡನೇ ಮದುವೆಯ ಕುರಿತು ಮಾತನಾಡಿದ ರೀತಿ, ತಂದೆಯ ಜೀವನಕ್ಕೆ ಸುರಭಿ ಅವರು ಬಂದಾಗ ತಮಗೇ ಅತ್ಯಂತ ಹೆಚ್ಚಿನ ಸಂತೋಷವಾಗಿತ್ತು ಎಂದು ತಿಳಿಸಿದ್ದಾರೆ. ರೀತಿ ಅವರ ಈ ಭಾವುಕ ಮಾತುಗಳನ್ನು ಕೇಳಿ ಆಮ್ರಪಾಲಿ ದುಬೆ ಅವರು ಕೂಡ ಕಣ್ಣೀರಾಗಿದ್ದು, ರೀತಿ ಅವರನ್ನು ಅಪ್ಪಿಕೊಂಡು ಸಾಂತ್ವನ ಹೇಳಿದ್ದಾರೆ.



# ಕೌನ್ ಬನೇಗಾ ಕರೋಡ್‌ಪತಿ ವೇದಿಕೆಯಲ್ಲಿ ಮಾಧುರಿ ದೀಕ್ಷಿತ್

ಮುಂಬೈ,ಸೆ26–ಚಿತ್ರರಂಗದ ಹಿರಿಯ ನಟ ಅಮಿತಾಬ್ ಬಚ್ಚನ್ ಮತ್ತು ನಟಿ ಮಾಧುರಿ ದೀಕ್ಷಿತ್ ಅವರು ಸುದೀರ್ಘ ಅವಧಿಯ ನಂತರ ಟಿವಿ ಪರದೆಯ ಮೇಲೆ ಒಟ್ಟಿಗೆ ಕಾಣಿಸಿಕೊಳ್ಳಲಿದ್ದಾರೆ

ಅಮಿತಾಬ್ ಬಚ್ಚನ್ ನಿರೂಪಣೆಯ ಕೌನ್ ಬನೇಗಾ ಕರೋಡ್‌ಪತಿ ಕಾರ್ಯಕ್ರಮದ ವಿಶೇಷ ಸಂಚಿಕೆಯಲ್ಲಿ ಮಾಧುರಿ ದೀಕ್ಷಿತ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ನಟಿ ತಮ್ಮ ಮರಾಠಿ ಆವೃತ್ತಿಯ ಕೌನ್ ಹೊನಾರ್ ಕರೋಡ್‌ಪತಿ ಕಾರ್ಯಕ್ರಮದ ಪ್ರಚಾರಕ್ಕಾಗಿ ಈ ವೇದಿಕೆಗೆ ಆಗಮಿಸುತ್ತಿದ್ದಾರೆ

ಇದಕ್ಕೂ ಮೊದಲು 2001 ರಲ್ಲಿ ಕೌನ್ ಬನೇಗಾ ಕರೋಡ್‌ಪತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾಧುರಿ ದೀಕ್ಷಿತ್ ಅವರು ಐವತ್ತು ಲಕ್ಷ ರೂಪಾಯಿಗಳನ್ನು ಗೆದ್ದಿದ್ದರು ನಂತರ 2010 ರ ನಾಲ್ಕನೇ ಆವೃತ್ತಿಯಲ್ಲೂ ಅವರು ಕಾಣಿಸಿಕೊಂಡಿದ್ದರು ಇದೀಗ ಮೂರನೇ ಬಾರಿಗೆ ಈ ಜನಪ್ರಿಯ ಕಾರ್ಯಕ್ರಮದ ಭಾಗವಾಗುತ್ತಿದ್ದಾರೆ

ಅಮಿತಾಬ್ ಬಚ್ಚನ್ ಮತ್ತು ಮಾಧುರಿ ದೀಕ್ಷಿತ್ ಅವರು 1998 ರ ಬಡೇ ಮಿಯಾ ಚೋಟೆ ಮಿಯಾ



ಚಿತ್ರದ ಮಖಾನಾ ಹಾಡಿನಲ್ಲಿ ಒಟ್ಟಿಗೆ ಕಾಣಿಸಿಕೊಂಡಿದ್ದರು 1989 ರಲ್ಲಿ ಟಿನ್ನು ಆನಂದ್ ನಿರ್ದೇಶನದ ಶಾನಖ್ತ್ ಚಿತ್ರದಲ್ಲಿ ಇಬ್ಬರೂ ನಟಿಸಬೇಕಿತ್ತು ಆದರೆ ಆ ಚಿತ್ರ ಸ್ಥಗಿತಗೊಂಡಿತ್ತು

ಪ್ರಸ್ತುತ ಪ್ರಸಾರವಾಗುತ್ತಿರುವ ಕೌನ್ ಬನೇಗಾ ಕರೋಡ್‌ಪತಿ ಆವೃತ್ತಿಯು ಅತ್ಯಂತ ಜನಪ್ರಿಯತೆ ಗಳಿಸಿದ್ದು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಈ ವಿಶೇಷ ಸಂಚಿಕೆಯು ಪ್ರಸಾರವಾದ ನಂತರ ಕಾರ್ಯಕ್ರಮದ ವೀಕ್ಷಣೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ

# ಕಾರ್ಪೆಂಟರ್‌ಗಳ ದಿನಾಚರಣೆ: 50ಕ್ಕೂ ಹೆಚ್ಚು ಸ್ಥಳಗಳಲ್ಲಿ ಆಕ್ಷನ್‌ಟೆಸಾ ಸಂಭ್ರಮ



ನವದೆಹಲಿ.ಸೆ26: ಪೀಠೋಪಕರಣ ಹಾಗೂ ಒಳಾಂಗಣ ವಿನ್ಯಾಸ ಕ್ಷೇತ್ರದ ಪ್ರಮುಖ ಆಧಾರಸ್ತಂಭವಾಗಿರುವ ಕಾರ್ಪೆಂಟರ್‌ಗಳನ್ನು ಗೌರವಿಸುವ ಉದ್ದೇಶದಿಂದ ಆಕ್ಷನ್ ಟೆಸಾ ಸೆ.24ರಂದು ದೇಶದ 50ಕ್ಕೂ ಹೆಚ್ಚು ಸ್ಥಳಗಳಲ್ಲಿ ರಾಷ್ಟ್ರೀಯ ಕಾರ್ಪೆಂಟರ್‌ಗಳ ದಿನಾಚರಣೆ ನಡೆಸಿತು.

'ಸಂಗ್ ಸಂಗ್ ಚಲೇನ್, ಆಗೆ ಬಢೇನ್' ಆಶಯದಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಪೆಂಟರ್‌ಗಳು ಹಾಗೂ ಅವರ ಕುಟುಂಬಗಳ ಕಲ್ಯಾಣಕ್ಕೆ ಹಲವು ಸೌಲಭ್ಯಗಳನ್ನು ಘೋಷಿಸಲಾಯಿತು.

ಹೆಣ್ಣುಮಕ್ಕಳ ವಿವಾಹಕ್ಕೆ 50 ಸಾವಿರದವರೆಗೆ ನೆರವು.ಶೈಕ್ಷಣಿಕ ನೆರವು: ಪ್ರತಿಭಾವಂತ ಮಕ್ಕಳಿಗೆ ?11 ಸಾವಿರ ವಿದ್ಯಾರ್ಥಿವೇತನ.

'ಸೂಪರ್ 30' ಅಡಿಯಲ್ಲಿ ಆಯ್ಕೆಯಾದವರಿಗೆ ಮೂರು ತಿಂಗಳ ವಸತಿ ಸಹಿತ ತರಬೇತಿಗೆ ಶೇ.100ರಷ್ಟು ನೆರವು.

ಕಾರ್ಪೆಂಟರ್‌ಗಳಿಗೆ ಗರಿಷ್ಠ 2 ಲಕ್ಷದ ಗುಂಪು ವೈಯಕ್ತಿಕ ಅಪಘಾತ ವಿಮೆ.

ಈ ಸೌಲಭ್ಯಗಳನ್ನು 'ಟೆಸಾ ಕನೆಕ್ಟ್' ಆ?ಯಪ್ ಮೂಲಕ ಒದಗಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಸಮೀಪದ ಆ?ಯಕ್ಷನ್ ಟೆಸಾ ಶಾಖೆ ಅಥವಾ 1800–309–0707 ಸಹಾಯವಾಣಿ ಸಂಪರ್ಕಿಸಬಹುದು. ಆಕ್ಷನ್ ಟೆಸಾ ವ್ಯವಸ್ಥಾಪಕ ನಿರ್ದೇಶಕ ಅಜಯ್ ಅಗರ್‌ವಾಲ್ ಮಾತನಾಡಿ, ಕಾರ್ಪೆಂಟರ್‌ಗಳು ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಅವರ ವೃತ್ತಿಜೀವನದ ಜತೆಗೆ ಕುಟುಂಬದ ಭವಿಷ್ಯಕ್ಕೂ ಬೆಂಬಲ ನೀಡುವುದು ಸಂಸ್ಥೆಯ ಉದ್ದೇಶವಾಗಿದೆ ಎಂದು ಹೇಳಿದರು.2024ರಲ್ಲಿ ಆರಂಭವಾದ ಕಾರ್ಪೆಂಟರ್‌ಗಳ ದಿನಾಚರಣೆ, 2025ರ ಬಳಿಕ ಈ ವರ್ಷ ಮತ್ತಷ್ಟು ವ್ಯಾಪಕವಾಗಿ ಆಯೋಜಿಸಲಾಗಿದೆ.

# 300ಕ್ಕೂ ಹೆಚ್ಚು ಅಜ್ಜ-ಅಜ್ಜಿಯರ ಆಟ, ನೃತ್ಯ ಸಂಭ್ರಮ



ಬೆಂಗಳೂರು,ಸೆ.26: ಅಜ್ಜ–ಅಜ್ಜಿಯರು ಹಾಗೂ ಮೊಮ್ಮಕ್ಕಳ ನಡುವಿನ ಪ್ರೀತಿ, ಬಾಂಧವ್ಯ ಮತ್ತು ಆತ್ಮೀಯತೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ನಗರದ ಜೆ.ಪಿ.ನಗರದಲ್ಲಿರುವ ಸ್ಕಾಲ್ವಿ ಇಂಟರ್‌ನ್ಯಾಷನಲ್ ಸ್ಕೂಲ್ ಹಾಗೂ ಯುರೋ ಕಿಡ್ಸ್ ಜೆ.ಪಿ.ನಗರ ಮತ್ತು ಕಗ್ಗಲಿಪುರ ವತಿಯಿಂದ 'ಗ್ರ್ಯಾಂಡ್‌ಪೇರೆಂಟ್ಸ್ ಡೇ' ಕಾರ್ಯಕ್ರಮವನ್ನು ಸಂಭ್ರಮದಿಂದ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಸುಮಾರು 300ಕ್ಕೂ ಹೆಚ್ಚು ಅಜ್ಜ–ಅಜ್ಜಿಯರು ಪಾಲ್ಗೊಂಡು ಮಕ್ಕಳೊಂದಿಗೆ ವಿವಿಧ ಮನರಂಜನಾ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಅಜ್ಜ–ಅಜ್ಜಿಯರು ಹಾಗೂ ಮೊಮ್ಮಕ್ಕಳಿಗಾಗಿ ವಿಶೇಷವಾಗಿ 18ಕ್ಕೂ ಹೆಚ್ಚು ವಿವಿಧ ಆಟಗಳು ಮತ್ತು ಮನರಂಜನಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.ಆಟಗಳಲ್ಲಿ ವಿಜೇತರಾದ ಅಜ್ಜಅಜ್ಜಿಯರು ಹಾಗೂ ಮಕ್ಕಳಿಗೆ ವಿಶೇಷ ಬಹುಮಾನಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸ್ಕಾಲ್ವಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ಕಾರ್ಯದರ್ಶಿ ಡಾ. ಆರ್. ಸುಂದರ್ ರಾಜು ಕಳೆದ 15 ವರ್ಷಗಳಿಂದ ಗ್ರ್ಯಾಂಡ್‌ಪೇರೆಂಟ್ಸ್ ಡೇ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು,

ಹಿರಿಯರು ಮತ್ತು ಮಕ್ಕಳ ನಡುವೆ ಉತ್ತಮ ಬಾಂಧವ್ಯ ಬೆಳೆಸುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದರು.

ಹಿರಿಯ ನಾಗರಿಕರಿಗಾಗಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದು, ರಕ್ತದೊತ್ತಡ, ಸಕ್ಕರೆ, ಕಣ್ಣು, ಕಿವಿ ಹಾಗೂ ಮೂಳೆಗಳ ತಪಾಸಣೆ ಸೇರಿದಂತೆ ಅಗತ್ಯ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ಮಾಡಲಾಗುತ್ತಿದೆ. ಸುಮಾರು 300 ಮಂದಿಗೆ ಉಚಿತ ಕನ್ನಡಕಗಳನ್ನು ನೀಡುವ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ಹೇಳಿದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸತೀಶ್ ಕಾಕಲ್ ಅವರು ಮಾತನಾಡಿ, ಇಂತಹ ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ಹಿರಿಯರನ್ನು ಗೌರವಿಸುವ ಹಾಗೂ ಅವರೊಂದಿಗೆ ಆತ್ಮೀಯವಾಗಿ ಬೆರೆಯುವ ಸಂಸ್ಕಾರ ಬೆಳೆಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಸುಂಕುರಾತ್ರಿ ಉಷಾ, ಸಂಸ್ಥಾಪಕ ಅಧ್ಯಕ್ಷ ಸತೀಶ್ ಕಾಕಲ್, ಕಾರ್ಯದರ್ಶಿ ಡಾ. ಆರ್. ಸುಂದರ್ ರಾಜು, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

# ವೀರಶೈವ - ಲಿಂಗಾಯತ ಸಮಾಜ ಒಂದು ಧರ್ಮಕ್ಕೆ ಸೀಮಿತವಲ್ಲ: ಬಿವೈವಿ



ಬೆಂಗಳೂರು,ಸೆ 26 ವೀರಶೈವ ಲಿಂಗಾಯತಧರ್ಮ,ಪರಂಪರೆಮತ್ತು ಸಮಾಜದಅಸ್ತಿತ್ವವನ್ನುಕಾಪಾಡುವುದರ ಜೊತೆಗೆ, ಸಮಾಜದೊಳಗಿನ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಒಗ್ಗಟ್ಟಿನಿಂದ ಮುನ್ನಡೆಯಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕರೆ ನೀಡಿದರು.

ಬೆಂಗಳೂರಿನ ವಿಜಯನಗರದ ಸುಜ್ಞಾನಮಂಟಪದಲ್ಲಿನಡೆದವೀರಶೈವ ಲಿಂಗಾಯತ ಧರ್ಮ ಸಂರಕ್ಷಣಾ ಸಮ್ಮೇಳನದಲ್ಲಿಮಾತನಾಡಿದಅವರು, ವೀರಶೈವ ಲಿಂಗಾಯತ ಸಮಾಜವು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರದೆ,ಶತಮಾನಗಳಿಂದ ಅನ್ನದಾಸೋಹ,ಅಕ್ಷರದಾಸೋಹ ಮತ್ತುಜ್ಞಾನದಾಸೋಹದ ಮೂಲಕ ಸಮಾಜದ ಎಲ್ಲ ವರ್ಗಗಳಿಗೂ ಆಶ್ರಯ,ನೆರವುಮತ್ತುಮಾರ್ಗದರ್ಶನ ನೀಡಿಕೊಂಡು ಬಂದಿದೆ ಎಂದರು.

"ಮಾನವಧರ್ಮಕ್ಕೆಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ" ಎಂಬ ಶ್ರೇಷ್ಠ ಸಂದೇಶವನ್ನು ಸಾರಿ–ಕೊಂಡು ಬಂದಿರುವ ವೀರಶೈವ ಲಿಂಗಾಯತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಮರ್ಥವಾಗಿ ಕೊಂಡೊಯ್ಯುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಅವರು ಹೇಳಿದರು.

ಧರ್ಮ ಮತ್ತು ಪರಂಪರೆಯ ಬಗ್ಗೆ ಗಂಭೀರ ಚರ್ಚೆ ಅಗತ್ಯ

ಪ್ರಸ್ತುತ ಸಂದರ್ಭದಲ್ಲಿ ವೀರಶೈವ ಧರ್ಮ ಮತ್ತು ಪರಂಪರೆಯ ಕುರಿತು ವಿವಿಧ ರೀತಿಯ ಚರ್ಚೆಗಳು ನಡೆಯುತ್ತಿವೆ. ಪ್ರಗತಿಪರತೆ ಮತ್ತು ವೈಚಾರಿಕತೆಯ ಹೆಸರಿನಲ್ಲಿ ಧರ್ಮದ ಮೂಲ ಆಶಯಗಳನ್ನು ವಿಕೃತಗೊಳಿಸುವಪ್ರಯತ್ನಗಳಿವೆಎಂಬ ಅಭಿಪ್ರಾಯಗಳೂ ವ್ಯಕ್ತವಾಗುತ್ತಿವೆ. ಇಂತಹ ವಿಚಾರಗಳ ಕುರಿತು ಸಾರ್ವಜನಿಕ ವೇದಿಕೆಗಳಲ್ಲಷ್ಟೇ ಅಲ್ಲದೆ, ಸಮಾಜದೊಳಗೂ ಮುಕ್ತವಾಗಿ ಚರ್ಚೆ ನಡೆಯಬೇಕು ಎಂದು ವಿಜಯೇಂದ್ರ ಹೇಳಿದರು.

ಸಮಾಜದ ಸಮಸ್ಯೆಗಳೇನು, ಅವುಗಳಿಗೆ ಕಾರಣಗಳೇನು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗಗಳೇನು ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಇತಿಹಾಸವನ್ನುತಿಳಿದುಕೊಳ್ಳುವುದು ಕೇವಲ ಹಿಂದಿನ ಘಟನೆಗಳನ್ನು ನೆನಪಿಸಿಕೊಳ್ಳುವುದಕ್ಕಾಗಿ ಅಲ್ಲ; ಹಿಂದೆ ನಡೆದ ತಪ್ಪುಗಳು ಮುಂದಿನ ಪೀಳಿಗೆಯಲ್ಲಿ ಮರುಕಳಿಸದಂತೆ ಎಚ್ಚರಿಕೆ ವಹಿಸುವುದಕ್ಕಾಗಿ ಎಂದು ಅವರು ಹೇಳಿದರು.

ಸಮಾಜದ ಒಗ್ಗಟ್ಟೇ ಶಕ್ತಿ

ವೀರಶೈವಲಿಂಗಾಯತ ಸಮಾಜವು ದೊಡ್ಡ ಆಲದ ಮರದಂತೆ ಎಲ್ಲ ಸಮಾಜಗಳಿಗೂ ಆಶ್ರಯ ನೀಡಿದ ಪರಂಪರೆಯನ್ನು ಹೊಂದಿದೆ. ಸಮಾಜದ ಈ ವೈಶಿಷ್ಟ್ಯವನ್ನು ಉಳಿಸಿಕೊಂಡು ಹೋಗಬೇಕಾಗಿದೆ. ಸಮಾಜದ ಒಗ್ಗಟ್ಟಿನಲ್ಲಿ ರಾಜ್ಯದ ಹಿತವೂ ಅಡಗಿದೆ ಎಂದು ವಿಜಯೇಂದ್ರ ಹೇಳಿದರು.

ಒಳಪಂಗಡಗಳು ಮತ್ತು ಭಿನ್ನಾಭಿಪ್ರಾಯಗಳನ್ನುಬದಿಗಿಟ್ಟು ಸಮಾಜದ ಹಿತಕ್ಕಾಗಿ ಎಲ್ಲರೂ ಒಂದಾಗಿ ನಿಲ್ಲಬೇಕು. ಜಗದ್ಗುರುಗಳು, ಹರಗುರು ಚರಮೂರ್ತಿಗಳು, ಸಮಾಜದಮುಖಂಡರು,ರಾಜಕೀಯ ನಾಯಕರು ಹಾಗೂ ಸಾಮಾನ್ಯ ಜನರು ತಮ್ಮ ಜವಾಬ್ದಾರಿಯನ್ನು ಅರಿತು ಮುನ್ನಡೆಯಬೇಕು ಎಂದು ಅವರು ಕರೆ ನೀಡಿದರು.

ಮಠಮಾನ್ಯಗಳಿಗೆಶಕ್ತಿತುಂಬಬೇಕು

ವೀರಶೈವ ಲಿಂಗಾಯತ ಮಠಮಾನ್ಯಗಳು ಸಮಾಜಕ್ಕೆ ಮಾರ್ಗದರ್ಶನ ನೀಡುವ ಪ್ರಮುಖ ಸಂಸ್ಥೆಗಳಾಗಿವೆ. ರಾಜ್ಯದ ವಿವಿಧ ಭಾಗಗಳಲ್ಲಿರುವ ಸಾವಿರಾರು ಮಠಗಳು ಇಂದು ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಿವೆ. ಅವುಗಳಿಗೆ ಅಗತ್ಯವಾದ ಬೆಂಬಲ ಮತ್ತು ಶಕ್ತಿ ನೀಡುವ ಕೆಲಸ ಸಮಾಜದ ಎಲ್ಲ ಮುಖಂಡರಿಂದ ಆಗಬೇಕಿದೆ ಎಂದು ವಿಜಯೇಂದ್ರ ಹೇಳಿದರು.

ತಮ್ಮ ತಂದೆ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವೀರಶೈವಲಿಂಗಾಯತ ಮಠಗಳಷ್ಟೇ ಅಲ್ಲದೆ, ವಿವಿಧ ಸಮಾಜಗಳ ಮಠಮಾನ್ಯಗಳಿಗೂ ನೆರವು ನೀಡುವ ಕೆಲಸ ಮಾಡಿದ್ದರು ಎಂದು ಅವರು ಸ್ಮರಿಸಿದರು.

# ಆರಂಭಿಕ ಹಂತದ ರಕ್ಷಣೆ ಒತ್ತು

ಬೆಂಗಳೂರು,ಸೆ.26–ಮೆಣಸಿನಕಾಯಿ ಬೆಳೆಯಲ್ಲಿ ನಾಟಿ ಮಾಡಿದ ಆರಂಭಿಕ 15ರಿಂದ 25 ದಿನಗಳು (ಡಿಎಟಿ) ಸಸಿಗಳ ಆರೋಗ್ಯಕರ ಬೆಳವಣಿಗೆ ಹಾಗೂ ಉತ್ತಮ ಇಳುವರಿಗೆ ನಿರ್ಣಾಯಕವಾಗಿವೆ.

ಈ ಅವಧಿಯಲ್ಲಿ ಥ್ರಿಪ್ಸ್ (ನುಸಿ) ಸೇರಿದಂತೆ ಹೀರುವ ಕೀಟಗಳ ಬಾಧೆ ಉಂಟಾದರೆ ಬೆಳೆಯ ಬೆಳವಣಿಗೆಗೆ ಹಾನಿಯಾಗಿ, ಇಳುವರಿ ಸಾಮರ್ಥ್ಯ ಕುಂಠಿತವಾಗುವ ಸಾಧ್ಯತೆಯಿದೆ.

ಈ ಹಿನ್ನೆಲೆಯಲ್ಲಿ ದೇಶದ ಅಗ್ರಿ–ಬಿಸಿನೆಸ್ ಸಂಸ್ಥೆಗಳಲ್ಲಿ ಒಂದಾದ ಗೋದ್ರೆಜ್ ಆಗ್ರೋವೆಟ್ ಲಿಮಿಟೆಡ್, ಮೆಣಸಿನಕಾಯಿ ಬೆಳೆಗೆ ರೂಪಿಸಿರುವ 'ಗ್ರೇಸಿಯಾ' ಕೀಟನಾಶಕದ ಮೂಲಕ ಆರಂಭಿಕ ಹಂತದಲ್ಲೇ ಬೆಳೆ ರಕ್ಷಣೆ ಕೈಗೊಳ್ಳುವ ಕುರಿತು ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ.

ನಾಟಿ ಮಾಡಿದ ಮೊದಲ 15ರಿಂದ 25 ದಿನಗಳ ಅವಧಿಯಲ್ಲಿ ಕೀಟಗಳ ಹಾನಿಯ ಲಕ್ಷಣಗಳು ಹೊರಗೆ ಗೋಚರಿಸುವ ಮುನ್ನವೇ ಅವುಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಸಂಸ್ಥೆ ತಿಳಿಸಿದೆ.

ತೀವ್ರ ಕೀಟಬಾಧೆಯ ಸಂದರ್ಭದಲ್ಲಿ ಇಳುವರಿಯಲ್ಲಿ ಭಾರೀ ನಷ್ಟ ಉಂಟಾಗುವ ಸಾಧ್ಯತೆ ಇರುವುದರಿಂದ ಆರಂಭಿಕ ಹಂತದ ಕೀಟ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂದು ಹೇಳಿದೆ.

ಪ್ರತಿ ಎಕರೆಗೆ 160 ಮಿಲಿಲೀಟರ್ ಪ್ರಮಾಣದಲ್ಲಿ ಬಳಸಲಾಗುವ ಗ್ರೇಸಿಯಾ, ಟ್ರಾನ್ಸ್‌ಲಾಮಿನಾರ್ ತಂತ್ರಜ್ಞಾನದ ಮೂಲಕ ಎಲೆಯ ಮೇಲ್ಮೈಯಿಂದ ಒಳಭಾಗಕ್ಕೆ ತಲುಪಿ ಹೀರುವ ಹಾಗೂ ಕಚ್ಚಿ ತಿನ್ನುವ ಕೀಟಗಳ ನಿಯಂತ್ರಣಕ್ಕೆ ನೆರವಾಗುತ್ತದೆ ಎಂದು ಗೋದ್ರೆಜ್ ಆಗ್ರೋವೆಟ್ ಸಂಸ್ಥೆಯ ಕ್ರಾಪ್ ಕೇರ್ ವಿಭಾಗದ ಸಿಇಒ ರಾಜವೇಲು ಎನ್.ಕೆ ತಿಳಿಸಿದ್ದಾರೆ.

# ತುಳು ಸಾಹಿತ್ಯ ಅಕಾಡೆಮಿ ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟ




ಮಂಗಳೂರು.ಸೆ.26–ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 2025 ಹಾಗೂ 2026 ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.

2025ನೇ ಸಾಲಿನ ಗೌರವ ಪ್ರಶಸ್ತಿಗೆ ಪ್ರೊ.ಬಿ.ಶಿವರಾಮ ಶೆಟ್ಟಿ (ಸಾಹಿತ್ಯ/ಸಂಶೋಧನೆ), ಕುದ್ಕು ಕೊರಗ(ಜಾನಪದ), ಶ್ರೀಮತಿ ಉಷಾ ಭಂಡಾರಿ ಬೆಂಗಳೂರು (ನಾಟಕ/ಸಿನಿಮಾ) ಅವರು ಆಯ್ಕೆಯಾಗಿದ್ದಾರೆ.

2026ನೇ ಸಾಲಿನ ಗೌರವ ಪ್ರಶಸ್ತಿಗೆ ಕೆ.ಪಿ.ರಾವ್ (ಸಾಹಿತ್ಯ/ಸಂಶೋಧನೆ), ನೇಮು ಪರವ (ಜಾನಪದ), ಸುಧಾಕರ ಬನ್ನಂಜೆ ಬೆಂಗಳೂರು (ನಾಟಕ/ಸಿನಿಮಾ) ಅವರು ಆಯ್ಕೆಯಾಗಿದ್ದಾರೆ.

ಗೌರವ ಪ್ರಶಸ್ತಿಯು ಐವತ್ತು ಸಾವಿರ ರೂಪಾಯಿ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಸಮಾರಂಭವು ಅಕ್ಟೋಬರ್ 4ರಂದು ಬೆಂಗಳೂರಿನ ರವೀಂದ್ರಕಲಾಕ್ಷೇತ್ರದಲ್ಲಿ ನಡೆಯಲಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 23 ರಾಜ್ಯಗಳಿಗೆ ಭಾರೀ ಮಳೆ ಮುನ್ಸೂಚನೆ

ನವದೆಹಲಿ, ಸೆ.26–ವಿವಿಧ ಭಾಗಗಳಲ್ಲಿ ಮುಂಗಾರು ಮಳೆ ಮತ್ತೆ ತೀವ್ರಗೊಂಡಿದ್ದು, ಭಾರತೀಯ ಹವಾಮಾನ ಇಲಾಖೆಯು ಇಂದು ದೇಶದ 23 ರಾಜ್ಯಗಳಲ್ಲಿ ಭಾರೀ ಮಳೆ ಮತ್ತು ಬಲವಾದ ಗುಡುಗು ಸಹಿತ ಮಳೆಯಾಗುವ ಮುನ್ನೆಚ್ಚರಿಕೆಯನ್ನು ನೀಡಿದೆ. ದಕ್ಷಿಣ ಛತ್ತೀಸ್‌ಗಢ ಮತ್ತು ದಕ್ಷಿಣ ಒಡಿಶಾ ಒಳನಾಡು ಪ್ರದೇಶಗಳಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಉತ್ತರ–ವಾಯುವ್ಯ ದಿಸೆಯತ್ತ ಚಲಿಸುತ್ತಿರುವುದೇ ಈ ದಿಢೀರ್ ಹವಾಮಾನ ಬದಲಾವಣೆಗೆ ಮುಖ್ಯ ಕಾರಣವಾಗಿದೆ. ಇದರ ಪ್ರಭಾವದಿಂದಾಗಿ ಮುಂದಿನ ಕೆಲವು ದಿನಗಳ ಕಾಲ ದೇಶದ ಹಲವು ಭಾಗಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ.

ಉತ್ತರ ಪ್ರದೇಶ, ಬಿಹಾರ, ದೆಹಲಿ, ಜಾರ್ಖಂಡ್, ಉತ್ತರಾಖಂಡ, ಮಧ್ಯಪ್ರದೇಶ, ಛತ್ತೀಸ್‌ಗಢ, ಒಡಿಶಾ, ಪಶ್ಚಿಮ ಬಂಗಾಳ, ಸಿಕ್ಕಿಂ, ಹರಿಯಾಣ, ತೆಲಂಗಾಣ ಮತ್ತು ಆಂಧ್ರಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯ ಕಂಡುಬರಲಿದೆ. ಈ ಅವಧಿಯಲ್ಲಿ ಗಂಟೆಗೆ 50 ರಿಂದ 80 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದ್ದು, ದೊಡ್ಡ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿಬೀಳುವ ಅಪಾಯವಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸುವ ಭೀತಿ ಎದುರಾಗಿದ್ದ–ರೆ, ಕೆಲವು ಕಡೆಗಳಲ್ಲಿ ಆಲಿಕಲ್ಲು ಮಳೆಯಾಗುವ ಮುನ್ಸೂಚನೆಯನ್ನೂ ನೀಡಲಾಗಿದೆ. ಕಡಲತೀರದ ಪ್ರದೇಶಗಳಲ್ಲಿ ರಾಕ್ಷಸ ಅಲೆಗಳು ಮತ್ತು ಪ್ರಚಂಡ ಗಾಳಿ ಇರಲಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಹಾಗೂ ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಸೂಚಿಸಲಾಗಿದೆ.

ರಾಜಧಾನಿ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣವಿದ್ದು, ಗಂಟೆಗೆ 30 ರಿಂದ 50 ಕಿಲೋಮೀಟರ್ ವೇಗದ ಗಾಳಿಯೊಂದಿಗೆ ಹಗುರದಿಂದ ಮಧ್ಯಮ ಪ್ರಮಾಣದ ಮಳೆಯಾಗುವ ನಿರೀಕ್ಷೆಯಿದೆ. ಸೆಪ್ಟೆಂಬರ್ 28 ರವರೆಗೆ ದೆಹಲಿಯಲ್ಲಿ ಮಳೆಯ ವಾತಾವರಣ ಮುಂದುವರಿಯಲಿದೆ. ಇನ್ನು ಉತ್ತರ ಪ್ರದೇಶದ ಲಕ್ನೋ, ಕಾನ್ಪುರ, ಉನ್ನಾವ್ ಮುಂತಾದ ಜಿಲ್ಲೆಗಳಲ್ಲಿ ಈಗಾಗಲೇ ಧಾರಾ–ಕಾರ ಮಳೆ ಪ್ರಾರಂಭವಾಗಿದ್ದು, ಈ ರಾಜ್ಯದಲ್ಲಿ ಸೆಪ್ಟೆಂಬರ್ 30 ರವರೆಗೆ ಮಳೆಗಾಲದ ಪ್ರಭಾವ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ. ಮಧ್ಯಪ್ರದೇಶದಲ್ಲೂ ಸಹ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 1ರವರೆಗೆ ವ್ಯಾಪಕ ಮಳೆಯಾಗುವ ಮುನ್ಸೂಚನೆ ಇದೆ.

ಜಾರ್ಖಂಡ್ ರಾಜ್ಯದಲ್ಲಿ ಗುರುವಾರ ರಾತ್ರಿಯಿಂದಲೇ ಬಿರುಗಾಳಿ ಸಹಿತ ಭಾರೀ ಮಳೆ ದಾಖಲಾಗಿದ್ದು, ಶನಿವಾರದ ನಂತರ ಮಳೆಯ ತೀವ್ರತೆ ಕೊಂಚ ಕಡಿಮೆಯಾಗುವ ಲಕ್ಷಣಗಳಿವೆ. ಆದಾಗ್ಯೂ, ಲೋಹರ್ದಾಗಾ, ಲತೇಹಾರ್, ಗುಮ್ಲಾ ಮತ್ತು ಸಿಮ್ಡೇಗಾ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದ್ದು, ಪೂರ್ವ ಸಿಂಗ್‌ಭೂಮ್, ಸರೈಕೇಲಾ ಮತ್ತು ಪಶ್ಚಿಮ ಸಿಂಗ್‌ಭೂಮ್ ಪ್ರದೇಶಗಳಲ್ಲಿ ದಿಢೀರ್ ಪ್ರವಾಹ ಉಂಟಾಗುವ ಅಪಾಯವಿದೆ ಎಂದು ರಾಂಚಿ ಹವಾಮಾನ ಕೇಂದ್ರದ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಇತ್ತೀಚಿನ ಹವಾಮಾನ ವರದಿಗಳ ಪ್ರಕಾರ, ಬಂಗಾಳ ಕೊಲ್ಲಿಯಲ್ಲಿ ಸಕ್ರಿಯವಾಗಿರುವ ಮತ್ತೊಂದು ಚಂಡಮಾರುತದ ಸುಳಿಯ ಪ್ರಭಾವದಿಂದಾಗಿ ಈ ಮಳೆ ಮಾರುತಗಳು ಇನ್ನಷ್ಟು ಬಲಗೊಳ್ಳುತ್ತಿವೆ. ತಾಣ್ಯ ಹಾಗೂ ತೀವ್ರ ಮಳೆಯ ಭೀತಿ ಇರುವ ತಗ್ಗು ಪ್ರದೇಶಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ನಿಯೋಜಿಸಲಾಗಿದೆ. ಸಾರ್ವಜನಿಕರು ಅನಗತ್ಯ ಪ್ರಯಾಣವನ್ನು ಮಾಡದಂತೆ ಮತ್ತು ನದಿ ತಟ ಹಾಗೂ ಬೆಟ್ಟಗುಡ್ಡಗಳ ಸಮೀಪ ವಾಸಿಸುವ ಜನರು ಹೆಚ್ಚಿನ ಜಾಗರೂಕತೆ ವಹಿಸಬೇಕೆಂದು ವಿಪತ್ತು ನಿರ್ವಹಣಾ ಪ್ರಾಧಿಕಾರ ವಿನಂತಿಸಿದೆ.



# ಮದ್ದೂರು ಬಳಿ ಬೋನಿಗೆ ಬಿದ್ದ ಚಿರತೆ

ಮಂಡ್ಯ,ಸೆ.26– ಮದ್ದೂರು ತಾಲ್ಲೂಕಿನ ಹೆಚ್.ಹೊಸಹಳ್ಳಿ ಗ್ರಾಮದಲ್ಲಿ ಕಳೆದ ಒಂದು ತಿಂಗಳಿಂದ ಜನಸಾಮಾನ್ಯರು ಹಾಗೂ ರೈತರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.

ಕಳೆದ ಒಂದು ತಿಂಗಳಿಂದ ಹೆಚ್. ಹೊಸಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಚಿರತೆ ಪ್ರತ್ಯಕ್ಷವಾಗಿ ನಿರಂತರ ಭಯದ ವಾತಾವರಣ ಸೃಷ್ಟಿಸಿತ್ತು. ಈ ಚಿರತೆಯು ಈವರೆಗೆ ಒಟ್ಟು 8 ಮೇಕೆಗಳು, 2 ನಾಯಿಗಳು, 1 ಹಸುವಿನ ಕರು ಹಾಗೂ 1 ಎಮ್ಮೆ ಕರುವನ್ನು ಬೇಟೆಯಾಡಿ ತಿಂದಿತ್ತು.



ಚಿರತೆ ನಿರಂತರ ದಾಳಿಯಿಂದಾಗಿ ಜಮೀನುಗಳಿಗೆ ತೆರಳಲು ಗ್ರಾಮಸ್ಥರು ಹೆದರುತ್ತಿದ್ದರು. ಕೂಡಲೇ ಚಿರತೆಯನ್ನ ಸೆರೆಹಿಡಿಯುವಂತೆ ಸಾರ್ವಜನಿಕರು ತೀವ್ರ ಆಗ್ರಹಿಸಿದ್ದರು. ಜನರ ಬೇಡಿ–ಕೆಗೆ ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮದಲ್ಲಿ ಬೋನ್ ಇರಿಸಿದ್ದರು. ಬೋನಿನೊಳಗೆ ನಾಯಿಯನ್ನ ಇರಿಸಲಾಗಿದ್ದು, ಅದನ್ನ ತಿನ್ನಲು ಬಂದ ಚಿರತೆ ಇಲಾಖೆಯ ಬಲೆಗೆ ಬಿದ್ದಿದೆ.

ಚಿರತೆ ಸೆರೆಯಾಗುತ್ತಿದ್ದಂತೆ ಹೆಚ್. ಹೊಸಹಳ್ಳಿ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದು, ಜೀವಭಯವಿಲ್ಲದೆ ಮುಕ್ತವಾಗಿ ಓಡಾಡುವಂತಾಗಿದೆ.

# ಕಾಂಗೋದಲ್ಲಿ ವಿಮಾನ ಅಪಘಾತ: 14 ಮಂದಿ ಸಾವು

ಕಿನ್ಶಾಸಾ,ಸೆ.26–ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಸಂಭವಿಸಿದ ಭೀಕರ ವಿಮಾನ ಅಪಘಾತದಲ್ಲಿ ಇಬ್ಬರು ಹಿರಿಯ ಸೇನಾ ಅಧಿಕಾರಿಗಳು ಸೇರಿದಂತೆ ಕನಿಷ್ಠ 14 ಜನರು ಸಾವನ್ನಪ್ಪಿದ್ದಾರೆ.

ನೈಋತ್ಯ ನಗರವಾದ ಕಿಕ್ವಿಟ್‌ನಿಂದ ರಾಜಧಾನಿ ಕಿನ್ಶಾಸಾಗೆ ಹಿಂತಿರುಗುತ್ತಿದ್ದ ವಿಮಾನವು ಮಾರ್ಗಮಧ್ಯೆ ಕೆ–ಂಗೆ ಪ್ರದೇಶದಲ್ಲಿ ಪತನಗೊಂಡಿದೆ. ಮಿಲಿಟರಿ ನ್ಯಾಯಾಲಯದ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಮುಟೊಂಬೊ ಕಟಲೈ ಟಿಯೆಂಡೆ ಮತ್ತು ಸಶಸ್ತ್ರ ಪಡೆಗಳ ಆಡಿಟರ್ ಜನರಲ್ ಲೆಫ್ಟಿನೆಂಟ್ ಜನರಲ್ ಬಕುಮಿ ಲಿಕುಲಿಯಾ ಅವರು ಈ ದುರಂತದಲ್ಲಿ ಅಸುನೀಗಿದ್ದಾರೆ ಎಂದು ಕಾಂಗೋಲೀಸ್ ಸೇನಾ ವಕ್ತಾರ ಮೇಜರ್ ಜನರಲ್ ಎಫೋಮಿ ಅಕೆಂಗೆ ದೃಢಪಡಿಸಿದ್ದಾರೆ.



ಪ್ರಯಾಣದ ವೇಳೆಯಲ್ಲಿ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ವಿಮಾನವು ಹಿಂತಿರುಗಲು ಯತ್ನಿಸಿತು, ಆದರೆ ಕೆಂಗೆಯಲ್ಲಿ ಅಪಘಾತಕ್ಕೀಡಾಯಿತು. ವಿಮಾನದಲ್ಲಿದ್ದ ನಿಯೋಗದ ಇತರ ಸದಸ್ಯರು ಮತ್ತು ಸಿಬ್ಬಂದಿ ಸೇರಿದಂತೆ ಎಲ್ಲರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತದ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆಗೆ ಸಂಬಂಧಿಸಿದಂತೆ ಕಾಂಗೋಲೀಸ್ ಮಿಲಿಟರಿ ತನಿಖೆಯನ್ನು ಪ್ರಾರಂಭಿಸಿದೆ. ನಾಗರಿಕ ವಿಮಾನಯಾನ ಪ್ರಾಧಿಕಾರದ ಮಂಡಳಿಯ ಅಧ್ಯಕ್ಷ ಟ್ರಿಫೋನ್ ಕಿನ್–ಕಿಯೆ ಮುಲುಂಬಾ ಅವರು ಮಾತನಾಡಿ, ಪೂರ್ಣಪ್ರಮಾಣದ ತನಿಖೆ ಮುಗಿದ ನಂತರವೇ ಅಪಘಾತದ ನೈಜ ಕಾರಣ ಸ್ಪಷ್ಟವಾಗಲಿದೆ ಎಂದು ಹೇಳಿದ್ದಾರೆ.

# ಚಿತ್ರರಂಗದ ಸಮಸ್ಯೆಗಳ ಕುರಿತು ಸಮಾಲೋಚನೆ



ಬೆಂಗಳೂರು, ಸೆ.26– ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಪದಾಧಿಕಾರಿಗಳು ಇತ್ತೀಚೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಮಂಜುನಾಥ್ ಅವರನ್ನು ಭೇಟಿ ಮಾಡಿ ಚಿತ್ರರಂಗಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚಿಸಿದರು. ಮುಖ್ಯವಾಗಿ ಚಲನಚಿತ್ರಗಳ ಸಹಾಯಧನ (ಸಬ್ಸಿಡಿ), ರಾಜ್ಯಪ್ರಶಸ್ತಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಮಾಲೋಚನೆ ನಡೆಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ಎಂ.ಜಿ. ರಾಮಮೂರ್ತಿ, ಗೌರವ ಕಾರ್ಯದರ್ಶಿ ಭಾ.ಮಾ. ಗಿರೀಶ್, ಜಂಟಿ ಕಾರ್ಯದರ್ಶಿ ರಮೇಶ್ ಯಾದವ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಹಾಗೂ ನಿರ್ಮಾಪಕ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

# ನವರಾತ್ರಿ ಮಹೋತ್ಸವಕ್ಕೆ ಸಿಎಂಗೆ ಆಹ್ವಾನ



ಬೆಂಗಳೂರು.ಸೆ.26: ತೆಲಂಗಾಣ ರಾಜ್ಯದ ಆಲಂಪುರದಲ್ಲಿರುವ ಪವಿತ್ರ ಶ್ರೀ ಜೋಗುಳಾಂಬಾ ಶಕ್ತಿಪೀಠದಲ್ಲಿ ಅ.11ರಿಂದ 20ರವರೆಗೆ ನವರಾತ್ರಿ ಮಹೋತ್ಸವ ಆಚರಿಸಲಾಗುತ್ತಿದೆ.

ಪ್ರಸ್ತುತ ನವರಾತ್ರಿ ಮಹೋತ್ಸವಕ್ಕೆ ಗದ್ವಾಲ್ ಸಂಸ್ಥಾನದ ಕೃಷ್ಣರಾಮ ಭೂಪಾಲ್ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಆಹ್ವಾನ ನೀಡಿದ್ದಾರೆ.

ಗದ್ವಾಲ್ ಸಂಸ್ಥಾನದ ವಿಶಿಷ್ಟ ಸಾಂಸ್ಕೃತಿಕ ಪರಂಪರೆ ಹಾಗೂ ಭಕ್ತಿಯ ಸಂಕೇತವಾಗಿರುವ ಪ್ರಸಿದ್ಧ ಗದ್ವಾಲ್ ಸೀರೆಯನ್ನು ಶ್ರೀ ಜೋಗುಳಾಂಬಾ ದೇವಿಗೆ ಸಾಂಪ್ರದಾಯಿಕವಾಗಿ ಸಮರ್ಪಿಸುವ ಪವಿತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಭೂಪಾಲ್ ಮನವಿ ಕೋರಿದರು.

ಮುಖ್ಯಮಂತ್ರಿ ಮಹೋತ್ಸವದಲ್ಲಿ ಭಾಗವಹಿಸುದರಿಂದ ನವರಾತ್ರಿ ಮಹೋತ್ಸವಕ್ಕೆ ವಿಶೇಷ ಮೆರುಗು ಹಾಗೂ ಮಹತ್ವ ಹೆಚ್ಚಾಗುತ್ತದೆ. ಜೊತೆಗೆ ಕರ್ನಾಟಕ ಹಾಗೂ ಗದ್ವಾಲ್–ಆಲಂಪುರ ಪ್ರದೇಶಗಳ ನಡುವಿನ ಐತಿಹಾಸಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗಲಿದೆ ಎಂದು ಕೃಷ್ಣರಾಮ ಭೂಪಾಲ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಹಾಜರಿದ್ದರು.

# ಹೆಚ್.ರವೀಂದ್ರ ಮಾರ್ಗದರ್ಶನದಲ್ಲಿ ಅಂಗನವಾಡಿ ಮಿಲನ ಸಮೀಕ್ಷೆ



ಬೆಂಗಳೂರು.ಸೆ26: ದಕ್ಷಿಣ ಜಿಲ್ಲೆಯ ವಿಜಯನಗರ ವಿಧಾನಸಭಾ ಕ್ಷೇತ್ರದ ಮುಖಂಡರಾದ ಹೆಚ್.ರವೀಂದ್ರ ಅವರ ಮಾರ್ಗದರ್ಶನದಲ್ಲಿ, ಮಹಿಳಾ ಮೋರ್ಚಾ ವತಿಯಿಂದ ನಿನ್ನೆ ಶುಕ್ರವಾರ ಬಾಪೂಜಿನಗರ ವಾರ್ಡ್ ನಂಬರ್ 134ನಲ್ಲಿ ನಡೆದ ಅಂಗನವಾಡಿ ಮಿಲನ ಕಾರ್ಯಕ್ರಮದ ಸಮೀಕ್ಷೆ. ಈ ಕಾರ್ಯಕ್ರಮವನ್ನು ಮಹಿಳಾ ಮೋರ್ಚಾದ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಹಾಗೂ ಕಾರ್ಯದರ್ಶಿಯಾದ ಶ್ರೀಮತಿ ಕನ್ಯಾಕುಮಾರಿ ಅವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಮಹಿಳಾ ಮೋರ್ಚ ಅಧ್ಯಕ್ಷರಾದ ಶ್ರೀಮತಿ ಪುತಲಿಬಾಯಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಕಾರ್ಯದರ್ಶಿ ಶ್ರೀಮತಿ. ವರಲಕ್ಷ್ಮಿ (ಸಂಚಾಲಕರು ಅಂಗನ ಮಿಲನ್), ಉಪಾಧ್ಯಕ್ಷರಾದ ಶ್ರೀಮತಿ. ಶ್ಯಾಮಲ, ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಾಧಾಬಾಯಿ, ಕಾರ್ಯದರ್ಶಿ ಶ್ರೀಮತಿ.ರಾಜೇಶ್ವರಿ, ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಶ್ರೀಮತಿ.ಚೆನ್ನಮ್ಮ, ಓಬಿಸಿ ಮೋರ್ಚಾದ ಕಾರ್ಯದರ್ಶಿಯಾದ ಶ್ರೀಮತಿ ಗೀತಾ ಮತ್ತು ಕಾರ್ಯಕರ್ತರಾದ ಶ್ರೀಮತಿ.ಸರಿತಾ, ಶ್ರೀಮತಿ.ಲಿಂಗಮ್ಮ ಉಪಸ್ಥಿತರಿದ್ದರು. ಈ ವಾರ್ಡಿನ ಅಂಗನವಾಡಿ ಶಿಕ್ಷಕಿ ಮತ್ತು ಸಹಾಯಕಿಗೆ ಸನ್ಮಾನ ಮಾಡಿ ಮತ್ತು ಸಿಹಿ ಹಾಗೂ ಉಡುಗೊರೆಗಳನ್ನು ಈ ಮೂಲಕ ನೀಡಲಾಯಿತು.

# ಅಮೆರಿಕ-ಚೀನಾ ಶೃಂಗಸಭೆ ಅಂತ್ಯ: ಬಾಂಧವ್ಯ ವೃದ್ಧಿಗೆ ಸಮ್ಮತಿ

ವಾಷಿಂಗ್ಟನ್,ಸೆ.26– ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವೆ ವೈಟ್ ಹೌಸ್‌ನಲ್ಲಿ ನಡೆದ ಮೂರು ದಿನಗಳ ಮಹತ್ವದ ದ್ವಿಪಕ್ಷೀಯ ಶೃಂಗಸಭೆಯು ಮುಕ್ತಾಯಗೊಂಡಿದೆ. ಮೂರು ದಿನಗಳ ಮಹತ್ವದ ಶೃಂಗಸಭೆಯು ವೈಟ್ ಹೌಸ್‌ನಲ್ಲಿ ಟೀ ಸತ್ಕಾರ ಮತ್ತು ನ್ಯಾಷನಲ್ ಆರ್ಕೈವ್ಸ್ ಪ್ರವಾಸದೊಂದಿಗೆ ಮುಕ್ತಾಯಗೊಂಡಿದೆ.

ಈ ಮಹತ್ವದ ಭೇಟಿಯ ಕೊನೆಯ ದಿನದಂದು ಉಭಯ ನಾಯಕರು ವೈಟ್ ಹೌಸ್‌ನ ಕೆಂಪು ಕೊಠಡಿಯಲ್ಲಿ ಟೀ ಸತ್ಕಾರದಲ್ಲಿ ಭಾಗವಹಿಸಿದ್ದಲ್ಲದೆ, ಅಮೆರಿಕದ ರಾಷ್ಟ್ರೀಯ ಮಹಾಪತ್ರಾಗಾರಕ್ಕೆ ಅಂದರೆ ನ್ಯಾಷನಲ್ ಆರ್ಕೈವ್ಸ್‌ಗೆ ಭೇಟಿ ನೀಡಿ ಅಮೆರಿಕದ ಸ್ವಾತಂತ್ರ್ಯ ಘೋಷಣೆ ಹಾಗೂ ಸಂವಿಧಾನದ ದಾಖಲೆಗಳನ್ನು ವೀಕ್ಷಿಸಿದರು.

ವಿಶ್ವದ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಗಳಾಗಿರುವ ಅಮೆರಿಕ ಮತ್ತು ಚೀನಾ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪರಸ್ಪರ ಗೌರವ, ನ್ಯಾಯ ಹಾಗೂ ಸಮಾನತೆಯ ಆಧಾರದ ಮೇಲೆ ಕಾಂಕ್ರೀಟ್ ತಂತ್ರಜ್ಞಾನ ಮತ್ತು ವ್ಯೂಹಾತ್ಮಕ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಒಪ್ಪಿಕೊಂಡಿವೆ.



ಮೂರು ದಿನಗಳ ಕಾಲ ನಡೆದ ಈ ವಿಸ್ತೃತ ಚರ್ಚೆಯಲ್ಲಿ ಮುಖ್ಯವಾಗಿ ವ್ಯಾಪಾರ ವಹಿವಾಟು, ತೈವಾನ್ ಬಿಕ್ಕಟ್ಟು, ಕೃತಕ ಬುದ್ಧಿಮತ್ತೆ ನಿಯಂತ್ರಣ ಮತ್ತು ಇರಾನ್ ಜೊತೆಗಿನ ಪ್ರಾದೇಶಿಕ ಉದ್ವಿಗ್ನತೆಯ ವಿಷಯಗಳು ಪ್ರಸ್ತಾಪವಾದವು.

ವ್ಯಾಪಾರ ಕ್ಷೇತ್ರದಲ್ಲಿ ಉಭಯ ದೇಶಗಳು ಗಣನೀಯ ಪ್ರಗತಿ ಸಾಧಿಸಿದ್ದು, ಅಮೆರಿಕದ ಕೃಷಿ ಉತ್ಪನ್ನಗಳು ಮತ್ತು ವೈದ್ಯಕೀಯ ಉಪಕರಣಗಳ ರಫ್ತಿಗೆ ಚೀನಾದಲ್ಲಿ ಹೆಚ್ಚಿನ ಮಾರುಕಟ್ಟೆ ಅವಕಾಶ ಕಲ್ಪಿಸಲು ಹಾಗೂ ಚೀನಾದ ಅಪಾಯಕಾರಿಯಲ್ಲದ ಗ್ರಾಹಕ ವಸ್ತುಗಳ ಮೇಲಿನ ಸುಂಕ ಸಡಿಲಿಕೆಗೆ ಸಮ್ಮತಿಸಲಾಗಿದೆ. ತೈವಾನ್ ವಿಚಾರದಲ್ಲಿ ಚೀನಾ ಅಧ್ಯಕ್ಷರು ಅಮೆರಿಕ ಎಚ್ಚರಿಕೆಯ ಹೆಜ್ಜೆ ಇಡಬೇಕೆಂದು ಪ್ರಸ್ತಾಪಿಸಿ, ತೈವಾನ್‌ಗೆ ಅಮೆರಿಕ ಮಾಡುತ್ತಿರುವ ಆಯುಧ ಪೂರೈಕೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು. ಇದಕ್ಕೆ ಪ್ರತಿಯಾಗಿ ಅಮೆರಿಕ ತನ್ನ ಹಳೆಯ ಧೋರಣೆಯನ್ನೇ ಕಾಯ್ದುಕೊಂಡಿದೆ. ಇನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸುರಕ್ಷಿತ ಬಳಕೆ ಮತ್ತು ಇರಾನ್ ಬಿಕ್ಕಟ್ಟಿನ ಬಗ್ಗೆಯೂ ವಿಸ್ತೃತ ಸಮಾಲೋಚನೆ ನಡೆಸಲಾಯಿತು.

ಅಮೆರಿಕದ ವಿರೋಧ ಪಕ್ಷವಾದ ಡೆಮಾಕ್ರಟಿಕ್ ಪಕ್ಷವು ಈ ಶೃಂಗಸಭೆಯಿಂದ ಚೀನಾದಿಂದ ಯಾವುದೇ ದೃಢವಾದ ಭರವಸೆಗಳು ಸಿಕ್ಕಿಲ್ಲವೆಂದು ಟೀಕಿಸಿದರೂ, ಈ ಭೇಟಿಯು ದ್ವಿಪಕ್ಷೀಯ ಬಾಂಧವ್ಯಕ್ಕೆ ಹೊಸ ಉತ್ತೇಜನ ನೀಡಿದೆ ಎಂದು ಶ್ವೇತಭವನ ಹೇಳಿದೆ. ವರ್ಷದ ಅಂತ್ಯದ ವೇಳೆಗೆ ನವೆಂಬರ್‌ನಲ್ಲಿ ಚೀನಾದಲ್ಲಿ ನಡೆಯಲಿರುವ ಶೃಂಗಸಭೆ ಹಾಗೂ ಡಿಸೆಂಬರ್‌ನಲ್ಲಿ ಮಿಯಾಮಿಯಲ್ಲಿ ನಡೆಯಲಿರುವ ಜಿ–ಟ್ವೆಂಟಿ ಸಮಾವೇಶದಲ್ಲಿ ಮತ್ತೊಮ್ಮೆ ಭೇಟಿಯಾಗಲು ಉಭಯ ನಾಯಕರು ನಿರ್ಧರಿಸಿದ್ದಾರೆ.

ಶನಿವಾರ 26 ಸೆಪ್ಟೆಂಬರ್ 2026

ಲ ಹ ರಿ

# ಐಪಿಎಲ್ 20ನೇ ಅವೃತ್ತಿ: ಅದ್ದೂರಿ ಕ್ರಿಕೆಟ್ ಹಬ್ಬ ಆಚರಿಸಲು ಬಿಸಿಸಿಐ ಸಿದ್ಧತೆ




ಚಿನಕುರಳಿ ಕ್ರಿಕೆಟ್ ಎಂದೇ ಖ್ಯಾತಿಯಾಗಿರುವ ಇಂಡಿಯನ್ ಪ್ರಿಮೀಯರ್ ಲೀಗ್ ಮುಂದಿನ ವರ್ಷ 20ನೇ ವರ್ಷದ ಆವೃತ್ತಿಗೆ ವೇದಿಕೆ ಸಜ್ಜುಗೊಳ್ಳುತ್ತಿದೆ. ಆದರೆ ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ಅದ್ದೂರಿ ಕ್ರಿಕೆಟ್ ಹಬ್ಬಕ್ಕೆ ಸಾಕ್ಷಿಯಾಗುತ್ತಿದೆ.

ಎರಡು ದಶಕಗಳ ಹಿಂದೆ ವಿಶ್ವದ ಶ್ರೀಮಂತ ಕ್ರಿಕೆಟ್ ಸಂಸ್ಥೆ ಭಾರತೀಯ ಕ್ರಿಕೆಟ್ ಮಂಡಳಿ ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭಿಸಿತ್ತು. ಅಂದಿನಿಂದ ಇದುವರೆಗೆ 19 ಆವೃತ್ತಿಗಳು ಪೂರ್ಣಗೊಂಡಿವೆ. ಈ ಚಿನಕುರಳಿ ಕ್ರಿಕೆಟ್ ಆರಂಭಿಸಿದ್ದಾಗಿನಿಂದ ಇದುವರೆಗೂ ದೇಶ ಮತ್ತು ಕ್ರಿಕೆಟ್ ಆಡುವ ದೇಶಗಳಲ್ಲಿ ಉದಯೋನ್ಮುಖ ಆಟಗಾರರನ್ನು ಹುಟ್ಟುಹಾಕಿದೆ .

ಅಷ್ಟೇ ಅಲ್ಲ ಐಪಿಎಲ್ ಹರಾಜಿನಲ್ಲಿ ಫ್ರಾಂಚೈಸಿ ಗಳು ತಮಗೆ ಬೇಕಾದ ಆಟಗಾರರನ್ನು ಖರೀದಿಸಲು ಪೈಪೋಟಿಗೆ ಬಿದ್ದು ದಾಖಲೆ ಮಟ್ಟದಲ್ಲಿ ಆಟಗಾರರನ್ನು ಖರೀದಿಸಲು ವೇದಿಕೆ ಕಲ್ಪಿಸಿತ್ತು. ಆಟಗಾರರಿಗೆ ಅವಕಾಶ ಮತ್ತು ಬ್ರ್ಯಾಂಡ್ ಮೌಲ್ಯವು ಹೆಚ್ಚಾಗಲು ಅನುವು ಮಾಡಿಕೊಟ್ಟಿತು.

2008 ರಲ್ಲಿ ಕೇವಲ ಎಂಟು ತಂಡಗಳೊಂದಿಗೆ ಆರಂಭವಾದ ಚುಟುಕು ಕ್ರಿಕೆಟ್‌ನ ಈ ಮಹಾಸಂಗ್ರಾಮ, ಇಂದು ಎರಡು ದಶಕಗಳ ಭವ್ಯ ಇತಿಹಾಸವನ್ನು ಪೂರೈಸಿದೆ.




ಈ ಮಹತ್ವದ ಮೈಲಿಗಲ್ಲನ್ನು ಕೇವಲ ಭಾರತ ಮಾತ್ರವಲ್ಲದೆ ಇಡೀ ವಿಶ್ವವೇ ಕಣ್ಣುಮುಚ್ಚಿ ನೋಡುವಂತೆ ಅತ್ಯಂತ 'ಗ್ರ್ಯಾಂಡ್' ಆಗಿ ಆಚರಿಸಲು ಬಿಸಿಸಿಐ ಭರ್ಜರಿ ಪ್ಲ್ಯಾನ್ ರೂಪಿಸಿದೆ. ಅದರಂತೆ ಈ ಐಪಿಎಲ್ ಮತ್ತಷ್ಟು ಗ್ರ್ಯಾಂಡ್ ಆಗಿ ಮೂಡಿಬರಲಿದ್ದು, ಇದಕ್ಕಾಗಿ ಬಿಸಿಸಿಐ ಈ ಯೋಜನೆಗಳನ್ನು ರೂಪಿಸಿದೆ.

20 ವರ್ಷಗಳ ಐಪಿಎಲ್ ಪಯಣವನ್ನು ಅವಿಸ್ಮರಣೀಯಗೊಳಿಸಲು ಬಿಸಿಸಿಐ ಮುಂದಾಗಿದೆ. ವಿಶ್ವದ ಅತಿ ದೊಡ್ಡ ಕ್ರಿಕೆಟ್ ಮೈದಾನವಾದ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಬೃಹತ್ ಉದ್ಘಾಟನಾ ಸಮಾರಂಭವನ್ನು ಆಯೋಜಿಸುತ್ತಿದೆ. ಕೇವಲ ಬಾಲಿವುಡ್ ತಾರೆಗಳು ಮಾತ್ರವಲ್ಲದೆ, ಅಂತರರಾಷ್ಟ್ರೀಯ ಪಾಪ್ ಗಾಯಕರು ಹಾಗೂ ಹಳೆಯ ಐಪಿಎಲ್ ಆವೃತ್ತಿಗಳ ದಿಗ್ಗಜ ನಾಯಕರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಇದು ಕ್ರೀಡಾ ಇತಿಹಾಸದಲ್ಲೇ ಅತ್ಯಂತ ವೆಚ್ಚದಾಯಕ ಮತ್ತು ಭವ್ಯ ಆರಂಭಕ್ಕೆ ಸಾಕ್ಷಿಯಾಗಲಿದೆ.

2008 ರ ಚೊಚ್ಚಲ ಸೀಸನ್‌ನಿಂದ ಹಿಡಿದು ಇಲ್ಲಿಯವರೆಗೆ ಲೀಗ್ ಅನ್ನು ಆವರಿಸಿಕೊಂಡಿರುವ ದಿಗ್ಗಜ ಕ್ರಿಕೆಟಿಗರನ್ನು ಒಂದೇ ವೇದಿಕೆಗೆ ತರಲು ಯೋಜನೆ ರೂಪಿಸಲಾಗುತ್ತಿದೆ.

ಎಂ.ಎಸ್. ಧೋನಿ, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಸೇರಿದಂತೆ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ, ಶೇನ್ ವಾರ್ನ್ (ಸ್ಮರಣಾರ್ಥ ಗೌರವ), ಆಡಮ್ ಗಿಲ್‌ಕ್ರಿಸ್ಟ್ ಅವರಂತಹ ಐಪಿಎಲ್‌ನ ಸಾರ್ವಕಾಲಿಕ ಶ್ರೇಷ್ಠ ನಾಯಕರನ್ನು ಮತ್ತು ದಿಗ್ಗಜರನ್ನು ವಿಶೇಷವಾಗಿ ಗೌರವಿಸಲು ಬಿಸಿಸಿಐ ಸಿದ್ಧತೆ ಮಾಡಿಕೊಳ್ಳುತ್ತಿದೆ.

2028 ರಲ್ಲಿ ಬಿಸಿಸಿಐ ಸ್ಥಾಪನೆಯಾಗಿ 100ನೇ ವರ್ಷದ ಸಂಭ್ರಮಕ್ಕೆ ಕಾಲಿಡುತ್ತಿದೆ. 2027ರ ಈ 20ನೇ ಐಪಿಎಲ್ ಸೀಸನ್ ಅನ್ನು ಬಿಸಿಸಿಐ ತನ್ನ ಶತಮಾನೋತ್ಸವದ ಭವ್ಯ ಆಚರಣೆಯ ಅಧಿಕೃತ ಕೌಂಟ್‌ಡೌನ್ ಆಗಿ ಬಳಸಿಕೊಳ್ಳಲಿದ್ದು, ಟೂರ್ನಿ ಯುದ್ದಕ್ಕೂ ಡಿಜಿಟಲ್ ಶೋಗಳು ಮತ್ತು ಕ್ರೀಡಾಂಗಣಗಳಲ್ಲಿ ಲೇಸರ್ ಲೈಟ್ ಪ್ರದರ್ಶನಗಳ ಮೂಲಕ ನೂರು ವರ್ಷಗಳ ಭಾರತೀಯ ಕ್ರಿಕೆಟ್ ಜರ್ನಿಯನ್ನು ವಿಭಿನ್ನ ರೀತಿಯಲ್ಲಿ ಅನಾವರಣಗೊಳಿಸಲಿದೆ.

20 ವರ್ಷಗಳ ಯಶಸ್ಸನ್ನು ಸಾರುವ ವಿಶೇಷ ಜಾಗತಿಕ ಗೀತೆಯನ್ನು ಖ್ಯಾತ ಅಂತರರಾಷ್ಟ್ರೀಯ ಸಂಗೀತ ನಿರ್ದೇಶಕರಿಂದ ಸಿದ್ಧಪಡಿಸಲಾಗುತ್ತಿದೆ. ಇದರೊಂದಿಗೆ, ಐಪಿಎಲ್ ಇತಿಹಾಸದಲ್ಲೇ ಮೊದಲ ಬಾರಿಗೆ ಅಧಿಕೃತ ಟ್ರೋಫಿಯನ್ನು ಭಾರತದ ಪ್ರಮುಖ 50 ಕ್ಕೂ ಹೆಚ್ಚು ನಗರಗಳಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಟ್ರೋಫಿ ಟೂರ್ ರೂಪದಲ್ಲಿ ಕೊಂಡೊಯ್ಯಲು ತೀರ್ಮಾನಿಸಿದೆ.

ಬೇಸಿಗೆಯ ಅತಿಯಾದ ತಾಪಮಾನ ಮತ್ತು ಮುಂಗಾರು ಮಳೆಯಿಂದ ಆಟಗಾರರ ದಕ್ಷತೆಗೆ ತೊಂದರೆಯಾಗದಂತೆ ತಡೆಯಲು ಬಿಸಿಸಿಐ ಹೊಸ 'ವಿಂಡೋ' ಸಿದ್ಧಪಡಿಸಿದೆ.

ಮಾರ್ಚ್ 10 ರಿಂದ ಆರಂಭವಾಗಿ ಮೇ 15 ರೊಳಗೆ ಇಡೀ ಟೂರ್ನಿ ಮುಕ್ತಾಯಗೊಳ್ಳಲಿದೆ. ಕೇವಲ 65 ದಿನಗಳ ಅತ್ಯಂತ ಕಡಿಮೆ ಅವಧಿಯಲ್ಲಿ ಎಂದಿನಂತೆ 10 ತಂಡಗಳ ನಡುವೆ ಒಟ್ಟು 74 ಹೈ-ವೋಲ್ಟೇಜ್ ಪಂದ್ಯಗಳು ನಡೆಯಲಿವೆ. ಇದರಿಂದಾಗಿ ಅಭಿಮಾನಿಗಳಿಗೆ ಪ್ರತಿದಿನವೂ ಬ್ಯಾಕ್-ಟು-ಬ್ಯಾಕ್ ರೋಚಕ ಪಂದ್ಯಗಳ ರಸದೌತಣ ಸಿಗಲಿದೆ.

ಐಪಿಎಲ್ 20ನೇ ಆವೃತ್ತಿಯು ಕೇವಲ ಮತ್ತೊಂದು ಕ್ರಿಕೆಟ್‌ನ ಆವೃತ್ತಿಯಂತೂ ಆಗಿರಲ್ಲ. ಭಾರತೀಯ ಕ್ರೀಡಾ ಇತಿಹಾಸದಲ್ಲೇ ಹಿಂದೆಂದೂ ಕಾಣದ ಅತ್ಯಂತ ವರ್ಣರಂಜಿತ ಅದ್ದೂರಿ ಮತ್ತು ದೃಶ್ಯ ವೈಭವದ ಮಹಾ ಸಂಗಮವೇ ಧರೆಗಿಳಿಯಲಿದೆ.

ಎರಡು ದಶಕಗಳ ರೋಚಕ ಇತಿಹಾಸದ ಸಂಭ್ರಮ, ಜಾಗತಿಕ ಮಟ್ಟದ ತಂತ್ರಜ್ಞಾನದ ಕ್ರಾಂತಿ ಎಲ್ಲವೂ ಮೇಳೈಸಲಿದೆ . ಬಾರಿಯ ಐಪಿಎಲ್ ಅನ್ನು ಜಾಗತಿಕ ಕ್ರೀಡಾ ಜಗತ್ತಿನ ಮುಖಪುಟದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತೆ ಮಾಡಲು ಬಿಸಿಸಿಐ ತಯಾರಿ ಮಾಡಿಕೊಳ್ಳುತ್ತಿದೆ.

# ಸಿಎಸ್ ಕೆ ನೂತನ ತರಬೇತುದಾರ ಜಹೀರ್ ಖಾನ್ ಮುಂದಿದೆ ಸವಾಲುಗಳು

ಚೆನ್ನೈ ಸೂಪರ್ ಕಿಂಗ್ಸ್ ತಂಡದ ತರಬೇತುದಾರರ ಪಟ್ಟ ಯಾರು ಆಗುತ್ತಾರೆಂಬ ಬಗ್ಗೆ ಕ್ರಿಕೆಟ್ ಪಡ ಸಾಲೆಯಲ್ಲಿ ಸಾಕಷ್ಟು ಕುತೂಹಲ ಚರ್ಚೆಗೆ ಕಾತಣವಾಗಿತ್ತು. ಈ ಹುದ್ದೆ ಅಲಂಕರಿಸಲು ಭಾರೀ ಪೈಪೋಟಿಯೇ ಕಂಡುಬಂದಿತ್ತು. ಅಳೆದು ತೂಗಿ ಭಾರತೀಯ ಕ್ರಿಕೆಟ್ ನ ಮಾಜಿ ವೇಗದ ಬೌಲರ್ ಜಹೀರ್ ಖಾನ್ ಗೆ ಮುಖ್ಯ ಕೋಚ್ ಹುದ್ದೆ ಒಲಿದಿದೆ. ಈ ಮೂಲಕ ಕ್ರಿಕೆಟ್ ನಲ್ಲಿ ಹೊಸ ಇನ್ನಿಂಗ್ಸ್ ಆರಂಭಿಸಿದ್ದಾರೆ. ಅಷ್ಟೇ ಅಲ್ಲ ಮುಂದಿನ ವರ್ಷ ನಡೆಯಲಿರುವ ಐಪಿಎಲ್ ನಲ್ಲಿ ತಂಡಕ್ಕೆ ಚಾಂಪಿಯನ್ ಕಿರೀಟ ತೊಡಿಸಬೇಕಾದ ಸವಾಲು ಜಹೀರ್ ಮುಂದಿದೆ.

ಸಿಎಸ್ ಕೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಬಗ್ಗೆ ಚರ್ಚೆಗಳು ಆಗಿಂದಾಗ್ಗೆ ನಡೆಯುತ್ತಲೇ ಇತ್ತು. ಅದರಲ್ಲೂ ಮಹೇಂದ್ರ ಸಿಂಗ್ ಧೋನಿಯುವರು ಮುಂದಿನ ಆವೃತ್ತಿಯಲ್ಲಿ ಆಡುತ್ತಾರೋ ಇಲ್ಲವೋ, ಸಿಎಸ್ ಕೆ ಫ್ರಾಂಚೈಸಿ ಧೋನಿ ಗೆ ಶೇ.30ರಷ್ಟು ಪಾಲುದಾರಿಕೆ ನೀಡುವುದು ಸೇರಿದಂತೆ ಅನೇಕ ವಿಷಯಗಳು ಮುನ್ನಲೆಗೆ ಬಂದಿತ್ತು.







ಈಗ ಒಂದೊಂದಾಗಿ ಬಗೆಹರಿಸಿಕೊಂಡು ಮುಂದಿನ ಆವೃತ್ತಿ ಗೆ ಸಿಎಸ್ ಕೆ ಅಣಿಯಾಗುತ್ತಿದೆ. ಇದರ ಒಂದು ಭಾಗವಾಗಿ ಸ್ಟೀಫನ್ ಫ್ಲೆಮಿಂಗ್ ಉತ್ತರಾಧಿಕಾರಿಯನ್ನಾಗಿ ಜಹೀರ್ ಖಾನ್ ಅವರನ್ನು ಆಯ್ಕೆ ಮಾಡಿದೆ.

ಜಹೀರ್‌ಗೆ ಆಟಗಾರನಾಗಿ ಅಪಾರ ಅನುಭವವಿದೆ. ಭಾರತ ಪರ ಅವರು 92 ಟೆಸ್ಟ್, 200 ಏಕದಿನ ಹಾಗೂ 17 ಟಿ20 ಪಂದ್ಯಗಳನ್ನು ಆಡಿದ್ದಾರೆ. 2011ರ ಏಕದಿನ ವಿಶ್ವಕಪ್‌ನಲ್ಲಿ ಭಾರತದ ಪ್ರಶಸ್ತಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ಅವರು, ಟೂರ್ನಿಯಲ್ಲಿ 21 ವಿಕೆಟ್‌ಗಳೊಂದಿಗೆ ಭಾರತದ ಗರಿಷ್ಠ ವಿಕೆಟ್ ಪಡೆದ ಕೀರ್ತಿಗೂ ಭಾಜನರಾಗಿದ್ದರು.

ಆಟಗಾರನಾಗಿ ನಿವೃತ್ತಿಯಾದ ಬಳಿಕ ಜಹೀರ್ ಕೋಚಿಂಗ್ ಮತ್ತು ಆಟಗಾರರ ಅಭಿವೃದ್ಧಿ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಮುಂಬೈ ಇಂಡಿಯನ್ಸ್‌ನಲ್ಲಿ ಕ್ರಿಕೆಟ್ ಆಪರೇಷನ್ಸ್ ಹಾಗೂ ಮೆಂಟರ್‌ಶಿಪ್ ಜವಾಬ್ದಾರಿಗಳನ್ನು ನಿರ್ವಹಿಸಿದ್ದ ಅವರು, ಲಖನೌ ಸೂಪರ್ ಜೈಂಟ್ಸ್‌ನ ಮೆಂಟರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಸಿಎಸ್‌ಕೆ ಮುಖ್ಯ ಕೋಚ್ ಆಗಿರುವುದು ಐಪಿಎಲ್‌ನಲ್ಲಿ ಮೊದಲ ಬಾರಿಗೆ ದೊಡ್ಡ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

2026ರ ಐಪಿಎಲ್‌ನಲ್ಲಿ ಅಂಕಪಟ್ಟಿಯ ಕೊನೆಯ ಸ್ಥಾನದಲ್ಲಿತ್ತು. ಹೀಗಾಗಿ 2027ರ ಆವೃತ್ತಿಯಲ್ಲಿ ತಂಡವನ್ನು ಮರುಸಂಘಟಿಸುವುದು ಜಹೀರ್ ಮುಂದಿರುವ ದೊಡ್ಡ ಸವಾಲು.

ಜಹೀರ್ ಖಾನ್‌ಗೆ ಇದು ಕೇವಲ ಹೊಸ ಹುದ್ದೆಯಲ್ಲ. ಭಾರತೀಯ ಕ್ರಿಕೆಟ್‌ನ ಅನುಭವಿ ವೇಗದ ಬೌಲರ್ ಒಬ್ಬರು ಇದೀಗ ಮುಖ್ಯ ಕೋಚ್ ಆಗಿ ತಮ್ಮ ನಾಯಕತ್ವದ ಸಾಮರ್ಥ್ಯವನ್ನು ತೋರಿಸುವ ಹೊಸ ಹಂತವಾಗಿದೆ.

ಹೊಸ ಹೆಡ್ ಕೋಚ್ ಆಯ್ಕೆಗೂ ಮುನ್ನ ಹಲವು ಹೆಸರುಗಳು ಚರ್ಚೆಯಲ್ಲಿದ್ದವು. ಹೇಮಾಂಗ್ ಬದಾನಿ, ಬ್ರೆಂಡನ್ ಮೆಕಲುಮ್, ಮೈಕಲ್ ಹಸ್ಸಿ, ರಾಹುಲ್ ದ್ರಾವಿಡ್ ಹೆಸರು ಸೇರಿದಂತೆ ಹಲವರು ಹೆಸರು ಮುಂಚೂಣಿಯಲ್ಲಿದ್ದವು. ಅಂತಿಮವಾಗಿ ಭಾರತದ ಮಾಜಿ ಬೌಲರ್ ಜಹೀರ್ ಖಾನ್ ತರಬೇತುದಾರರನ್ನಾಗಿ ಆಯ್ಕೆ ಮಾಡುವ ಮೂಲಕ ಎಲ್ಲ ಊಹಾಪೋಹಳಿಗೆ ಸಿಎಸ್ ಕೆ ಪೂರ್ಣ ವಿರಾಮ ಹಾಕಿದೆ.

**ಜಹೀರ್ ಮುಂದಿರುವ ಜವಾಬ್ದಾರಿ**

ಐಪಿಎಲ್ 2027ಕ್ಕೂ ಮುನ್ನ ಅವರ ಮುಂದೆ ಹಲವು ಮಹತ್ವದ ಸವಾಲುಗಳಿವೆ. ಸ್ಟೀಫನ್ ಫ್ಲೆಮಿಂಗ್ ಅವರ 18 ವರ್ಷಗಳ ಕೋಚಿಂಗ್ ಅವಧಿಯ ಬಳಿಕ ಜಹೀರ್ ಹೊಸ ಕ್ರಿಕೆಟ್ ದಿಕ್ಕಿನತ್ತ ಕೊಂಡೊಯ್ಯಬೇಕಿದೆ.

ಯುವ ಆಟಗಾರರ ಅಭಿವೃದ್ಧಿ ಜಹೀರ್ ಅವರ ಪ್ರಮುಖ ಜವಾಬ್ದಾರಿಗಳಲ್ಲಿ ಯುವ ಪ್ರತಿಭೆಗಳನ್ನು ಬೆಳೆಸುವುದು ಪ್ರಮುಖವಾಗಲಿದೆ. ವಿಶೇಷವಾಗಿ ವೇಗದ ಬೌಲರ್‌ಗಳ ಬೆಳವಣಿಗೆಯಲ್ಲಿ ಅವರ ಅನುಭವ ಸಿಎಸ್ ಕೆಗೆ ವರದಾನವಾಗಲಿದೆ.

ಬೌಲಿಂಗ್ ವಿಭಾಗಕ್ಕೆ ಹೊಸ ರೂಪ

ಮೋರ್ನೆ ಮಾರ್ಕೆಲ್ ನಿರ್ಗಮನದ ನಂತರ ಬೌಲಿಂಗ್ ಗುಂಪಿಗೆ ಜಹೀರ್ ನೇರವಾಗಿ ಕೊಡುಗೆ ನೀಡುವ ನಿರೀಕ್ಷೆಯಿದೆ. ಪೇಸ್ ಬೌಲಿಂಗ್‌ನ ತಂತ್ರ, ಪಂದ್ಯ ಯೋಜನೆ ಮತ್ತು ಆಟಗಾರರ ನಿರ್ವಹಣೆಯಲ್ಲಿ ಅವರ ಅನುಭವ ಬಳಸಿಕೊಳ್ಳಬಹುದು.

ತಂಡದ ಪುನರ್‌ನಿರ್ಮಾಣ ಸಿಎಸ್ ಕೆ 2026ರ ಐಪಿಎಲ್‌ನಲ್ಲಿ ಅಂಕಪಟ್ಟಿಯ ಕೊನೆಯ ಸ್ಥಾನದಲ್ಲಿತ್ತು. ಹೀಗಾಗಿ ತಂಡದ ಸಂಯೋಜನೆ, ಯುವ ಆಟಗಾರರಿಗೆ ಅವಕಾಶ ಮತ್ತು ಮುಂದಿನ ಹಂತದ ತಂಡ ನಿರ್ಮಾಣ ಜಹೀರ್ ಮುಂದಿರುವ ದೊಡ್ಡ ಕೆಲಸವಾಗಿದೆ.

ಎಂ.ಎಸ್. ಧೋನಿ ಜೊತೆ ಸಮನ್ವಯ

ಧೋನಿ ಮುಂದುವರಿಯುವ ಪಾತ್ರದ ಬಗ್ಗೆ ಚರ್ಚೆ ಇರುವ ಸಂದರ್ಭದಲ್ಲಿ ಜಹೀರ್ ಮತ್ತು ಧೋನಿ ನಡುವೆ ಉತ್ತಮ ಸಮನ್ವಯ ಅಗತ್ಯವಾಗಲಿದೆ.

ಸಿಎಸ್ ಕೆಗೆ ಧೋನಿಯ ಅನುಭವವನ್ನು ಬಳಸಿಕೊಂಡು ಹೊಸ ಕೋಚಿಂಗ್ ವ್ಯವಸ್ಥೆ ರೂಪಿಸುವುದು ಜಹೀರ್ ಅವರ ಪ್ರಮುಖ ಜವಾಬ್ದಾರಿಯಾಗಲಿದೆ.

ಫ್ಲೆಮಿಂಗ್ ನಂತರದ ಹೊಸ ಗುರುತು

ಫ್ಲೆಮಿಂಗ್ ಅವರ ದೀರ್ಘಕಾಲದ ವ್ಯವಸ್ಥೆಯ ನಂತರ ಸಿಎಸ್ ಕೆಗೆ ಹೊಸ ಕ್ರಿಕೆಟ್ ಐಡೆಂಟಿಟಿ ನೀಡಬೇಕಿದೆ. ಜಹೀರ್ ತಮ್ಮದೇ ಆದ ತಂತ್ರ, ತರಬೇತಿ ವಿಧಾನ ಮತ್ತು ಆಟಗಾರರ ನಿರ್ವಹಣೆಯ ಶೈಲಿಯನ್ನು ರೂಪಿಸಬೇಕಾಕಿದೆ.

ಒಟ್ಟಿನಲ್ಲಿ, ಜಹೀರ್ ಖಾನ್ ಅವರ ಮುಂದಿರುವ ಕೆಲಸ ಕೇವಲ ಕೋಚ್ ಆಗಿರುವುದಷ್ಟೇ ಅಲ್ಲ. ಮುಂದಿನ ಪೀಳಿಗೆಯ ತಂಡವನ್ನು ಕಟ್ಟುವ ಗುರುತರ ಜವಾಬ್ದಾರಿಯೂ ಅವರ ಮೇಲಿದೆ.

# ಬ್ಯಾಂಕ್ ಹಗರಣದೊಳಗಿನ 'ಸ್ಪಾರ್ಕ್'

- ಚಿತ್ರ: ಸ್ಪಾರ್ಕ್
- ನಿರ್ದೇಶನ: ಮಹಂತೇಶ್ ಹಂದ್ರಾಳ್
- ನಿರ್ಮಾಣ:
- ತಾರಾಗಣ: ನಿರಂಜನ್ ಸುಧೀಂದ್ರ, ನೆನಪಿರಲಿ ಪ್ರೇಮ್, ರಚನಾ ಇಂದರ್, ಭಾವನಾ ಮೆನನ್ ಕಿರಣ್ ರಾಜ್,
- ರೇಟಿಂಗ್ಸ್: ★★★½

ಸಾಮಾನ್ಯ ಜನರು ಕಷ್ಟಪಟ್ಟು ಕೂಡಿಟ್ಟ ಹಣ ರಾಜಕೀಯ ಸ್ವಾರ್ಥ ಮತ್ತು ಅಧಿಕಾರದ ಆಟಕ್ಕೆ ಬಲಿಯಾದರೆ? ಈ ಪ್ರಶ್ನೆಯನ್ನು ಕೇಂದ್ರವಾಗಿಟ್ಟುಕೊಂಡು ಸಹಕಾರಿ ಬ್ಯಾಂಕ್ವೊಂದರ ಹಗರಣದ ಸುತ್ತ ಹೆಣೆದಿರುವ ಕ್ರೈಂ ಥ್ರಿಲ್ಲರ್ ಚಿತ್ರ 'ಸ್ಪಾರ್ಕ್'.

ತನಿಖಾ ಪತ್ರಕರ್ತ ಅಭಿರಾಮ್ (ನಿರಂಜನ್ ಸುಧೀಂದ್ರ) ಬ್ಯಾಂಕ್ ವಂಚನೆಯ ಬೆನ್ನುಹತ್ತುತ್ತಾನೆ. ಇದೇ ಪ್ರಕರಣದ ತನಿಖೆ ನಡೆಸುವ ಪೊಲೀಸ್ ಅಧಿಕಾರಿ ರಂಜಿತ್ ಕುಮಾರ್ (ನೆನಪಿರಲಿ ಪ್ರೇಮ್) ಜತೆ ಆತನ ಮುಖಾಮುಖಿ ನಡೆಯುತ್ತದೆ. ಇಬ್ಬರ ತನಿಖೆಯ ಹಾದಿ ವಿಭಿನ್ನವಾಗಿದ್ದರೂ, ಗುರಿ ಮಾತ್ರ ಒಂದೇ. ಪ್ರಕರಣದ ಹಿಂದೆ ಇರುವ ನಿಜವಾದ ಸೂತ್ರಧಾರಿ ಯಾರು ಎಂಬುದನ್ನು ಹುಡುಕುತ್ತಾ ಸಾಗುವ ಕಥೆ, ಒಂದೊಂದೇ ರಹಸ್ಯವನ್ನು ಬಿಚ್ಚಿಡುತ್ತಾ ಕುತೂಹಲ ಕಾಯ್ದುಕೊಳ್ಳುತ್ತದೆ.



ಜನಸಾಮಾನ್ಯರ ಹಣ, ರಾಜಕೀಯ ಹಸ್ತಕ್ಷೇಪ ಮತ್ತು ಅಧಿಕಾರದ ದುರುಪಯೋಗವನ್ನು ಕ್ರೈಂ?ಥ್ರಿಲ್ಲರ್ ಚೌಕಟ್ಟಿನಲ್ಲಿ ಹೇಳುವ ಪ್ರಯತ್ನ ಗಮನಾರ್ಹ.

ಸಾಮಾಜಿಕ ಸಮಸ್ಯೆಯೊಂದನ್ನು ಸಸ್ಪೆನ್ಸ್ ಮತ್ತು ಕ್ರೈಂ ಅಂಶಗಳೊಂದಿಗೆ ಕಟ್ಟಿಕೊಡುವಲ್ಲಿ ನಿರ್ದೇಶಕ ಮಹಂತೇಶ್ ಹಂದ್ರಾಳ್ ಪ್ರಯತ್ನಿಸಿದ್ದಾರೆ.

ಕಥೆಯ ಆರಂಭದಿಂದಲೇ ಪ್ರೇಕ್ಷಕರನ್ನು ಪ್ರಕರಣದೊಳಗೆ ಸೆಳೆಯುವ ನಿರೂಪಣೆ ಚಿತ್ರದ ಪ್ರಮುಖ ಬಲ. ತನಿಖೆ ಮುಂದುವರಿದಂತೆ ಹೊಸ ತಿರುವುಗಳು ಎದುರಾಗುತ್ತವೆ. ಕ್ಲೈಮ್ಯಾಕ್ಸ್ ತಲುಪುವ ಹೊತ್ತಿಗೆ ರಹಸ್ಯ ಬಿಚ್ಚಿಡುವ ಕುತೂಹಲ ಉಳಿಸಿದರೂ, ಅದರ ಭಾವನಾತ್ಮಕ ಪರಿಣಾಮ ಇನ್ನಷ್ಟು ಗಟ್ಟಿಗೊಳಿಸುವ ಅವಕಾಶವಿತ್ತು.

ಅಭಿರಾಮ್ ಪಾತ್ರದಲ್ಲಿ ನಿರಂಜನ್ ಸುಧೀಂದ್ರ ಚುರುಕುತನದಿಂದ ಕಾಣಿಸಿಕೊಂಡಿದ್ದು, ಆಕ್ಷನ್ ದೃಶ್ಯಗಳಲ್ಲೂ ಗಮನ ಸೆಳೆಯುತ್ತಾರೆ. ತನಿಖಾ ಪತ್ರಕರ್ತನ ಹಠ ಮತ್ತು ಧೈರ್ಯವನ್ನು ಅವರು ಸಮರ್ಥವಾಗಿ ತೋರಿಸಿದ್ದಾರೆ. ನೆಗೆಟಿವ್ ಶೇಡ್ನ ಪೊಲೀಸ್ ಅಧಿಕಾರಿಯಾಗಿ ನೆನಪಿರಲಿ ಪ್ರೇಮ್ ತಮ್ಮ ಹಿಂದಿನ ಇಮೇಜ್ಗೆ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರಂಜನ್ ಹಾಗೂ ಪ್ರೇಮ್ ಮುಖಾಮುಖಿ ಚಿತ್ರಕ್ಕೆ ವೇಗ ನೀಡಿದೆ.

ರಚನಾ ಇಂದರ್ ಪಾತ್ರ ಕಥೆಯ ಭಾವನಾತ್ಮಕವಾಗಿ ಹತ್ತಿರವಾಗುತ್ತದೆ. ವಕೀಲೆ ವೈದೇಹಿಯಾಗಿ (ಭಾವನಾ ಮೆನನ್) ವಿಭಿನ್ನವಾಗಿ ಕಾಣಿಸಿಕೊಂಡಿದ್ದು ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಸ್ವಾಮಿ ಜೆ. ಗೌಡ ಅವರ ಛಾಯಾಗ್ರಹಣ ಥ್ರಿಲ್ಲರ್ ವಾತಾವರಣವನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ. ತನಿಖೆ, ಬೆನ್ನಟ್ಟುವಿಕೆ ಮತ್ತು ಸಂಘರ್ಷದ ದೃಶ್ಯಗಳಲ್ಲಿ ಕ್ಯಾಮೆರಾ ಚಲನೆ ಕಥೆಯ ವೇಗಕ್ಕೆ ಹೊಂದಿಕೊಳ್ಳುತ್ತದೆ. ಆದರೆ ಕೆಲವು ದೃಶ್ಯಗಳಲ್ಲಿ ದೃಶ್ಯ ವೈಭವಕ್ಕಿಂತ ಕಥೆಯ ಸ್ಪಷ್ಟತೆಗೆ ಆದ್ಯತೆ ನೀಡಬೇಕಾಗಿತ್ತು. ಸಚಿನ್ ಬಸ್ರೂರು ಅವರ ಸಂಗೀತ ಮತ್ತು ಹಿನ್ನೆಲೆ ಸಂಗೀತ ದೃಶ್ಯಗಳ ವೇಗ ಹೆಚ್ಚಿಸುತ್ತವೆ.

ಕೆಲವೆಡೆ ಹಿನ್ನೆಲೆ ಸಂಗೀತವೇ ದೃಶ್ಯದ ಭಾವನೆಯನ್ನು ಅತಿಯಾಗಿ ಒತ್ತಿಹೇಳುತ್ತದೆ.

ಜನಸಾಮಾನ್ಯರ ಹಣದ ವಂಚನೆಯಂತಹ ಗಂಭೀರ ವಿಷಯವನ್ನು ತನಿಖಾ ಕಥೆಯ ಮೂಲಕ ಹೇಳುವ ಪ್ರಯತ್ನ 'ಸ್ಪಾರ್ಕ್'. ಕಥೆಯ ಮೂಲವಸ್ತು ಮತ್ತು ನಿರೂಪಣೆಯ ವೇಗ ಚಿತ್ರದ ಬಲ. ಕೊನೆಯವರೆಗೂ ಕುತೂಹಲ ಕಾಯ್ದುಕೊಳ್ಳುವ ಕ್ರೈಂ ಥ್ರಿಲ್ಲರ್ ಇಷ್ಟಪಡುವವರಿಗೆ ಈ ಚಿತ್ರ ಗಮನ ಸೆಳೆಯುತ್ತದೆ.

# ಪಂಜಾಬ್‌ನಲ್ಲಿ ಮತ್ತೆ ಪಂಥೀಯ ಸಂಘರ್ಷದ ಕಾವು

ಅಂಬಾಲಾ ಘರ್ಷಣೆಯಿಂದ ಬಂಡಿ ಸಿಂಗ್ ವಿಚಾರದವರೆಗೆ; 2027ರ ಚುನಾವಣೆ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ರಾಜಕೀಯ ಚಟುವಟಿಕೆಪಂಜಾಬ್‌ನಲ್ಲಿ 2027ರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಧಾರ್ಮಿಕ ಭಾವನೆ, ರೈತ ಸಂಘಟನೆಗಳು, ಪಂಥೀಯ ರಾಜಕಾರಣ ಹಾಗೂ ಪ್ರತಿಭಟನೆಗಳ ಸುತ್ತ ಸಂಘರ್ಷದ ವಾತಾವರಣ ಮತ್ತೆ ತೀವ್ರಗೊಳ್ಳುತ್ತಿರುವ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಹರಿಯಾಣದ ಅಂಬಾಲಾದಲ್ಲಿ ಆ. 13ರಂದು ನಡೆದ ಪ್ರತಿಭಟನೆ, ಚಂಡೀಗಢದಲ್ಲಿ ಬಂಡಿ ಸಿಂಗ್‌ಗಳ ಬಿಡುಗಡೆಗೆ ಆಗ್ರಹಿಸಿ ನಡೆದ ಹೋರಾಟ, ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಮೇಲಿನ ದಾಳಿ ಹಾಗೂ ಮಾಜಿ ಅಕಾಲ್ ತಖ್ತ್ ಜತೇದಾರ್ ಗಿಯಾನಿ ರಘಬೀರ್ ಸಿಂಗ್ ಅವರ ನಿವಾಸದ ಬಳಿ ಗುಂಡಿನ ದಾಳಿ ಸೇರಿದಂತೆ ಹಲವು ಬೆಳವಣಿಗೆಗಳು ಪಂಜಾಬ್‌ನ ಪಂಥೀಯ ರಾಜಕೀಯದ ಸೂಕ್ಷ್ಮತೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿವೆ.

ಆಗಸ್ಟ್ 13ರಂದು ಹರಿಯಾಣದ ಅಂಬಾಲಾ ಕ್ಯಾಂಟೋನ್ಮೆಂಟ್ ಸಮೀಪ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಒಂಬತ್ತು ಪೊಲೀಸರು ಗಾಯಗೊಂಡಿದ್ದರು. ಗಾಯಗೊಂಡವರಲ್ಲಿ ಡಿವೈಎಸ್‌ಪಿ ಒಬ್ಬರೂ ಇದ್ದು, ಅವರ ಬೆರಳು ತುಂಡಾಗಿದೆ ಎಂದು ವರದಿಯಾಗಿದೆ. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಹಾಗೂ ಲಾಠಿಚಾರ್ಜ್ ನಡೆಸಿದ್ದರು.

ಆ. 7ರಂದು ನಡೆದ ಘರ್ಷಣೆಗೆ ಸಂಬಂಧಿಸಿ ಬಂಧಿಸಲಾದ ಇಬ್ಬರು ಸಿಖ್ ಯುವಕರನ್ನು ಬಿಡುಗಡೆ ಮಾಡಬೇಕು, ಅವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯಬೇಕು ಹಾಗೂ ಇಂಟರ್‌ನ್ಯಾಷನಲ್ ಆ್ಯಂಟಿ-ಖಲಿಸ್ತಾನಿ ಟೆರರಿಸ್ಟ್ ಫ್ರಂಟ್ (ಐಎಕೆಟಿಎಫ್) ನಾಯಕ ಗುರ್ಸಿಮ್ರನ್ ಸಿಂಗ್ ಮಂದ್ ಮತ್ತು ಅವರ ಪುತ್ರ ಭವಜೋತ್ ಸಿಂಗ್ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಬೇಕು ಎಂಬುದು ಪ್ರತಿಭಟನಾಕಾರರ ಪ್ರಮುಖ ಬೇಡಿಕೆಯಾಗಿತ್ತು.

ಪೊಲೀಸರ ಪ್ರಕಾರ, ಕೆಲ ಪ್ರತಿಭಟನಾಕಾರರು ಈಟಿ, ಕೊಡಲಿ, ಕತ್ತಿ ಸೇರಿದಂತೆ ಶಸ್ತ್ರಾಸ್ತ್ರಗಳನ್ನು ಹಿಡಿದು ಪೊಲೀಸರ ಮೇಲೆ ದಾಳಿ ನಡೆಸಿದರು. ವಾಹನಗಳ ಕೀ ಕಸಿದುಕೊಳ್ಳುವುದು, ಕಲ್ಲುತೂರಾಟ ಹಾಗೂ ಗ್ಯಾಸ್ ಟ್ಯಾಂಕರ್ ಸೇರಿದಂತೆ ವಾಹನಗಳನ್ನು ತಡೆಯುವ ಘಟನೆಗಳೂ ನಡೆದವು ಎಂದು ಪೊಲೀಸರು ತಿಳಿಸಿದ್ದಾರೆ.

**ಆಗಸ್ಟ್ 7ರ ಘಟನೆ ಹಿನ್ನೆಲೆ**

ಆಗಸ್ಟ್ 7ರಂದು ಅಂಬಾಲಾ ಜಿಲ್ಲೆಯ ಪಂಜೋಖ್ರಾ ಸಾಹಿಬ್ ಗುರುದ್ವಾರದಲ್ಲಿ ನಡೆದ ಧಾರ್ಮಿಕ ಸಭೆಯ ವೇಳೆ ಮಂದ್, ಅವರ ಪುತ್ರ ಹಾಗೂ ಇಬ್ಬರು ಪೊಲೀಸರು ಗಾಯಗೊಂಡಿದ್ದರು. ತಾವು ಸರ್ಕಾರ ಪರ ಹಾಗೂ ಖಲಿಸ್ತಾನ ವಿರೋಧಿ ನಿಲುವು ಹೊಂದಿರುವ ಕಾರಣದಿಂದಲೇ ದಾಳಿ ನಡೆಸಲಾಗಿದೆ ಎಂದು ಮಂದ್ ಆರೋಪಿಸಿದ್ದರು. ತಮ್ಮಿಂದ ಖಲಿಸ್ತಾನ ಪರ ಘೋಷಣೆಗಳನ್ನು ಕೂಗಿಸುವಂತೆ ಒತ್ತಾಯಿಸಲಾಗಿತ್ತು ಮತ್ತು ಜೈಲಿನಲ್ಲಿರುವ ಸಂಸದ ಅಮೃತಪಾಲ್ ಸಿಂಗ್ ಅವರನ್ನು ಬಿಡುಗಡೆ ಮಾಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದ್ದರು ಎಂದು ಅವರು ಹೇಳಿದ್ದರು.

ಆದರೆ, ಮಂದ್ ಅವರ ವಾಹನವು ಧಾರ್ಮಿಕ ಸಭೆಯೊಳಗೆ ಅಜಾಗರೂಕತೆಯಿಂದ ಚಲಿಸಿ ಸೂರಿಂದರ್ ಸಿಂಗ್ ಎಂಬ ಭಕ್ತರಿಗೆ ಗಂಭೀರ ಗಾಯವಾಗಿತ್ತು ಎಂದು ಎಚ್‌ಎಸ್‌ಜಿಎಂಸಿ ಆರೋಪಿಸಿದೆ. ವೈ-ವರ್ಗದ ಭದ್ರತೆ ಹೊಂದಿದ್ದ ಮಂದ್ ಅವರ ವರ್ತನೆ ಗುರುದ್ವಾರದ ಪಾವಿತ್ರ್ಯತೆಗೆ ಧಕ್ಕೆ ತಂದಿದೆ ಎಂಬ ಆರೋಪವೂ ಕೇಳಿಬಂದಿದೆ.

ಅಂಬಾಲಾ ಘಟನೆ ನಡೆದ ಎರಡು ದಿನಗಳ ಬಳಿಕ, ಆ. 15ರಂದು ಚಂಡೀಗಢದ ವೈಪಿಎಸ್ ಚೌಕ್‌ನಲ್ಲಿ ಕೌಮಿ ಇನ್ಸಾಫ್ ಮೋರ್ಚಾ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆಯಿತು.

ಜಗತಾರ್ ಸಿಂಗ್ ಹವಾರಾಗೆ ಪೆರೋಲ್ ನೀಡಬೇಕು ಹಾಗೂ ಶಿಕ್ಷೆ ಪೂರ್ಣಗೊಳಿಸಿರುವ ಇತರ ಬಂಡಿ ಸಿಂಗ್‌ಗಳನ್ನು ಬಿಡುಗಡೆ ಮಾಡಬೇಕು ಎಂಬುದು ಪ್ರತಿಭಟನಾಕಾರರ ಬೇಡಿಕೆಯಾಗಿತ್ತು. ಶಿರೋಮಣಿ ಅಕಾಲಿ ದಳ ಅಮೃತಸರದ ಅಧ್ಯಕ್ಷ ಹಾಗೂ ಮಾಜಿ ಸಂಸದ ಸಿಮ್ರಂಜಿತ್ ಸಿಂಗ್ ಮಾನ್ ಅವರು ರಾಜ್ಯಪಾಲರ ನಿವಾಸದತ್ತ ತೆರಳಿದ ಸಂದರ್ಭದಲ್ಲಿ ವಶಕ್ಕೆ ಪಡೆಯಲಾಯಿತು. ನಂತರ ಕೌಮಿ ಇನ್ಸಾಫ್ ಮೋರ್ಚಾ ಆಗಸ್ಟ್ 21ರಂದು ಪಂಜಾಬ್ ಬಂದ್‌ಗೆ ಕರೆ ನೀಡಿತ್ತು.

**ಸುಖಬೀರ್ ಬಾದಲ್ ಮೇಲೂ ದಾಳಿ**

ಇದೇ ಅವಧಿಯಲ್ಲಿ ಎಸ್‌ಎಡಿ ಅಧ್ಯಕ್ಷ ಹಾಗೂ ಮಾಜಿ ಉಪಮುಖ್ಯಮಂತ್ರಿ ಸುಖಬೀರ್ ಸಿಂಗ್ ಬಾದಲ್ ಅವರ ಮೇಲೆ ಮತ್ತೊಂದು ದಾಳಿ ನಡೆದಿದೆ. ಆಗಸ್ಟ್ 13ರಂದು ಮಹಾರಾಷ್ಟ್ರದ ನಾಂದೇಡ್‌ನ ಗುರುದ್ವಾರ ಮಾತಾ ಸಾಹಿಬ್ ದೇವಾನ್ ಜಿಯಲ್ಲಿ ಜಸ್ಪಾಲ್ ಸಿಂಗ್ ಎಂಬ ವಕೀಲ ಹಾಗೂ ಮಾಜಿ ಸೇವಾದಾರ, ನಿಹಂಗ್ ವೇಷದಲ್ಲಿದ್ದು ಕಿರ್ಪಾನ್‌ನಿಂದ ಬಾದಲ್ ಅವರ ಮೇಲೆ ದಾಳಿ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ದಾಳಿಕೋರನನ್ನು ಬಂಧಿಸಲಾಗಿದ್ದು, ಇದುವರೆಗೆ ಸಂಘಟಿತ ಸಂಚಿನ ಸ್ಪಷ್ಟ ಸಾಕ್ಷ್ಯ ದೊರೆತಿಲ್ಲ ಎಂದು ತನಿಖಾ ಮೂಲಗಳು ತಿಳಿಸಿವೆ. ಗುರು ಗ್ರಂಥ ಸಾಹಿಬ್ ಅಪವಿತ್ರಗೊಳಿಸಿದ 2015ರ ಬರ್ಗಾರಿ ಪ್ರಕರಣ ಹಾಗೂ ನಂತರದ ಬೆಹಬಲ್ ಕಲಾನ್ ಪೊಲೀಸ್ ಗೋಲಿಬಾರ್ ಘಟನೆಗಳು ಪಂಜಾಬ್ ರಾಜಕೀಯದಲ್ಲಿ ಇನ್ನೂ ಪ್ರಮುಖ ವಿಷಯಗಳಾಗಿವೆ.

ಆಮ್ ಆದ್ಮಿ ಪಕ್ಷದ ಸರ್ಕಾರವು ಅಪವಿತ್ರಗೊಳಿಸುವಿಕೆ ಪ್ರಕರಣಗಳ ವಿರುದ್ಧದ ಕಾನೂನು ವ್ಯವಸ್ಥೆಯನ್ನು ಬಲಪಡಿಸಿರುವುದಾಗಿ ಹೇಳಿಕೊಂಡಿದ್ದರೆ, ವಿರೋಧ ಪಕ್ಷಗಳು ಸರ್ಕಾರವು ಪಂಥೀಯ ವಿಚಾರಗಳನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸುತ್ತಿವೆ. ಎಸ್‌ಎಡಿಯ ಮೇಲೂ ಈ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿದಂತೆ ಟೀಕೆಗಳು ಮುಂದುವರಿದಿವೆ.

ರೈತ ಸಂಘಟನೆಗಳಿಗೆ ಗ್ರಾಮಗಳು, ಗುರುದ್ವಾರಗಳು, ಹೆದ್ದಾರಿಗಳು ಹಾಗೂ ಗಡಿ ಪ್ರದೇಶಗಳಲ್ಲಿ ವ್ಯಾಪಕ ಜಾಲವಿರುವುದರಿಂದ, ಧಾರ್ಮಿಕ ಹಾಗೂ ರೈತ ಸಂಘಟನೆಗಳ ಒಗ್ಗೂಡುವಿಕೆ ಯಾವುದೇ ಸ್ಥಳೀಯ ವಿವಾದವನ್ನು ದೊಡ್ಡ ಮಟ್ಟದ ಪ್ರತಿಭಟನೆಯಾಗಿ ವಿಸ್ತರಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಪಂಜಾಬ್‌ನಲ್ಲಿ ಪಂಥೀಯ ರಾಜಕೀಯದ ಮೇಲೆ ಪ್ರಭಾವ ಸಾಧಿಸಲು ವಿವಿಧ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಪ್ರಯತ್ನಿಸುತ್ತಿವೆ. ಆಮ್ ಆದ್ಮಿ ಪಕ್ಷವು ಸಿಖ್ ಸಮುದಾಯದ ಬೆಂಬಲವನ್ನು ಉಳಿಸಿಕೊಳ್ಳುವ ಜತೆಗೆ ಇತರ ಸಮುದಾಯಗಳಲ್ಲೂ ತನ್ನ ನೆಲೆಯನ್ನು ವಿಸ್ತರಿಸಲು ಯತ್ನಿಸುತ್ತಿದೆ. ಕಾಂಗ್ರೆಸ್ ಸಿಖ್ ಸಮುದಾಯದ ಹಲವು ಅಸಮಾಧಾನಗಳನ್ನು ಪ್ರಸ್ತಾಪಿಸುತ್ತಿದೆ. ಎಸ್‌ಎಡಿ ತನ್ನ ಸಾಂಪ್ರದಾಯಿಕ ಪಂಥೀಯ ನೆಲೆಯನ್ನು ಮರಳಿ ಪಡೆಯಲು ಪ್ರಯತ್ನಿಸುತ್ತಿದೆ. ಬಿಜೆಪಿ ರಾಜ್ಯದಲ್ಲಿ ತನ್ನ ರಾಜಕೀಯ ವ್ಯಾಪ್ತಿಯನ್ನು ವಿಸ್ತರಿಸುವತ್ತ ಗಮನಹರಿಸಿದೆ.

-ನಿಜೇಶ್ ಎನ್.ಸಂಶೋಧನಾ ಸಹಾಯಕ, ಇನ್‌ಸ್ಟಿಟ್ಯೂಟ್ ಫಾರ್ ಕಾನ್ಫ್ಲಿಕ್ಟ್ ಮ್ಯಾನೇಜ್‌ಮೆಂಟ್

# ಎಸ್‌ಐಆರ್: ಆಯೋಗದ ಸ್ಪಷ್ಟನೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು, ಸೆ. 26– ಮತದಾರರ ಪಟ್ಟಿಯ ಪರಿಷ್ಕರಣೆ, ಎಸ್ ಐಆರ್ ಪ್ರಕ್ರಿಯೆ ಹಾಗೂ ಚುನಾವಣಾ ದತ್ತಾಂಶ ನಿರ್ವಹಣೆ ಕುರಿತು ಸಾರ್ವಜನಿಕ ವಲಯದಲ್ಲಿ ಮೂಡಿರುವ ಅನುಮಾನಗಳಿಗೆ ಚುನಾವಣಾ ಆಯೋಗವು ಸ್ಪಷ್ಟ ಉತ್ತರ ನೀಡಬೇಕು ಎಂದು ಆಗ್ರಹಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ವಿಶಿಷ್ಟ ಪ್ರತಿಭಟನೆ ನಡೆಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಮತದಾರರ ಹಕ್ಕು ಮತ್ತು ಚುನಾವಣಾ ಪ್ರಕ್ರಿಯೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕಾಪಾಡುವ ನಿಟ್ಟಿನಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ,




ಅರ್ಹ ಮತದಾರರ ಹೆಸರುಗಳನ್ನು ಅನ್ಯಾಯವಾಗಿ ಕೈಬಿಡದಿರುವುದು, ಫಾರ್ಮ್ –6 ಹಾಗೂ ಮತದಾರರ ದತ್ತಾಂಶ ನಿರ್ವಹಣೆಯಲ್ಲಿನ ಬದಲಾವಣೆಗಳ ಕುರಿತು ಸಮಗ್ರ ಮಾಹಿತಿ ಬಹಿರಂಗಪಡಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಅವರು ಮುಂದಿಟ್ಟರು.

"ಮತದಾನದ ಹಕ್ಕು ಪ್ರಜಾಪ್ರಭುತ್ವದ ಅಡಿಪಾಯ. ಮತದಾರರ ಪಟ್ಟಿಯ ಬಗ್ಗೆ ಜನರಲ್ಲಿ ಅನುಮಾನ ಮೂಡಿದರೆ, ಚುನಾವಣಾ ಆಯೋಗವೇ ಪಾರದರ್ಶಕವಾಗಿ ಉತ್ತರಿಸಬೇಕು. ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯನ್ನು ಕಾಪಾಡುವುದು ಚುನಾವಣಾ ಆಯೋಗದ ಸಂವಿಧಾನಾತ್ಮಕ ಜವಾಬ್ದಾರಿ," ಎಂದು ಎಸ್. ಮನೋಹರ್ ಹೇಳಿದರು.

ಮತದಾರರ ಹಕ್ಕು, ಪಾರದರ್ಶಕ ಚುನಾವಣೆ ಮತ್ತು ಸಂವಿಧಾನಾತ್ಮಕ ಸಂಸ್ಥೆಗಳ ಹೊಣೆಗಾರಿಕೆಯನ್ನು ಬಲಪಡಿಸುವ ಉದ್ದೇಶದಿಂದ ಈ ಪ್ರತಿಭಟನೆ ನಡೆಸಲಾಗಿದೆ ಎಂದು ಅವರು ತಿಳಿಸಿದರು.

ಈ ಪ್ರತಿಭಟನೆಯಲ್ಲಿ ರಾಜ್ಯ ಸರ್ಕಾರದ ಅರಣ್ಯ ಸಚಿವರಾದ ರಾಮಲಿಂಗಾ ರೆಡ್ಡಿ ಅವರು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಮನೋಹರ್, ಪ್ರಕಾಶ್, ಸುಧಾಕರ್, ಆನಂದ್, ಕುಶಾಲ್, ಮಾಧವ, ನವೀನ್, ಉಮೇಶ್, ಲಕ್ಷ್ಮೀನಾರಾಯಣ, ಪುಟ್ಟರಾಜು ಭಾಗವಹಿಸಿದ್ದರು.

# ಪ್ರತಿ ರೈತ ಕುಟುಂಬಕ್ಕೆ 25 ಸಾವಿರ ನೆರವು ನೀಡಲು ಶರವಣ ಆಗ್ರಹ



ಬೆಂಗಳೂರು, ಸೆ. 26: ರಾಜ್ಯದ ಹಲವು ಭಾಗಗಳಲ್ಲಿ ಬರಗಾಲದ ಪರಿಸ್ಥಿತಿ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ರೈತ ಕುಟುಂಬಗಳಿಗೆ ರಾಜ್ಯ ಸರ್ಕಾರ ತಕ್ಷಣ ವಿಶೇಷ ಆರ್ಥಿಕ ನೆರವು ನೀಡಬೇಕು ಎಂದು ಶಾಸಕರು ಕರ್ನಾಟಕ ವಿಧಾನ ಪರಿಷತ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕರಾದ ಟಿ.ಎ. ಶರವಣ ಅವರು ಒತ್ತಾಯಿಸಿದರು.

ಮಾಧ್ಯಮ ಮಿತ್ರರನ್ನು ಉದ್ದೇಶಿಸಿ ಮಾತನಾಡಿದ ಅವರು, ಬರಗಾಲದ ಹಿನ್ನೆಲೆಯಲ್ಲಿ ರೈತರಿಗೆ ಸರ್ಕಾರ ನೀಡುತ್ತಿರುವ ?2,500 ನೆರವು ಮೊತ್ತವು ಪ್ರಸ್ತುತ ಪರಿಸ್ಥಿತಿಯಲ್ಲಿ ಸಮರ್ಪಕವಾಗಿಲ್ಲ. ಈ ಮೊತ್ತದಲ್ಲಿ ಕೆಟ್ಟು ನಿಂತಿರುವ ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಿಸುವುದಕ್ಕೂ ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಬರಗಾಲದಿಂದಾಗಿ ರೈತರ ಬೆಳೆಗಳಿಗೆ ನೀರಿನ ಕೊರತೆ ಎದುರಾಗಿದ್ದು, ಅನೇಕ ಕಡೆಗಳಲ್ಲಿ ಬೋರ್‌ವೆಲ್‌ಗಳು ಹಾಗೂ ನೀರಾವರಿ ವ್ಯವಸ್ಥೆಗಳು ದುರಸ್ತಿಯ ಅಗತ್ಯವಿದೆ. ಬೋರ್‌ವೆಲ್ ದುರಸ್ತಿಗೆ ಮೋಟಾರ್, ಪೈಪ್‌ಗಳು, ಕೇಬಲ್‌ಗಳು ಸೇರಿದಂತೆ ವಿವಿಧ ಉಪಕರಣಗಳ ವೆಚ್ಚವೂ ಹೆಚ್ಚಾಗಿರುವುದರಿಂದ ಸಣ್ಣ ಮತ್ತು ಮಧ್ಯಮ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅವರು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಬರಗಾಲದಿಂದ ಸಂಕಷ್ಟಕ್ಕೊಳಗಾಗಿರುವ ಪ್ರತಿ ರೈತ ಕುಟುಂಬಕ್ಕೆ ಕನಿಷ್ಠ –25,000 ವಿಶೇಷ ನೆರವನ್ನು ರಾಜ್ಯ ಸರ್ಕಾರ ನೀಡಬೇಕು. ಈ ನೆರವನ್ನು ಕೇವಲ ಪರಿಹಾರಧನವಾಗಿ ಪರಿಗಣಿಸದೆ, ರೈತರ ನೀರಿನ ಮೂಲಗಳನ್ನು ಪುನಶ್ಚೇತನಗೊಳಿಸಿ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲು ನೆರವಾಗುವ ರೀತಿಯಲ್ಲಿ ಒದಗಿಸಬೇಕು ಎಂದು ಅವರು ಆಗ್ರಹಿಸಿದರು.

ರೈತರು ಕೃಷಿಯನ್ನೇ ಜೀವನಾಧಾರವಾಗಿಸಿಕೊಂಡಿದ್ದು, ನೀರಿನ ಕೊರತೆ ಹಾಗೂ ಬೆಳೆ ನಷ್ಟದಿಂದ ಅವರ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಮತ್ತಷ್ಟು ದುರ್ಬಲವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರವು ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಅಗತ್ಯವಿರುವಷ್ಟು ಆರ್ಥಿಕ ನೆರವನ್ನು ತುರ್ತಾಗಿ ಬಿಡುಗಡೆ ಮಾಡಬೇಕಾಗಿದೆ ಎಂದು ಶರವಣ ಅವರು ಹೇಳಿದರು.

ಬರಗಾಲದ ಪರಿಣಾಮವನ್ನು ಎದುರಿಸುತ್ತಿರುವ ರೈತರ ಹಿತದೃಷ್ಟಿಯಿಂದ ಸರ್ಕಾರವು ತಕ್ಷಣವೇ ವಿಶೇಷ ಪ್ಯಾಕೇಜ್ ಘೋಷಿಸಿ, ನೀರಿನ ಮೂಲಗಳ ಪುನಶ್ಚೇತನ ಹಾಗೂ ಕೃಷಿ ಚಟುವಟಿಕೆಗಳಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಅವರು ಆಗ್ರಹಿಸಿದರು.

# ದುಷ್ಟಶಕ್ತಿಗಳಿಂದ ಕಸಾಪ ಘನತೆ ಹಾಳು: ಪ್ರೊ. ಸಿದ್ದರಾಮಯ್ಯ

ಬೆಂಗಳೂರು.ಸೆ.26– ನೂರ ಹನ್ನೆರಡು ವರ್ಷಗಳ ಇತಿಹಾಸ ಇರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಈಚಿನ ಹತ್ತು ವರ್ಷಗಳಲ್ಲಿ ಬಂದು ಕೂತ ದುಷ್ಟಶಕ್ತಿಗಳಿಂದ ಅದರ ಘನತೆ ಗೌರವ ಹಾಳಾಯಿತು. ಹಿಂದಿನ ಅಧ್ಯಕ್ಷರು ಮಾಡಿದ್ದ ಭ್ರಷ್ಟಾಚಾರದ ವಿರುದ್ಧ ಒಂದೂವರೆ ವರ್ಷದಿಂದ ಹೋರಾಡಿ ಗೆಲುವು ಸಾಧಿಸಿದ್ದೇವೆ ಎಂದು ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ಬಸವೇಶ್ವರ ನಗರದಲ್ಲಿ ಕಸಾಪ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಸಾಹಿತಿ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಪರ ಸೇರಿದ್ದ ಕಸಾಪ ಆಜೀವ ಸದಸ್ಯರ, ಕನ್ನಡಪರ ಚಿಂತಕರ ಸಮಾಲೋಚನಾ ಸಭೆಯಲ್ಲಿ ಅವರು ಮಾತಾಡಿದರು.




ಕನ್ನಡ ಕನ್ನಡಿಗ ಕರ್ನಾಟಕದ ಅಸ್ಮಿತೆ ಉಳಿಸಲು, ಕನ್ನಡ ಸಾಹಿತ್ಯ ಸಾಹಿತ್ಯ ಪರಿಷತ್ತಿಗೆ ಬಂದಿರುವ ಕಂಠಕ ದೂರ ಮಾಡಲು ಮುಂಬರುವ ಕಸಾಪ ಚುನಾವಣೆಯಲ್ಲಿ ಸಾಹಿತಿಗಳು, ಹೋರಾಟಗಾರರೆ ಅದರ ಚುಕ್ಕಾಣಿ ಹಿಡಿಯಬೇಕಾದ ಅನಿವಾರ್ಯತೆ ಇದೆ. ನಮ್ಮ ಸಮಾನ ಮನಸ್ಕರ ವೇದಿಕೆಯಿಂದ ಒಕ್ಕೊರಳಿನ ಅಭ್ಯರ್ಥಿಯಾಗಿ ಹೋರಾಟಗಾರ, ಪ್ರಾಮಾಣಿಕ ಜಾಣಗೆರೆ ಅವರನ್ನು ಅಭ್ಯರ್ಥಿಯಾಗಿ ನಿಲ್ಲಿಸುತ್ತಿದ್ದೇವೆ. ನಾಡಿನಾದ್ಯಂತ ಅವರಿಗೆ ಅಪಾರ ಬೆಂಬಲ ವ್ಯಕ್ತ ಆಗುತ್ತಿದೆ. ಅವರನ್ನು ಗೆಲ್ಲಿಸಿ ಎಂದು ಕರೆ ನೀಡಿದರು.

ಕಸಾಪಗೆ ಈಚಿನ ವರ್ಷಗಳಲ್ಲಿ ಭ್ರಷ್ಟತೆಯ ಕೊಳೆ ಅಂಟಿದೆ. ಅದನ್ನು ಸಾಹಿತಿಗಳು, ಹೋರಾಟಗಾರರು ತೊಳೆಯಬೇಕು. ಈ ಕೊಳೆ ತೊಳೆಯಲು ಹೋರಾಡಿದ ಮಿತ್ರರಲ್ಲಿ ಜಾಣಗೆರೆ ಪ್ರಮುಖರು. ಅವರು ಕಸಾದ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿಯಬೇಕು. ಇದು ಕನ್ನಡಿಗರೆಲ್ಲರ ಆಸೆ ಎಂದು ಡಾ. ರಾಜಕುಮಾರ ಅಭಿಮಾನಿಗಳ ಸಂಘದ ಅಧ್ಯಕ್ಷ, ಚಿತ್ರ ನಿರ್ಮಾಪಕ ಸಾ.ರಾ. ಗೋವಿಂದು ಅಭಿಪ್ರಾಯಪಟ್ಟರು.

ಸಭೆಯನ್ನುದ್ದೇಶಿಸಿ ಮಾತಾಡಿದ ವೃದ್ಧ, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ|| ವಸುಂಧರಾ ಭೂಪತಿಯವರು, ಜಾಣಗೆರೆಯವರು ಅಧ್ಯಕ್ಷರಾಗಿ ಆಯ್ಕೆಯಾದರೆ ಬೈಲಾತಿದ್ದುಪಡಿ ಮಾಡಿ, ಈಗಿರುವ ಅಧ್ಯಕ್ಷರ ಅವಧಿಯನ್ನು ಮೂರು ವರ್ಷಕ್ಕೆ ಇಳಿಸಬೇಕು. ಮಹಿಳೆಯರು ಅಧ್ಯಕ್ಷರಾಗಲು ನಿಯಮಗಳಿಗೆ ತಿದ್ದುಪಡಿ ತರಬೇಕು ಎಂದು ಹೇಳಿದರು.

ಕಸಾಪ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಜಾಣಗೆರೆ ವೆಂಕಟರಾಮಯ್ಯ, ಆರ್.ಜಿ. ಹಳ್ಳಿ ನಾಗರಾಜ, ಸೂಡಾ ಶ್ರೀನಿವಾಸ್, ಎಂ.ಎ. ಆನಂದ್, ಸಿ.ಕೆ. ರಾಮೇಗೌಡ, ಜಿ. ತಿಪ್ಪೇಸ್ವಾಮಿ, ಆರ್. ವೆಂಕಟರಾಜ್ ಮಾತಾಡಿದರು.



ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಘಟಕ–16 ದೀಪಾಂಜಲಿ ನಗರದಲ್ಲಿ ನಡೆದ ಗಣಪತಿ ಉತ್ಸವ ಕಾರ್ಯಕ್ರಮದಲ್ಲಿ ಡಿಟಿಓ ಮಧುಸೂದನ್ ರೆಡ್ಡಿ, ಡಿಎಂಈ ನಾಗಪ್ರಸನ್ನ, ಘಟಕದ ವ್ಯವಸ್ಥಾಪಕ ಹನುಮಯ್ಯ, ಸಮಿತಿಯ ಸದಸ್ಯರುಗಳಾದ ಚುಂಚಯ್ಯ, ಕೃಷ್ಣಕುಮಾರ್, ಸೋಮಶೇಖರ್, ಉಮೇಶ್ ಕರ್ಜಗಿ, ಗುರುಮೂರ್ತಿ, ನಾರಾಯಣ್, ಪ್ರಮೀಳಾ, ಸರಸ್ವತಿ, ಚಂದ್ರಮ್ಮ, ಭಾಗ್ಯಮ್ಮ ಭಾಗವಹಿಸಿದ್ದರು.

# ಪ್ರತಾಪ್ ಸಿಂಹ ಗಡೀಪಾರಿಗೆ ಆಗ್ರಹಿಸಿ ಪ್ರತಿಭಟನೆ



ಕೆ.ಆರ್.ಪುರ, ಸೆ.26– ದಲಿತಪರ ಸಂಘಟನೆಗಳು ಹಾಗೂ ನಾಯಕರ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹೇಳಿಕೆ ಖಂಡನೀಯ ಪ್ರತಾಪ್ ಸಿಂಹ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ರಾಜ್ಯದಿಂದ ಗಡಿಪಾರು ಮಾಡುವಂತೆ ಒತ್ತಾಯಿಸಿ ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಭೀಮ ಸಂಘನೆಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ಆಗ್ರಹಿಸಿದರು.

ಮಹದೇವಪುರ ಕ್ಷೇತ್ರದ ಕಾಡುಗುಡಿಯಲ್ಲಿ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮತನಾಡಿದರು.

ಕೋಮು ದ್ವೇಷದ ಭಾಷಣಕ್ಕೆ ಕಾನೂನು ತಂದ ರೀತಿಯಲ್ಲಿ ಬಾಬಾ ಸಾಹೇಬರ ಮತ್ತು ನೀಲಿ ಶಾಲು ಬಗ್ಗೆ ಮಾತನಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕಾನೂನು ತರಬೇಕೆಂದು ಒತ್ತಾಯಿಸಿದರು.

ದಲಿತ ಹೋರಾಟಗಾರರ ಬಗ್ಗೆ ಕೇವಲವಾಗಿ ಮಾತನಾಡಿರುವುದರ ಬಗ್ಗೆ ಅವರೆ ಆತ್ಮ ಅವಲೋಕನಾ ಮಾಡಿಕೊಳ್ಳಬೇಕು. ರಾಜ್ಯದ ಪ್ರತಿ ಗ್ರಾಮಕ್ಕೆ ಪ್ರತಿ ಸಮುದಾಯಕ್ಕೆ ಬಾಬಾ ಸಾಹೇಬರು ನೀಲಿ ಬಣ್ಣದ ಮಹತ್ವ ತಿಳಿಸಿದ್ದು, ದಲಿತ ಚಳುವಳಿಗಾರರು ಎಂಬುದನ್ನು ಯಾರು ಮರೆಯಬಾರದು ಎಂದು ಕರ್ನಾಟಕ ದಲಿತ ಕ್ರೀಯ ವೇದಿಕೆ ರಾಜ್ಯಾಧ್ಯಕ್ಷರು, ಕಾಡುಗೋಡಿ ಸೊಣ್ಣಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟ–ದ ರಾಜ್ಯಾಧ್ಯಕ್ಷ ಕೆ.ಮರಿಯಪ್ಪ, ಮುನಿಆಂಜಿನಪ್ಪ, ಮುನಿಮಾರಪ್ಪ, ಮಲ್ಲೇಶ್, ಬೆಳತೂರು ವೆಂಕಟೇಶ್, ಮುರುಗನ್, ಗಂಗಣ್ಣ, ಕರ್ನಾಟಕ ಅಹಿಂದ ವೇಧಿಕೆ ಮಹಿಳಾ ರಾಜ್ಯಾಧ್ಯಕ್ಷ ಶೋಭ, ಮೀನಾಕ್ಷಿ ಭಾಗಿಯಾಗಿದ್ದರು.

# ಮಕ್ಕಳ ಸುರಕ್ಷತೆಗೆ ಸಂಚಕಾರ: ಎನ್‌ಸಿಆರ್‌ಬಿ ವರದಿಯಲ್ಲಿ ಅಂಕಿಅಂಶ ಬಹಿರಂಗ

ನವದೆಹಲಿ, ಸೆ.26– ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಬಿಡುಗಡೆ ಮಾಡಿರುವ 2024 ರ ವಾರ್ಷಿಕ ವರದಿಯು ದೇಶದಲ್ಲಿ ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಮತ್ತು ಅಪರಾಧಗಳ ಕರಾಳ ಮುಖವನ್ನು ಅನಾವರಣಗೊಳಿಸಿದೆ. ಈ ವರದಿಯ ಪ್ರಕಾರ 2024 ರಲ್ಲಿ ಮಕ್ಕಳ ವಿರುದ್ಧ ಒಟ್ಟು 1.87 ಲಕ್ಷ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದು ಕಳೆದ 2023 ನೇ ವರ್ಷಕ್ಕೆ ಹೋಲಿಸಿದರೆ ಸರಿಸುಮಾರು ಶೇಕಡಾ 6 ರಷ್ಟು ಹೆಚ್ಚಳವನ್ನು ತೋರಿಸುತ್ತದೆ. ಈ ಒಟ್ಟು ಅಪರಾಧಗಳಲ್ಲಿ ಕೇವಲ ಪೋಕ್ಸೋ ಕಾಯ್ದೆಯಡಿಯಲ್ಲೇ 69,191 ಪ್ರಕರಣಗಳು ದಾಖಲಾಗಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ಅಂದರೆ ಮಕ್ಕಳ ಮೇಲಿನ ಒಟ್ಟು ಅಪರಾಧಗಳಲ್ಲಿ ಶೇಕಡಾ 37 ರಷ್ಟು ಪಾಲು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪೋಕ್ಸೋ ಪ್ರಕರಣಗಳದ್ದೇ ಆಗಿದೆ. ಈ ಪ್ರಕರಣಗಳಲ್ಲಿ ಒಟ್ಟು 70,132 ಮಕ್ಕಳು ಬಲಿಪಶುಗಳಾಗಿದ್ದಾರೆ



ಮಾಜಿ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್‌ರವರ ಹುಟ್ಟುಹಬ್ಬದ ಪ್ರಯುಕ್ತ ಸಿಂಗ್‌ರವರ ಭಾವಚಿತ್ರಕ್ಕೆ ರಾಷ್ಟ್ರೀಯ ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿರವರು ನಮನ ಸಲ್ಲಿಸಿದರು.

# ಕುಮಾರಿ ಅಗ್ರತಾ ಕೆ. ಕಾಶಿದ್ ಅವರ ಭರತನಾಟ್ಯ ನಾಳೆ ರಂಗಪ್ರವೇಶ

ಬೆಂಗಳೂರು, ಸೆ. 26: ಸಾಂಸ್ಕೃತಿಕ ನಗರಿ ಬೆಂಗಳೂರಿನಲ್ಲಿ ಮತ್ತೊಂದು ಮನಮೋಹಕ ನೃತ್ಯಕಲಾ ಪ್ರದರ್ಶನಕ್ಕೆ ವೇದಿಕೆ ಸಿದ್ಧಗೊಂಡಿದೆ. ಪೂನಂ ಎಸ್ ಮತ್ತು ಕಿರಣ್ ಎಂ.ಕೆ. ಅವರ ಮಗಳಾದ ಕುಮಾರಿ ಅಗ್ರತಾ ಕೆ. ಕಾಶಿದ್ ಅವರ 'ಭರತನಾಟ್ಯ ರಂಗಪ್ರವೇಶ' ಕಾರ್ಯಕ್ರಮವನ್ನು 'ಭರತಾಂಜಲಿ ನಾಟ್ಯ ಶಾಲೆ' ಯ ಆಶ್ರಯದಲ್ಲಿ ಏರ್ಪಡಿಸಲಾಗಿದೆ.

ಈ ಸಾಂಸ್ಕೃತಿಕ ನೃತ್ಯ ವೈಭವವು, ನಾಳೆ ಬೆಳಿಗ್ಗೆ 10:15 ಕ್ಕೆ ಚೌಡಯ್ಯ ಸ್ಮಾರಕ ಭವನದ ಹಿಂಭಾಗದಲ್ಲಿರುವ 'ತೆಲುಗು ವಿಜ್ಞಾನ ಸಮಿತಿ' ಸಭಾಂಗಣದಲ್ಲಿ ನಡೆಯಲಿದೆ.

ಗುರು ಸೀತಾ ಗುರುಪ್ರಸಾದ್ ಅವರ ಮಾರ್ಗದರ್ಶನ ಹಾಗೂ ವಿದುಷಿ ಕುಮಾರಿ ಭುವನಾ ಜಿ. ಪ್ರಸಾದ್ ಅವರ ಶಿಕ್ಷಣದಲ್ಲಿ ಪಾರಂಗತರಾಗಿರುವ ಯುವ ನೃತ್ಯಪಟು ಕುಮಾರಿ ಅಗ್ರತಾ ಕೆ. ಕಾಶಿದ್ ಅವರು ತಮ್ಮ ರಂಗಪ್ರವೇಶದ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಲು ಸಜ್ಜಾಗಿದ್ದಾರೆ.

ಈ ಕಲಾತ್ಮಕ ಸಮಾರಂಭಕ್ಕೆ 'ಭಾರತ ಕಲಾ ಗ್ರಾಮ ನಾಟ್ಯ ಗುರುಕುಲಂ'ನ ಅಧ್ಯಕ್ಷರು ಹಾಗೂ 'ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ'ಯ ಸದಸ್ಯರಾಗಿರುವ ಡಾ. ವಸಂತ್ ಕಿರಣ್ ಅವರು ಮುಖ್ಯ ಅತಿಥಿಗಳಾಗಿ



ಆಗಮಿಸಿ ನೃತ್ಯ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ವಿದ್ವಾನ್ ಡಿ.ಎಸ್. ಶ್ರೀವತ್ಸ ಅವರ ಹಾಡುಗಾರಿಕೆ (ವೋಕಲ್), ವಿದುಷಿ ಭುವನಾ ಜಿ. ಪ್ರಸಾದ್ ಅವರ ನಟ್ಟುವಾಂಗ, ವಿದ್ವಾನ್ ಶ್ರೀಹರಿ ರಂಗಸ್ವಾಮಿ ಅವರ ಮೃದಂಗ, ವಿದ್ವಾನ್ ಮಹೇಶ ಸ್ವಾಮಿ ಅವರ ಕೊಳಲು (ಫ್ಲೂಟ್), ವಿದ್ವಾನ್ ಪ್ರದೇಶ್ ಆಚಾರ್ ಅವರ ಪಿಟೀಲು (ವಯಲಿನ್), ವಿದ್ವಾನ್ ಕಾರ್ತಿಕ್ ದಾತಾರ್ ಅವರ ರಿದಮ್ ಪ್ಯಾಡ್ಸ್, ಅಲ್ಲದೆ, ಸುಗ್ಗನಹಳ್ಳಿ ಶಡಕ್ಷರಿ ಅವರ ನಿರೂಪಣೆ, ಕಲಾಯೋಗಿ ಸತೀಶ್ ಬಾಬು ಅವರ ರಂಗಾಲಂಕಾರ/ಪ್ರಸಾದನ ಹಾಗೂ ಭರತಾಂಜಲಿ ಕಾಸ್ಟ್ಯೂಮ್ಸ್ ಅವರ ವಸ್ತ್ರಾಲಂಕಾರ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿರಲಿದ್ದು, ಪ್ರಖ್ಯಾತ ಸಂಗೀತ ವಿದ್ವಾಂಸರ ತಂಡವೇ ಸಾಥ್ ನೀಡಲಿದೆ.

ಈ ಅಪರೂಪದ ಕಲಾ ವೈಭವಕ್ಕೆ ಕಲಾಪ್ರೇಮಿಗಳು, ಬಂಧು–ಮಿತ್ರರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನೃತ್ಯಪಟುವನ್ನು ಹಾರೈಸಬೇಕಾಗಿ ಭರತಾಂಜಲಿ ನಾಟ್ಯ ಶಾಲೆಯ ಸಂಘಟಕರು ಪ್ರಕಟಣೆಯಲ್ಲಿ ಕೋರಿದ್ದಾರೆ.



ರೇವಾ ವಿಶ್ವ ವಿದ್ಯಾನಿಲಯದಲ್ಲಿ ಯಲಹಂಕ ದಿನಾಂಕ 23/09/2026 ರಂದು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಯನ್ನು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು ಡಾ. ಆನಂದ್ ಕಾರ್ಯಕ್ರಮದ ಕುರಿತು ಉಪನ್ಯಾಸ ನೀಡಿದರು ನಂತರ ವಿಶ್ವ ಆತ್ಮಹತ್ಯೆ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಡಾ.ಪ್ರಭು ಎಲ್ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಕಾಲೇಜು ಉಪನ್ಯಾಸಕರಿಗೆ ಸಿಬ್ಬಂದಿಗಳಿಗೆ ಬೋಧಿಸಿದರು ನಂತರ ಕಾರ್ಯಕ್ರಮದ ಕುರಿತು ಪ್ರೊಫೆಸರ್ ರಾಜೇಂದ್ರ ಶೆಟ್ಟಿ ಮಾಹಿತಿ ಹಾಗೂ ಕಾರ್ಯಕ್ರಮದ ಕುರಿತು ಕಿರು ನುಡಿ ನೀಡಿದರು ಆಡಿ ಆನಂದ್ ಮನಶಾಸ್ತ್ರಜ್ಞರು ವಂದನೆಗಳನ್ನು ತಿಳಿಸಿ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು ಕಾರ್ಯಕ್ರಮ ದಲ್ಲಿ 300 ವಿದ್ಯಾರ್ಥಿಗಳು ಬಾಗವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಲಾಯಿತು.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ದಿ ಸಂಡೂರ್ ಮ್ಯಾಂಗನೀಸ್ & ಐರನ್ ಓರ್ಸ್ ಲಿಮಿಟೆಡ್**
**ನೋಂದಾಯಿತ ಕಚೇರಿ: 'ಸತ್ಯಾಲಯ', ಡೋರ್ ನಂ. 266 (ಹಳೆ ನಂ.80), ವಾರ್ಡ್ ನಂ.1, ತಾಲೂಕು ಕಚೇರಿ ಹಿಂದೆ, ಸಂಡೂರು - 583 119, ಬಳ್ಳಾರಿ ಜಿಲ್ಲೆ, ಕರ್ನಾಟಕ**
**CIN: L85110KA1954PLC000759; ಜಾಲತಾಣ: www.sandurgroup.com**
**ಇಮೇಲ್ ಐಡಿ: secretarial@sandurgroup.com ದೂರವಾಣಿ: 08395260300**

**ಸೂಚನೆ**
(ಕಂಪನಿಯ ಈಕ್ವಿಟಿ ಷೇರುದಾರರ ಗಮನಕ್ಕೆ)

**ವಿಷಯ: ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾವಣೆಯ ಬಗ್ಗೆ**

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಐಇಪಿಎಫ್ಎ) (ಲೆಕ್ಕಪತ್ರ ನಿರ್ವಹಣೆ, ಲೆಕ್ಕಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳೊಂದಿಗೆ ಓದಿದ ಕಂಪನಿಗಳ ಕಾಯಿದೆ, 2013 (ಕಾಯಿದೆ) ವಿಭಾಗ 124 ರ ಉಪ-ವಿಭಾಗ (6) ರ ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಐಇಪಿಎಫ್ಎ) (ಲೆಕ್ಕಪತ್ರ ನಿರ್ವಹಣೆ, ಲೆಕ್ಕಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು, 2016 (ನಿಯಮಗಳು) ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಈ ಸೂಚನೆಯನ್ನು ಪ್ರಕಟಿಸಲಾಗಿದೆ. ನಿಯಮಗಳು, ಇತರ ವಿಷಯಗಳ ಜೊತೆಗೆ, ಐಇಪಿಎಫ್ಎ ಯ ಡಿಮ್ಯಾಟ್ ಖಾತೆಗೆ ಸತತ ಏಳು ವರ್ಷಗಳವರೆಗೆ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಲಾಭಾಂಶವನ್ನು ಪಾವತಿಸದೆ/ ಕ್ಲೈಮ್ ಮಾಡದೆ ಉಳಿದಿರುವ ಎಲ್ಲಾ ಷೇರುಗಳ ಕ್ರೆಡಿಟ್‌ಗಾಗಿ ನಿಬಂಧನೆಗಳನ್ನು ಒಳಗೊಂಡಿರುತ್ತದೆ.

ಕಾಯಿದೆ ಮತ್ತು ನಿಯಮಗಳಲ್ಲಿ ನಿಗದಿಪಡಿಸಿದ ಅಗತ್ಯತೆಗಳಿಗೆ ಅನುಗುಣವಾಗಿ, ಸೂಕ್ತ ಕ್ರಮ ಕೈಗೊಳ್ಳಲು ಇತ್ತೀಚಿನ ಲಭ್ಯವಿರುವ ವಿಳಾಸದಲ್ಲಿ ಐಇಪಿಎಫ್ಎ ಯ ಡಿಮ್ಯಾಟ್ ಖಾತೆಗೆ ಜಮಾ ಮಾಡಬೇಕಾದ ಷೇರುಗಳನ್ನು ಸಂಬಂಧಪಟ್ಟ ಷೇರುದಾರರಿಗೆ ಕಂಪನಿಯು ಪ್ರತ್ಯೇಕವಾಗಿ ಸಂವಹನ ಮಾಡಿದೆ. ಕಂಪನಿಯು ಅಂತಹ ಷೇರುದಾರರ ಹೆಸರುಗಳು, ಅವರ ಫೋಲಿಯೊ ಸಂಖ್ಯೆ ಅಥವಾ ಡಿಪಿಐಡಿ ಕ್ಲೈಂಟ್ ಐಡಿ ಜೊತೆಗೆ ಐಇಪಿಎಫ್ಎಗೆ ವರ್ಗಾವಣೆಯಾಗಬೇಕಾದ ಷೇರುಗಳೊಂದಿಗೆ ಕಂಪನಿಯ ವೆಬ್‌ಸೈಟ್ www.sandurgroup.com ನಲ್ಲಿ ಅಪ್‌ಲೋಡ್ ಮಾಡಿದೆ.

2019-20ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಷೇರುಗಳು ಮತ್ತು ಪಾವತಿಸದ/ ಕ್ಲೈಮ್ ಮಾಡದ ಲಾಭಾಂಶ ಮೊತ್ತವನ್ನು ಕ್ಲೈಮ್ ಮಾಡಲು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA) ಗೆ ತಿಳಿಸಲಾದ ಸಂವಹನದಲ್ಲಿ ಅಗತ್ಯ ದಾಖಲೆಗಳನ್ನು **10 ಡಿಸೆಂಬರ್ 2026** ರೊಳಗೆ ರವಾನಿಸಲು ಸಂಬಂಧಪಟ್ಟ ಷೇರುದಾರರನ್ನು ವಿನಂತಿಸಲಾಗಿದೆ. ಷೇರುದಾರರಿಂದ ಮಾನ್ಯವಾದ ಕ್ಲೈಮ್‌ನ ರಶೀದಿಯ ಅನುಪಸ್ಥಿತಿಯಲ್ಲಿ, ಕಂಪನಿಯು ಐಇಪಿಎಫ್ಎಯ ಡಿಮ್ಯಾಟ್ ಖಾತೆಗೆ ಅಂತಹ ಷೇರುಗಳನ್ನು ಹೆಚ್ಚಿನ ಸೂಚನೆ ಇಲ್ಲದೆ ಐಇಪಿಎಫ್‌ಗೆ ಮೂವತ್ತು ದಿನಗಳ ಅವಧಿಯಲ್ಲಿ ವರ್ಗಾಯಿಸುತ್ತದೆ. ಐಇಪಿಎಫ್ಎಗೆ ಅಂತಹ ಷೇರುಗಳ ವರ್ಗಾವಣೆಯ ನಂತರ, ಭವಿಷ್ಯದ ಲಾಭಾಂಶಗಳನ್ನು ಒಳಗೊಂಡಂತೆ ಅದರ ಅಡಿಯಲ್ಲಿ ಸೇರಬಹುದಾದ ಎಲ್ಲಾ ಭವಿಷ್ಯದ ಪ್ರಯೋಜನಗಳನ್ನು ಐಇಪಿಎಫ್ಎಗೆ ಜಮಾ ಮಾಡಲಾಗುತ್ತದೆ.

**ಐಇಪಿಎಫ್ಎಗೆ ವರ್ಗಾಯಿಸಲಾದ ಷೇರುಗಳು, ಪಾವತಿಸದ/ ಕ್ಲೈಮ್ ಮಾಡದ ಲಾಭಾಂಶಗಳು ಮತ್ತು ಭವಿಷ್ಯದ ಲಾಭಾಂಶಗಳಿಗೆ ಸಂಬಂಧಿಸಿದಂತೆ ಕಂಪನಿಯ ವಿರುದ್ಧ ಯಾವುದೇ ಕ್ಲೈಮ್ ಇರುವುದಿಲ್ಲ ಎಂಬುದನ್ನು ಗಮನಿಸಬಹುದು.** ಷೇರುಗಳು ಅಥವಾ ಪಾವತಿಸದ/ಕ್ಲೈಮ್ ಮಾಡದ ಡಿವಿಡೆಂಡ್ ಅನ್ನು ಫಂಡ್‌ಗೆ ವರ್ಗಾಯಿಸಿದ ಷೇರುದಾರರು, ನಿಯಮ 7 ರೊಂದಿಗೆ ಓದಿದ ವಿಭಾಗ 124 ರ ಉಪ-ವಿಭಾಗ (6) ರ ನಿಬಂಧನೆಯ ಅಡಿಯಲ್ಲಿ ಷೇರುಗಳನ್ನು ನಿಯಮಗಳ ಅಡಿಯಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ಕ್ಲೈಮ್ ಮಾಡಬಹುದು, ಅದರ ನಂತರ ಐಇಪಿಎಫ್ಎಗೆ ಅರ್ಜಿ ಸಲ್ಲಿಸಬಹುದು.

ಷೇರುದಾರರು ತಮ್ಮ KYC ವಿವರಗಳು/ಬ್ಯಾಂಕ್ ವಿವರಗಳನ್ನು ಕಂಪನಿ/ RTA ಯೊಂದಿಗೆ RTA ವೆಬ್‌ಸೈಟ್ www.vccipl.com/ ಕಂಪನಿಯ ವೆಬ್‌ಸೈಟ್ www.sandurgroup.com/others (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದರೆ) ಫಾರ್ಮ್ ISR-1 ನಲ್ಲಿ ನೋಂದಾಯಿಸಲು ಸಲಹೆ ನೀಡಲಾಗುತ್ತದೆ. ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ನೊಂದಿಗೆ (ಷೇರುಗಳನ್ನು ಡಿಮ್ಯಾಟ್ ಮೋಡ್‌ನಲ್ಲಿ ಹಿಡಿದಿದ್ದರೆ) ಮತ್ತು ಭೌತಿಕ ಷೇರುಗಳಿಗೆ ಸಂಬಂಧಿಸಿದ ಅಪಾಯಗಳನ್ನು ತೊಡೆದುಹಾಕಲು ಮತ್ತು ಭೌತಿಕ ಮೋಡ್‌ನಲ್ಲಿ ಷೇರುಗಳ ವರ್ಗಾವಣೆಯಾಗಿ ಹಿಡುವಳಿಯ ಸುಲಭಕ್ಕಾಗಿ ತಮ್ಮ ಭೌತಿಕ ಹಿಡುವಳಿಯನ್ನು ಡಿಮೆಟೀರಿಯಲೈಸ್ಡ್ ರೂಪಕ್ಕೆ ಪರಿವರ್ತಿಸುವುದನ್ನು ಪರಿಗಣಿಸಲು ಇನ್ನು ಮುಂದೆ ಅನ್ವಯಿಸುವುದಿಲ್ಲ. ಈ ನಿಟ್ಟಿನಲ್ಲಿ ಸದಸ್ಯರು ಕಂಪನಿ ಅಥವಾ ಕಂಪನಿಯ RTA ಗೆ ಬರೆಯಬಹುದು.

ಷೇರುದಾರರು ವಿಷಯ ಮತ್ತು ನಿಯಮಗಳ ಕುರಿತು ಯಾವುದೇ ಪ್ರಶ್ನೆಗಳನ್ನು ಹೊಂದಿದ್ದರೆ, ಅವರು ಸಂಡೂರ್ ಮ್ಯಾಂಗನೀಸ್ ಮತ್ತು ಐರನ್ ಓರ್ಸ್ ಲಿಮಿಟೆಡ್, 'ಸಂಡೂರ್ ಹೌಸ್', ನಂ.9, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು - 560080, ಕರ್ನಾಟಕ, ಭಾರತ, ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಬಹುದು. ದೂರವಾಣಿ: 080 41520176 - 79, ಇಮೇಲ್ ಐಡಿ: investors@sandurgroup.com/ secretarial@sandurgroup.com ಅಥವಾ ವೆಂಚರ್ ಕ್ಯಾಪಿಟಲ್ ಮತ್ತು ಕಾರ್ಪೊರೇಟ್ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್, ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ "ಔರಂ", ಪ್ಲಾಟ್ ನಂ.57, 4ನೇ ಮತ್ತು 5ನೇ ಮಹಡಿಗಳು, ಜಯಭೇರಿ ಎನ್‌ಕ್ಲೇವ್ ಹಂತ - II, ಗಚಿಬೌಲಿ, ಹೈದರಾಬಾದ್ - 500032, ತೆಲಂಗಾಣ, ದೂರವಾಣಿ: 040 23818475/ 23818476, ಇಮೇಲ್: investor.relations@vccipl.com.

ಫಾರ್ **ದಿ ಸಂಡೂರ್ ಮ್ಯಾಂಗನೀಸ್ & ಐರನ್ ಓರ್ಸ್ ಲಿಮಿಟೆಡ್**
Sd/-
ನೇಹಾ ಥಾಮಸ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: 25 ಸೆಪ್ಟೆಂಬರ್ 2026

# ದಸರಾ ಗಜಪಡೆಗೆ 3ನೇ ಹಂತದ ತಾಲೀಮು ಆರಂಭ



**ರೇಸ್‌ನಲ್ಲಿವೆ 5 ಆನೆಗಳು**

**ಗಜಪಡೆಗೆ ಇಂದಿನಿಂದ 3ನೇ ಹಂತದ ತಾಲೀಮು ಪ್ರಾರಂಭಿಸಿದ್ದು, ಮಹೇಂದ್ರನಿಗೆ ಮರದ ಅಂಬಾರಿ ಕಟ್ಟಲಾಗಿದೆ. ಮಳೆಯ ಕಾರಣಕ್ಕೆ ಅರ್ಧ-ಕ್ಕೆ ಮೊಟಕುಗೊಳಿಸಲಾಗಿದೆ. ಚಿನ್ನದ ಅಂಬಾರಿ ಹೊರುವ ರೇಸ್‌ನಲ್ಲಿ 5 ಆನೆಗಳಿದ್ದು, ಪ್ರಶಾಂತ, ಧನಂಜಯ, ಮಹೇಂದ್ರ, ಸುಗ್ರೀವ, ಏಕಲವ್ಯ ಆನೆಗಳಿಗೂ ಮರದ ಅಂಬಾರಿ ಹೊರಿಸಿ ತಾಲೀಮು ನಡೆಸುತ್ತೇವೆ. ಸದ್ಯಕ್ಕೆ ಎಲ್ಲಾ ಆನೆಗಳ ಆರೋಗ್ಯ ಚನ್ನಾಗಿದೆ. ಅಭಿಮನ್ಯುವನ್ನು ಅ.5ರಂದು ಮೈಸೂರಿಗೆ ಕರೆತರಲಾಗುವುದು ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದರು.**

ಮೈಸೂರು, ಸೆ.26: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2026 ರ ಗಜಪಡೆಗೆ ಮೂರನೇ ಹಂತದ ಮರದ ಅಂಬಾರಿ ತಾಲೀಮು ಆರಂಭವಾಗಿದೆ.

ಶುಕ್ರವಾರದಿಂದ ಆನೆಗಳಿಗೆ ಮರದ ಅಂಬಾರಿ ಹೊರಿಸಿ ತಾಲೀಮು ನೀಡಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ. ಮೊದಲ ದಿನ ಮಹೇಂದ್ರ ಆನೆಗೆ ಮರದ ಅಂಬಾರಿ ಕಟ್ಟಿ ತಾಲೀಮು ನೀಡಲು ಸಿದ್ಧತೆ ಮಾಡಲಾಗಿತ್ತು.

ಆದರೆ ಮರದ ಅಂಬಾರಿಯ ಕೆಳಭಾಗದ ಹಾಸಿಗೆ ಮತ್ತು ಹತ್ತಿಯ ಹಗ್ಗಗಳು ಒದ್ದೆಯಾಗಿ ಭಾರವಾಗಿರುವ ಕಾರಣ, ಆನೆಗೆ ಅಸೌಕರ್ಯ ಮತ್ತು ಬಿಗಿತ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಆನೆಯ ಆರಾಮ ಮತ್ತು ಸುರಕ್ಷತೆಯ ದೃಷ್ಟಿಯಿಂದ ಇಂದಿನ ಮರದ ಅಂಬಾರಿ ತಾಲೀಮನ್ನು ಮುಂದೂಡಲಾಗಿದೆ.

ತಾಲೀಮಿನ ಪರಿಷ್ಕೃತ ದಿನಾಂಕ ಮತ್ತು ವೇಳಾಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

ಮಧ್ಯಾಹ್ನ 2.45ರ ಸುಮಾರಿಗೆ ಮಹೇಂದ್ರ ಆನೆಯ ಬೆನ್ನಿಗೆ ಮರದ ಅಂಬಾರಿ ಇರಿಸಿ ಸುಮಾರು 20 ನಿಮಿಷಗಳ ಕಾಲ ಅಂಬಾರಿಯನ್ನು ಆನೆಯ ಬೆನ್ನಿಗೆ ಕಟ್ಟಲಾಯಿತು. ನಂತರ ತಾಲೀಮಿಗೆ ಅವಕಾಶ ಕಲ್ಪಿಸಲಾಯಿತು.

ವರುಣನ ಸಿಂಚನ: ಮಹೇಂದ್ರನಿಗೆ ಮರದ ಅಂಬಾರಿ ಕಟ್ಟಿ, ತಾಲೀಮಿಗೆ ಚಾಲನೆ ಸಿಗುತ್ತಿದ್ದಂತೆ ವರುಣನ ಸಿಂಚನವಾಯಿತು. ಮಹೇಂದ್ರ ಮತ್ತು ಎಲ್ಲಾ ಆನೆಗಳು ಅರಮನೆಯ ಬಲರಾಮ ದ್ವಾರಕ್ಕೆ ಬರುತ್ತಿದ್ದಂತೆ ಮಳೆ ಜೋರಾದ ಹಿನ್ನೆಲೆ ಎಲ್ಲಾ ಆನೆಗಳನ್ನು ಹಿಂದಕ್ಕೆ ಕರೆತಂದು ಮಹೇಂದ್ರನ ಮೇಲಿದ್ದ ಅಂಬಾರಿ ಬಿಚ್ಚಿಡಲಾಯಿತು. ಬಳಿಕ ಆಯುರ್ವೇದ ವೃತ್ತದವರೆಗೆ ಒಣ (ನಡಿಗೆ) ತಾಲೀಮು ನಡೆಸಲಾಯಿತು.

**1 ಸಾವಿರ ಕೆ.ಜಿ. ತೂಕ:** 250 ಕೆ.ಜಿ. ತೂಕವಿರುವ ಮರದ ಅಂಬಾರಿ, ಗಾದಿ ಮತ್ತು ನಮ್ದಾ 250 ಕೆ.ಜಿ ಹಾಗೂ 500 ಕೆ.ಜಿ ಮರಳಿನ ಮೂಟೆಗಳು ಸೇರಿ ಒಂದು ಸಾವಿರ ಕೆ.ಜಿ.



ಭಾರವನ್ನು ಹೊರವ ತಾಲೀಮು ಇದಾಗಿದ್ದು, ಮೊದಲ ದಿನ ಮಹೇಂದ್ರನಿಗೆ ಅವಕಾಶ ನೀಡಲಾಗಿತ್ತು. ಮಳೆಯಿಂದ ನಮ್ದಾ, ಗಾದಿ ಒದ್ದೆಯಾಗಿ ಭಾರ ಹೆಚ್ಚಾಗುವುದರಿಂದ ಆನೆಗಳಿಗೆ ತೊಂದರೆಯಾಗಬಾರದರು ಎಂಬ ಕಾರಣಕ್ಕೆ ತಾಲೀಮು ಮೊಟಕುಗೊಳಿಸಲಾಯಿತು. ಮತ್ತೊಂದು ದಿನ ತಾಲೀಮು ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭ ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ, ಆರ್ ಎಫ್‌ಒ ಯಶ್ಮಾ ಮಾಚಮ್ಮ ಸೇರಿದಂತೆ ಇತರರು ಇದ್ದರು.

**ಮಸ್ತ್‌ನಲ್ಲಿ ಧನಂಜಯ**

**ಅಭಿಮನ್ಯು ಆನೆ ನಿವೃತ್ತಿಯಿಂದ ತೆರವಾಗಿರುವ ಅಂಬಾರಿ ಆನೆಯ ಜಾಗಕ್ಕೆ ಪೈಪೋಟಿ ನೀಡುತ್ತಿರುವ ದುಬಾರೆ ಸಾಕಾನೆ ಶಿಬಿರದ ಧನಂಜಯ ಮರದ ಅಂಬಾರಿ ತಾಲೀಮಿನಿಂದ ದೂರ ಉಳಿದಿದ್ದ. ಧನಂಜಯನಿಗೆ ಮಸ್ತಿ (ಮದ) ಬಂದಿರುವ ಹಿನ್ನೆಲೆ ತಾಲೀಮಿನಿಂದ ಹೊರಗಿಡಲಾಗಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಧನಂಜಯನನ್ನು ಬಿಡಾರದಲ್ಲಿಯೇ ಪ್ರತ್ಯೇಕವಾಗಿರಿಸಿ ತಂಪಾದ ಆಹಾರ ನೀಡುವ ಮೂಲಕ ಅದರ ಆರೈಕೆಯಲ್ಲಿ ತೊಡಗಿದ್ದರು.**

# ತರಕಾರಿ ದರ ಏರಿಕೆ: ಗ್ರಾಹಕರ ಜೇಬಿಗೆ ಕತ್ತರಿ



**ಪ್ರಮುಖ ತರಕಾರಿಗಳ ದರ**

| | |
|---|---|
| ಕ್ಯಾರೆಟ್ : | 23–45 ರಿಂದ 44–59 |
| ಟೊಮ್ಯಾಟೊ: | 8–20 ರಿಂದ 31–48 |
| ಈರುಳ್ಳಿ: | 40–45 ರಿಂದ 61–70 |
| ಬದನೆಕಾಯಿ: | 15–40 ರಿಂದ 34–45 |
| ಮೆಂತೆಸೊಪ್ಪಿನ ಕಟ್ಟು: | 20–30 ರಿಂದ 60–80 |
| ಕೊತ್ತಂಬರಿ: | 40–53 ರಿಂದ 90–120 |
| ದಪ್ಪ ಮೆಣಸಿನಕಾಯಿ: | 29–55 ರಿಂದ 45–62 |

ಬೆಂಗಳೂರು,ಸೆ.26– ಮಳೆ ಕೊರತೆಯ ಪರಿಣಾಮ ತರಕಾರಿ ಬೆಳೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಇದೀಗ ಅದರ ಬಿಸಿ ಗ್ರಾಹಕರಿಗೂ ತಟ್ಟಿದೆ.

ಬೆಂಗಳೂರಿನ ಮಾರುಕಟ್ಟೆಗೆ ಸ್ಥಳೀಯವಾಗಿ ಬರುವ ತರಕಾರಿ ಆವಕದಲ್ಲಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಹಲವು ತರಕಾರಿಗಳ ದರದಲ್ಲಿ ಗಣನೀಯ ಏರಿಕೆಯಾಗಿದೆ.

ನೀರಿನ ಕೊರತೆಯಿಂದ ಬೆಳೆ ಪ್ರಮಾಣ ಮಾತ್ರವಲ್ಲದೆ, ತರಕಾರಿಗಳ ಗಾತ್ರ ಮತ್ತು ಗುಣಮಟ್ಟವೂ ಕುಸಿದಿದ್ದು,ಇದರ ಪರಿಣಾಮವಾಗಿ ಈರುಳ್ಳಿ, ಕ್ಯಾ-ರೆಟ್, ಟೊಮ್ಯಾಟೊ, ನಿಂಬೆಹಣ್ಣು ಸೇರಿದಂತೆ ಹಲವು ತರಕಾರಿಗಳ ಬೆಲೆ ಏರಿಕೆಯಾಗಿದೆ.

ಸಗಟು ಮಾರುಕಟ್ಟೆಯಲ್ಲೇ ದರ ಹೆಚ್ಚಳವಾಗಿದ್ದು, ಚಿಲ್ಲರೆ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಮತ್ತಷ್ಟು ಹೊರೆ ಬೀಳುತ್ತಿದೆ.ಬೆಂಗಳೂರು ಸುತ್ತಮುತ್ತಲಿನ ಗ್ರಾಮಗಳಿಂದ ಮಾರುಕಟ್ಟೆಗೆ ಬರುವ ಪೂರೈಕೆ ಕಡಿಮೆಯಾಗಿರುವುದೇ ದರ ಏರಿಕೆಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಸ್ಥಳೀಯ ಪೂರೈಕೆ ಮತ್ತಷ್ಟು ಕುಸಿದರೆ, ಹೊರ ಜಿಲ್ಲೆಗಳ ಮಾರುಕಟ್ಟೆಗಳ ಮೇಲಿನ ಅವಲಂಬನೆ ಹೆಚ್ಚಾಗುವ ಸಾಧ್ಯತೆಯೂ ಇದೆ.

ಇತ್ತ,ಮಳೆ ಕೊರತೆಯಿಂದ ರೈತರು ಕೂಡ ಬೆಳೆ ನಷ್ಟದ ಸಂಕಷ್ಟ ಎದುರಿಸುತ್ತಿದ್ದಾರೆ. ಸಾಲ ಮಾಡಿ ಬೀಜ, ಗೊಬ್ಬರ ಖರೀದಿಸಿರುವ ರೈತರಿಗೆ ಬೆಳೆ ಕೈಕೊಟ್ಟಿರುವುದು ಆತಂಕ ಹೆಚ್ಚಿಸಿದೆ. ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಕಮಿಷನ್ ಹೆಚ್ಚಳವಾಗುತ್ತಿದೆ ಎಂಬ ಆರೋಪವನ್ನೂ ಕೆಲವು ರೈತರು ಮಾಡುತ್ತಿದ್ದಾರೆ.

ಒಟ್ಟಿನಲ್ಲಿ, ಮಳೆ ಕೊರತೆಯಿಂದ ರೈತರಿಗೆ ಬೆಳೆ ನಷ್ಟ, ಗ್ರಾಹಕರಿಗೆ ಬೆಲೆ ಏರಿಕೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ತರಕಾರಿ ದರ ಏರಿಕೆಯ ಪರಿಣಾಮ ಈಗಾಗಲೇ ಅಡುಗೆ ಮನೆಯ ಬಜೆಟ್ ಮೇಲೂ ಒತ್ತಡ ಹೆಚ್ಚಿಸಿದೆ.

# 5 ಕೆಜಿ ತೂಕದ ಲಡ್ಡು 1 ಕೋಟಿಗೆ ಮಾರಾಟ



ಬಂಡ್ಲಗುಡ,ಸೆ.26–ಹೈದರಾಬಾದ್‌ನ ಬಂಡ್ಲಗುಡ ಜಾಗೀರ್ ಪ್ರದೇಶದಲ್ಲಿರುವ ಕೀರ್ತಿ ರಿಚ್‌ಮಂಡ್ ವಿಲ್ಲಾಸ್‌ನ ಗಣೇಶೋತ್ಸವದಲ್ಲಿ ಐದು ಕೆಜಿ ತೂಕದ ಗಣೇಶ ಪ್ರಸಾದದ ಲಡ್ಡೂ ಹರಾಜಿನಲ್ಲಿ ಒಂದು ಕೋಟಿ ಒಂದು ಲಕ್ಷ ರೂಪಾಯಿಗೆ ಮಾರಾಟವಾಗಿದೆ. ಈ ಬಾರಿಯ ಹರಾಜಿನಲ್ಲಿ ವಿಲ್ಲಾದ ನಿವಾಸಿಗಳ ಶಕ್ತಿಮಾನ್ ಗುಂಪು ಎಂಬ ಒಕ್ಕೂಟವು ಒಟ್ಟಾಗಿ ಹಣವನ್ನು ಸಂಗ್ರಹಿಸಿ ಈ ಲಡ್ಡೂವನ್ನು ಖರೀದಿಸಿದೆ. ಈ ಸಮಾಜದಲ್ಲಿ 2016ರಲ್ಲಿ ಕೇವಲ ಇಪ್ಪತ್ತೈದು ಸಾವಿರ ರೂಪಾಯಿಗೆ ಪ್ರಾರಂಭವಾದ ಈ ಲಡ್ಡೂ ಹರಾಜು ಪದ್ಧತಿಯು ಇಂದು ಕೋಟಿಗಳ ಮಟ್ಟಕ್ಕೆ ತಲುಪಿದೆ. ಇಲ್ಲಿನ ನಿವಾಸಿಗಳು ಈ ಲಡ್ಡೂವನ್ನು ಕೇವಲ ಪ್ರಸಾದವೆಂದು ಭಾವಿಸದೆ ಸಮೃದ್ಧಿ ಮತ್ತು ಅದೃಷ್ಟದ ಸಂಕೇತವೆಂದು ನಂಬುತ್ತಾರೆ. ಹರಾಜಿನಿಂದ ಸಂಗ್ರಹವಾದ ಈ ಎಲ್ಲಾ ಹಣವನ್ನು ಧರ್ಮಾರ್ಥ ಕಾರ್ಯಗಳಿಗಾಗಿ ನೀಡಲಾಗುತ್ತದೆ. ಆರ್ ವಿ ದಿಯಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಈ ಹಣವನ್ನು ಬಡ ಮಕ್ಕಳ ಶಿಕ್ಷಣ, ರೋಗಿಗಳ ವೈದ್ಯಕೀಯ ವೆಚ್ಚ ಮತ್ತು ಸುಮಾರು ಅರವತ್ತು ಬಿನ್ನ ಲಾಭದಾಯಕ ಸಂಸ್ಥೆಗಳ ಸಾಮಾಜಿಕ ಸೇವೆಗಳಿಗೆ ಬಳಸಲಾಗುತ್ತದೆ. ಕಳೆದ ವರ್ಷ ಈ ಸಂಸ್ಥೆಯು ಸಂಗ್ರಹಿಸಿದ ಹಣದಿಂದ ಏಳುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗಿತ್ತು.

# ಗಣೇಶ ಪೆಂಡಾಲ್‌ಗೆ ಬೆಂಕಿ: ನಾಲ್ವರ ಸಾವು



ಮಾಂಡ್ಲಾ,ಸೆ.26–ಮಧ್ಯಪ್ರದೇಶದ ಮಾಂಡ್ಲಾ ಜಿಲ್ಲೆಯ ನೈನ್‌ಪುರ ತಾಲೂಕಿನ ಹಿರಾಪುರ ಗ್ರಾಮದಲ್ಲಿ ಶನಿವಾರ ಮುಂಜಾನೆ ಹೃದಯವಿದ್ರಾವಕ ಘಟನೆಯೊಂದು ನಡೆದಿದೆ. ಗಣೇಶ ಮೂರ್ತಿ ವಿಸರ್ಜನೆಯ ನಂತರ ಪೆಂಡಾಲ್‌ನಲ್ಲಿ ನಿದ್ರಿಸುತ್ತಿದ್ದ ಯುವಕರ ಮೇಲೆ ವಿದ್ಯುತ್ ತಂತಿಯೊಂದು ಹರಿದು ಬಿದ್ದು, ವಿದ್ಯುತ್ ಪ್ರವಾಹದಿಂದಾಗಿ ನಾಲ್ವರು ಯುವಕರು ದಾರುಣವಾಗಿ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಶನಿವಾರ ಬೆಳಗಿನ ಜಾವ ಸುಮಾರು 5:00 ರಿಂದ 5:30 ರ ವೇಳೆಗೆ ಈ ಭೀಕರ ಅಪಘಾತ ಸಂಭವಿಸಿದೆ. ಹಿರಾಪುರ ಗ್ರಾಮದ ಗಣೇಶ ಮಂಚ್ ಪೆಂಡಾಲ್‌ನಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಮುಗಿದ ನಂತರ ಏಳರಿಂದ ಎಂಟು ಯುವಕರು ವಿಶ್ರಾಂತಿ ಪಡೆಯಲು ಅಲ್ಲಿಯೇ ಮಲಗಿದ್ದರು. ಈ ಸಮಯದಲ್ಲಿ ವಿದ್ಯುತ್ ಕಂಬ ಹಾಗೂ ಮೀಟರ್ ಸಂಪರ್ಕದ ಬಳಿಯಿದ್ದ ಮುಖ್ಯ ವಿದ್ಯುತ್ ತಂತಿಯೊಂದು ತುಂಡಾಗಿ ನೇರವಾಗಿ ಪೆಂಡಾಲ್‌ನಲ್ಲಿದ್ದ ಯುವಕರ ಮೇಲೆ ಬಿದ್ದಿದೆ.

ವಿದ್ಯುತ್ ಆಘಾತದ ತೀವ್ರತೆಗೆ ನಿದ್ರೆಯಲ್ಲಿದ್ದ ನಾಲ್ವರು ಯುವಕರು ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ.

ವಿದ್ಯುತ್ ಆಘಾತದಿಂದ ಜೈನು ಭವಾರೆ (19), ರವಿ ಝುರಿಯಾ (24), ಕೃಷ್ಣ ಕುಮಾರ್ ಭವಾರೆ (18) ಹಾಗೂ ವೀರೇಂದ್ರ ಭವಾರೆ (24) ಎಂಬ ನಾಲ್ವರು ಯುವಕರು ಅಕಾಲಿಕ ಮರಣಕ್ಕೊಳಗಾಗಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಮೂವರ ಪೈಕಿ ಪ್ರಿಯಾಂಶು ಎಂಬ ಯುವಕನ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಇಬ್ಬರು ಗಾಯಾಳುಗಳಿಗೆ ನೈನ್‌ಪುರದ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸ್ಥಳಕ್ಕೆ ಅಧಿಕಾರಿಗಳ ಭೇಟಿ : ತನಿಖೆ ಆರಂಭ:

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆಯೇ ನೈನ್‌ಪುರ ಪೊಲೀಸ್ ಠಾಣೆಯ ಸಿಬ್ಬಂದಿ, ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ತಂಡಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದವು. ನೈನ್‌ಪುರ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಅಶುತೋಷ್ ಠಾ–ಕೂರ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ, "ದುರಂತದ ಕುರಿತು ತನಿಖೆಗೆ ಆದೇಶಿಸಲಾಗಿದ್ದು, ವಿದ್ಯುತ್ ಇಲಾಖೆಯ ನಿರ್ಲಕ್ಷ್ಯದ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ" ಎಂದು ಸ್ಪಷ್ಟಪಡಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಪಾಕ್ ಪತ್ರಕರ್ತನಿಗೆ ಜೈಶಂಕರ್ ತರಾಟೆ

ನವದೆಹಲಿ, ಸೆ.26– ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಿಶ್ವಸಂಸ್ಥೆಯ 81ನೇ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಪಾಕಿಸ್ತಾನಿ ಪತ್ರಕರ್ತರೊಬ್ಬರು ಭಾರತವು ಪಾಕಿಸ್ತಾನದಲ್ಲಿ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿದೆ ಎಂಬ ಆರೋಪಕ್ಕೆ ತೀಕ್ಷ್ಣ ವಾಗಿ ಪ್ರತಿಕ್ರಿಯಿಸಿದ್ದಾರೆ.

ಲೈಬೀರಿಯಾದ ವಿದೇಶಾಂಗ ಸಚಿವೆ ಸಾರಾ ಬೇಸೊಲೋ ನ್ಯಂತಿ ಅವರೊಂದಿಗೆ ಜೈಶಂಕರ್ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ವೇಳೆ ಪಾಕಿಸ್ತಾನಿ ಪತ್ರಕರ್ತರು ಈ ಆರೋಪ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಜೈಶಂಕರ್, "ಭಯೋತ್ಪಾದಕ ರಾಷ್ಟ್ರವೇ ಈ ಪ್ರಶ್ನೆಯನ್ನು ನನ್ನನ್ನು ಕೇಳುತ್ತಿದೆ," ಎಂದು ಉತ್ತರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜೈಶಂಕರ್ ಅವರು ಸಮುದ್ರಯಾನಿಕರ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆಯೂ ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ತಿಂಗಳುಗಳಲ್ಲಿ ವಾಣಿಜ್ಯ ಹಡಗುಗಳು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುವ ನಾವಿಕರ ಮೇಲೆ ನಡೆದ ದಾಳಿಗಳನ್ನು ಅವರು ಉಲ್ಲೇಖಿಸಿದರು.

"ಇತ್ತೀಚಿನ ತಿಂಗಳುಗಳಲ್ಲಿ ವಾಣಿಜ್ಯ ಹಡಗುಗಳು ಮತ್ತು ಸಮುದ್ರಯಾನಿಕರ ಮೇಲೆ ಸ್ವೀಕಾರಾರ್ಹವಲ್ಲದ ದಾಳಿಗಳನ್ನು ಜಗತ್ತು ಕಂಡಿದೆ," ಎಂದು ಸಚಿವರು ಹೇಳಿದರು.

ಸ್ಟ್ರೇಟ್ ಆಫ್ ಹೋರ್ಮುಜ್, ಕೆಂಪು ಸಮುದ್ರ ಮತ್ತು ಕಪ್ಪು ಸಮುದ್ರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಇಂತಹ ಘಟನೆಗಳು ನಡೆದಿವೆ ಎಂದು ಅವರು ತಿಳಿಸಿದರು. ಯಾವುದೇ ರೀತಿಯ ಹಿಂಸಾಚಾರ ಅಥವಾ ಜೀವಹಾನಿಗೆ ಸಮರ್ಥನೆ ಇರಲು ಸಾಧ್ಯವಿಲ್ಲ. "ಸರಳವಾಗಿ ಹೇಳುವುದಾದರೆ, ಈ ದಾಳಿಗಳು ನಿಲ್ಲಬೇಕು," ಎಂದು ಜೈಶಂಕರ್ ಹೇಳಿದರು. ಭಾರತವು ಸಮುದ್ರಯಾನಿಕರನ್ನು ಒದಗಿಸುವ ಪ್ರಮುಖ ರಾಷ್ಟ್ರವಾಗಿದ್ದು, ಅತಿ–ದೊಡ್ಡ ಶಿಪ್ಪಿಂಗ್ ನೋಂದಣಿ ವ್ಯವಸ್ಥೆಯನ್ನು ಹೊಂದಿರುವ ಲೈಬೀರಿಯಾದೊಂದಿಗೆ ಕೈಜೋಡಿಸಿದೆ ಎಂದು ಅವರು ತಿಳಿಸಿದರು. ಇದೇ ಉದ್ದೇಶ ಹೊಂದಿರುವ ಇತರ ದೇಶಗಳು ಹಾಗೂ ಪ್ರಮುಖ ಹಡಗು ಮಾಲೀಕರನ್ನೂ ಈ ಸಹಕಾರಕ್ಕೆ ಸೇರಿಸಲಾಗಿದೆ ಮಾಹಿತಿ ನೀಡಿದರು.

# 12 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವು

**12 ಎಕರೆ ಜಮೀನು ಸರ್ಕಾರದ ವಶಕ್ಕೆ**

**ಸ್ಥಳ: ಕಾಡಾಗ್ರಹಾರ ಗ್ರಾಮ, ಬಿದರಹಳ್ಳಿ ಹೋಬಳಿ**
**ಸರ್ವೆ ನಂ.: 34ರ ಹೊಸ ಸರ್ವೆ ನಂ.115, 116**
**ಜಮೀನಿನ ವಿಸ್ತೀರ್ಣ: 12 ಎಕರೆ**
**ಮಾರ್ಗಸೂಚಿ ಮೌಲ್ಯ: 18 ಕೋಟಿ**
**ಮಾರುಕಟ್ಟೆ ಮೌಲ್ಯ: 72 ಕೋಟಿ**
**ಜಮೀನಿನ ಸ್ವರೂಪ: ಗೋಮಾಳ/ಸರ್ಕಾರಿ ಜಮೀನು**



ಬೆಂಗಳೂರು, ಸೆ. 26– ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿ ಮಾಡಲಾಗಿದ್ದ 12 ಎಕರೆ ಸರ್ಕಾರಿ ಜಮೀನನ್ನು ಜಿಲ್ಲಾಡಳಿತ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆದುಕೊಂಡಿದೆ.

ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್. ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಾಡಾಗ್ರಹಾರ ಗ್ರಾಮದ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಯಿತು.

ಕಾಡಾಗ್ರಹಾರ ಗ್ರಾಮದ ಸರ್ವೆ ನಂ.34ರ ಹೊಸ ಸರ್ವೆ ನಂ.115 ಮತ್ತು 116ಕ್ಕೆ ಸಂಬಂಧಿಸಿದ ಗೋಮಾಳ ಜಮೀನಿನಲ್ಲಿ ಅಕ್ರಮ ಒತ್ತುವರಿ ಮಾಡಲಾಗಿತ್ತು. ಒಟ್ಟು 12 ಎಕರೆ ಪ್ರದೇಶವನ್ನು ತೆರವುಗೊಳಿಸಿ, ಕಂದಾಯ ಇಲಾಖೆಯ ಅಧಿಕಾರಿಗಳು ಜಮೀನನ್ನು ಸರ್ಕಾರದ ವಶಕ್ಕೆ ಪಡೆದರು.

ತೆರವುಗೊಳಿಸಿರುವ ಸರ್ಕಾರಿ ಜಮೀನಿನ ಮಾರ್ಗಸೂಚಿ ಮೌಲ್ಯ ಸುಮಾರು 18 ಕೋಟಿ ಹಾಗೂ ಮಾರುಕಟ್ಟೆ ಮೌಲ್ಯ ಸುಮಾರು 72 ಕೋಟಿ ಎಂದು ಜಿಲ್ಲಾಡಳಿತ ತಿಳಿಸಿದೆ.

ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್. ಅವರ ನೇತೃತ್ವದಲ್ಲಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜಮೀನಿನ ಸ್ಥಿತಿಗತಿಗಳನ್ನು ಪರಿಶೀಲಿಸಿದ ಬಳಿಕ ತೆರವು ಕಾರ್ಯಾಚರಣೆ ಕೈಗೊಂಡರು. ಗೋಮಾಳ ಸೇರಿದಂತೆ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ವಿರುದ್ಧ ಕಂದಾಯ ಇಲಾಖೆ ಕ್ರಮ ಮುಂದುವರಿಸಿದೆ.

ಕಾರ್ಯಾಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಜಗದೀಶ್ ಕೆ. ನಾಯಕ್, ಭೂ ದಾಖಲೆಗಳ ಉಪ ನಿರ್ದೇಶಕ ಸುಜಯ್, ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಪರಶುರಾಮ್ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# 3 ದಿನ ಬ್ಯಾಂಕ್ ಮುಷ್ಕರ : ಎಟಿಎಂಗೆ ಸೇವೆಗೆ ಶುಲ್ಕ ವಿನಾಯಿತಿ

**ಮುಷ್ಕರದ ವೇಳೆ ಯಾವ ಸೇವೆಗಳು ಲಭ್ಯವಿರುತ್ತವೆ?**

*** ಡಿಜಿಟಲ್ ಮತ್ತು ಸ್ವಯಂ ಸೇವಾ ವ್ಯವಸ್ಥೆಗಳು ಎಂದಿನಂತೆ ಕಾರ್ಯನಿರ್ವಹಿಸುವ ಸಾಧ್ಯತೆ * ಯುಪಿಐ ಮೂಲಕ ಹಣ ಪಾವತಿ ಮತ್ತು ಹಣ ವರ್ಗಾವಣೆ* ಇಂಟರ್‌ನೆಟ್ ಬ್ಯಾಂಕಿಂಗ್* ಮೊಬೈಲ್ ಬ್ಯಾಂಕಿಂಗ್* ಎಟಿಎಂ ಮೂಲಕ ಹಣ ಪಡೆಯುವುದು* ಡಿಜಿಟಲ್ ಪಾವತಿ ಸೇವೆಗಳು* ಇತರ ಸ್ವಯಂ ಸೇವಾ ಸೌಲಭ್ಯಗಳು**

**ಯಾವ ಸೇವೆಗಳಿಗೆ ತೊಂದರೆಯಾಗಬಹುದು?**

- **ಬ್ಯಾಂಕ್ ಶಾಖೆಗಳಲ್ಲಿ ನೇರವಾಗಿ ನಡೆಸುವ ಹಲವು * ಸೇವೆಗಳು ಮುಷ್ಕರದಿಂದ ವಿಳಂಬವಾಗಬಹುದು ಅಥವಾ ಸ್ಥಗಿತಗೊಳ್ಳಬಹುದು**
- **ಶಾಖೆಯಲ್ಲಿ ನೇರವಾಗಿ ನಗದು ಠೇವಣಿ ಮಾಡುವುದು ಮತ್ತು ಹಣ ಪಡೆಯುವುದು**
- **ಚೆಕ್ ಸ್ವೀಕಾರ ಮತ್ತು ವಿಲೇವಾರಿ**
- **ಇತರ ಚೆಕ್ ಸಂಬಂಧಿತ ಕೆಲಸಗಳು**
- **ಡಿಮ್ಯಾಂಡ್ ಡ್ರಾಫ್ಟ್‌ಗೆ ಸಂಬಂಧಿಸಿದ ಸೇವೆಗಳು**
- **ಖಾತೆ ದಾಖಲೆಗಳಿಗೆ ಸಂಬಂಧಿಸಿದ ಕೆಲಸಗಳು**
- **ಅಗತ್ಯವಿರುವ ಲಾಕರ್ ಸೇವೆಗಳು**
- **ಇತರ ಶಾಖೆ ಆಧಾರಿತ ಸೇವೆಗಳು**



ಬೆಂಗಳೂರು, ಸೆ.26 – ವಾರಕ್ಕೆ 5 ದಿನ ಕೆಲಸದ ಅವಧಿ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬ್ಯಾಂಕ್ ನೌಕರರು ಸೆ.28ರಿಂದ 30 ರ ತನಕ 3 ದಿನ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಈ ಅವಧಿಯಲ್ಲಿ ಗ್ರಾಹಕರು ಎಟಿಎಂ ವ್ಯವಹಾರಗಳಿಗೆ ಶುಲ್ಕ ವಿನಾಯಿತಿ ನೀಡಲು ಇಂಡಿಯನ್ ಬ್ಯಾಂಕ್, ಎಸ್ ಬಿಐ, ಯೂನಿಯನ್ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್ ಗಳು ತೀರ್ಮಾನಿಸಿವೆ.

ಮುಷ್ಕರದ ಸಂದರ್ಭದಲ್ಲಿ ಗ್ರಾಹಕರಿಗೆ ಹಣದ ಕೊರತೆ ಉಂಟಾಗದಂತೆ ಎಟಿಎಂ ಸೇವೆಗಳನ್ನು ನಿರಂತರವಾಗಿ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಗ್ರಾಹಕರಿಗೆ ಈ ಅವಧಿಯಲ್ಲಿ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ ಬ್ಯಾಂಕ್ ಗಳು ಈ ಕ್ರಮ ಕೈಗೊಂಡಿವೆ. ಹೀಗಾಗಿ ಈ ಮುಷ್ಕರದ ಅವಧಿಯಲ್ಲಿ ಗ್ರಾಹಕರು ಎಷ್ಟು ಬೇಕಿದ್ದರೂ ಅಷ್ಟು ಸಲ ಹಣ ಡ್ರಾ ಮಾಡಿಕೊಳ್ಳಬಹುದು.ನಿಗದಿತ ಮಿತಿ ಮೀರಿದರೂ ಆ ವಹಿವಾಟಿಗೆ ಯಾವುದೇ ಶುಲ್ಕ ವಿಧಿಸುವುದಿಲ್ಲ ಎಂದಿವೆ. ಸದ್ಯ ಶುಲ್ಕ ರಹಿತವಾಗಿ ಹಣ ವಿತ್ ಡ್ರಾಗೆ (ತಿಂಗಳಿಗೆ) ಅದೇ ಬ್ಯಾಂಕಿನ ಎಟಿಎಂ ಆದರೆ 3, ಅನ್ಯ ಬ್ಯಾಂಕಿನ ಎಟಿಎಂ ಆದರೆ 2 ಮಿತಿ ಇದೆ. ಆದರೆ ಈ 3 ದಿನ ಈ ನಿಯಮ ಅನ್ವಯಿಸುವುದಿಲ್ಲ.

ಸಾಮಾನ್ಯವಾಗಿ, ಬೇರೆ ಬ್ಯಾಂಕ್‌ನ ಎಟಿಎಂನಲ್ಲಿ ಹಣ ಡ್ರಾ ಮಾಡಿದಾಗ ನಿರ್ದಿಷ್ಟ ಮಿತಿಯ ನಂತರ ಶುಲ್ಕ ವಿಧಿಸಲಾಗುತ್ತದೆ. ಅಲ್ಲದೆ, ತಿಂಗಳಿಗೆ ಉಚಿತವಾಗಿ ಹಣ ಡ್ರಾ ಮಾಡಬಹುದಾದ ವಹಿವಾಟುಗಳಿಗೂ ಮಿತಿ ಇರುತ್ತದೆ. ಆದರೆ, ಮುಷ್ಕರದ ಅವಧಿಯಲ್ಲಿ ಈ ಶುಲ್ಕ ಮತ್ತು ವಹಿವಾಟು ಮಿತಿಗಳಲ್ಲಿ ವಿನಾಯಿತಿ ನೀಡಲಾಗುತ್ತದೆ ಎಂಬ ಮಾಹಿತಿ ಗ್ರಾಹಕರಿಗೆ ನೆಮ್ಮದಿ ತಂದಿದೆ.

ಹೀಗಾಗಿ, ಬ್ಯಾಂಕ್ ಶಾಖೆಗಳಿಗೆ ನೇರವಾಗಿ ಭೇಟಿ ನೀಡಬೇಕಾದ ಗ್ರಾಹಕರು ಮುಷ್ಕರದ ಅವಧಿಯಲ್ಲಿ ಸೇವೆಗಳಲ್ಲಿ ವಿಳಂಬವಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದೇ ವೇಳೆ ಯುಪಿಐ, ಮೊಬೈಲ್ ಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಎಟಿಎಂನಂತಹ ಡಿಜಿಟಲ್ ಹಾಗೂ ಸ್ವಯಂ ಸೇವಾ ಸೌಲಭ್ಯಗಳು ಗ್ರಾಹಕರಿಗೆ ಪರ್ಯಾಯವಾಗಿ ನೆರವಾಗಲಿವೆ.

**ವಾರಕ್ಕೆ 5 ದಿನ ಕೆಲಸದ ಭರವಸೆ ನೀಡಿರಲಿಲ್ಲ :**

ವಾರಕ್ಕೆ 5 ದಿನ ಮಾತ್ರ ಕೆಲಸ ಎಂಬ ನಿಯಮ ಜಾರಿಗೆ ಆಗ್ರಹಿಸಿ ಬ್ಯಾಂಕ್ ನೌಕರರು ಮುಷ್ಕರಕ್ಕೆ ಮುಂದಾಗಿರುವುಕ್ಕೆ ಪ್ರತಿಕ್ರಿಯೆ ನೀಡಿರುವ ಹಣಕಾಸು ಇಲಾಖೆ, 'ಬ್ಯಾಂಕ್ ನೌಕರರ ಸಂಘಗಳಿಗೆ ವಾರಕ್ಕೆ 5 ದಿನ ಕೆಲಸದ ಬಗ್ಗೆ ಯಾವುದೇ ಭರವಸೆ ನೀಡಿರಲಿಲ್ಲ. ಈ ಹಿಂದೆ ಸರ್ಕಾರ ಭರವಸೆ ನೀಡಿತ್ತು ಎಂದು ಬ್ಯಾಂಕ್ ಸಂಘಗಳು ಹೇಳುತ್ತಿರುವುದು ಸುಳ್ಳು' ಎಂದು ಸ್ಪಷ್ಟನೆ ನೀಡಿದೆ. ವಾರಕ್ಕೆ 5 ದಿನ ಕೆಲಸ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬ್ಯಾಂಕ್ ನೌಕರರ ಸಂಘ ಸೆ.28ರಿಂದ 3 ದಿನಗಳ ಮುಷ್ಕರಕ್ಕೆ ಕರೆ ಕೊಟ್ಟಿದೆ.

# ವಿಟಿಯು ಘಟಿಕೋತ್ಸವದಲ್ಲಿ ಮೊಳಗಿದ ಪೂರ್ಣ ವಂದೇಮಾತರಂ

ಬೆಳಗಾವಿ.ಸೆ.26– ವಂದೇ ಮಾತರಂ ಗೀತೆಯ ವಿಚಾರದಲ್ಲಿ ರಾಜ್ಯ ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ನೀಡಿದ್ದ ಸೂಚನೆಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಪಾಲಿಸಿದೆ.

ವಿಟಿಯುನ 26ನೇ ಘಟಿಕೋತ್ಸವದಲ್ಲಿ ಪೂರ್ಣ ವಂದೇ ಮಾತರಂ ಗೀತೆಯನ್ನು ಹಾಡಿಸಲಾಯಿತು.ಸರ್ಕಾರಿ ಕಾರ್ಯಕ್ರಮಗಳಲ್ಲಿ ವಂದೇ ಮಾತರಂನ ಎರಡು ಚರಣಗಳನ್ನು ಮಾತ್ರ ಹಾಡುವಂತೆ ಸರ್ಕಾರ ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಮಹತ್ವ ಪಡೆದುಕೊಂಡಿದೆ.

ವಂದೇ ಮಾತರಂನ ಪೂರ್ಣ ಚರಣ ಹಾಡಿಸುವಂತೆ ರಾಜ್ಯಪಾಲರು ವಿಟಿಯುಗೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯಪಾಲರ ಸೂಚನೆಯಂತೆ ಘಟಿಕೋತ್ಸವದಲ್ಲಿ ಪೂರ್ಣ ಗೀತೆಯನ್ನು ಹಾಡಿಸಲಾಯಿತು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಹಾಗೂ ಸಚಿವ ಬಸವರಾಜ ರಾಯರೆಡ್ಡಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ವಂದೇ ಮಾತರಂನ ಎರಡು ಚರಣಗಳಿಗೆ ಸೀಮಿತಗೊಳಿಸುವ ಸರ್ಕಾರದ ನಿರ್ಧಾರಕ್ಕೆ ರಾಜ್ಯಪಾಲ ಗೆಹ್ಲೋಟ್ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಕುರಿತು ರಾಜ್ಯ ಸರ್ಕಾರ–ಕ್ಕೆ ಪತ್ರ ಬರೆದು ನಿರ್ಧಾರವನ್ನು ಮರುಪರಿಶೀಲಿಸುವಂತೆ ಅವರು ಸೂಚಿಸಿದ್ದರು.

ರಾಜ್ಯಪಾಲರ ಆಕ್ಷೇಪದ ಬೆನ್ನಲ್ಲೇ ನಡೆದ ವಿಟಿಯು ಘಟಿಕೋತ್ಸವದಲ್ಲಿ ಪೂರ್ಣ ವಂದೇ ಮಾತರಂ ಮೊಳಗಿರುವುದು ಇದೀಗ ರಾಜಕೀಯ ವಲಯದಲ್ಲಿ ಗಮನ ಸೆಳೆದಿದೆ.



**ಬನಶಂಕರಿ ಅಮ್ಮನವರ ಜನ್ಮೋತ್ಸವದ ಅಂಗವಾಗಿ ಬೆಂಗಳೂರಿನ ಬನಶಂಕರಿ ದೇವಸ್ಥಾನದಲ್ಲಿ ಬನಶಂಕರಿ ಅಮ್ಮನವರಿಗೆ ವಿಶೇಷ ಅಲಂಕಾರ ಮಾಡಿ ವಿವಿಧ ಪೂಜಾ ಕೈಂಕರ್ಯ ಗಳನ್ನು ಸಮರ್ಪಿಸ ಲಾಯಿತು.**

# ಎಐ ಕ್ಯಾಮೆರಾ ಎಡವಟ್ಟು ಗಿಟಾರ್‌ಗೆ 500 ದಂಡ

ಬೆಂಗಳೂರು.ಸೆ.26– ಹೆಲ್ಮೆಟ್ ಧರಿಸದ ಹಿಂಬದಿ ಸವಾರರಿಗೆ ದಂಡ ವಿಧಿಸುವ ಎಐ ಕ್ಯಾಮೆರಾ, ಬೈಕ್‌ನ ಹಿಂಬದಿಯಲ್ಲಿದ್ದ ಗಿಟಾರ್ ಬ್ಯಾಗ್‌ನ್ನೇ ಸವಾರ ಎಂದು ತಪ್ಪಾಗಿ ಗುರುತಿಸಿ 500 ದಂಡ ವಿಧಿಸಿದ ವಿಚಿತ್ರ ಘಟನೆ ನಡೆದಿದೆ.

ಸೌವಿಕ್ ದತ್ತ ಎಂಬುವವರು ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಹೆಬ್ಬಾಳ ಟಿನ್ ಫ್ಯಾಕ್ಟರಿ ಟ್ರಾಫಿಕ್ ಸಿಗ್ನಲ್ ಬಳಿ ಎಐ ಕ್ಯಾಮೆರಾ ದೃಶ್ಯ ಸೆರೆಹಿಡಿದಿದೆ.ಬೈಕ್‌ನ ಹಿಂಭಾಗದಲ್ಲಿದ್ದ ಗಿಟಾರ್ ಬ್ಯಾಗ್‌ನ್ನು ಹಿಂಬದಿ ಸವಾರ ಎಂದು ತಪ್ಪಾಗಿ ಗುರುತಿಸಿದ ಕ್ಯಾಮೆರಾ,ಹೆಲ್ಮೆಟ್ ಧರಿಸಿಲ್ಲ ಎಂಬ ಕಾರಣಕ್ಕೆ ಆನ್‌ಲೈನ್‌ನಲ್ಲಿ ಚಾಲನ್ ಅಪ್‌ಲೋಡ್ ಮಾಡಿದೆ.

ಈ ದಂಡದ ಮೆಸೇಜ್ ಸೌವಿಕ್ ದತ್ತ ಪತ್ನಿಯ ಮೊಬೈಲ್‌ಗೆ ತಲುಪಿದ್ದು,ಚಾಲನ್ ಪರಿಶೀಲಿಸಿದಾಗ ಎಐ ಕ್ಯಾಮೆರಾದ ವಿಚಿತ್ರ ಎಡವಟ್ಟು ಬೆಳಕಿಗೆ ಬಂದಿದೆ.

ಮನುಷ್ಯನ ಬದಲಿಗೆ ಗಿಟಾರ್ ಬ್ಯಾಗ್‌ನ್ನೇ ಹಿಂಬದಿ ಸವಾರ ಎಂದು ಗುರುತಿಸಿ ದಂಡ ವಿಧಿಸಿರುವ ಘಟನೆ, ಟ್ರಾಫಿಕ್ ನಿಯಮ ಜಾರಿಯಲ್ಲಿ ಎಐ ಆಧಾರಿತ ಕ್ಯಾಮೆರಾಗಳ ನಿಖರತೆ ಮತ್ತು ಮಾನವ ಪರಿಶೀಲನೆಯ ಅಗತ್ಯದ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

# ಬಿಡುಗಡೆಯಾಗದ ಅನುದಾನ ಪತ್ರ ಬರೆದು ಕೆಆರ್ ಡಿಎಲ್ ಅಧಿಕಾರಿ ನಾಪತ್ತೆ

ಗದಗ,ಸೆ.26–ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ತೀವ್ರ ಒತ್ತಡಕ್ಕೆ ಒಳಗಾಗಿದ್ದ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್ ಡಿಎಲ್)ದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಫರ್ವೀಜ್ ಅವರು ಪತ್ರ ಬರೆದಿಟ್ಟು ನಾಪತ್ತೆಯಾಗಿರುವ ಘಟನೆ ಗದಗದಲ್ಲಿ ನಡೆದಿದೆ.ಗದಗದ ಕೆಆರ್ ಡಿಎಲ್ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಫರ್ವೀಜ್ ಅವರು ಸೆಪ್ಟೆಂಬರ್ 12ರಂದು ತಮ್ಮ ಮೇಲಧಿಕಾರಿಗೆ ಪತ್ರ ಬರೆದಿದ್ದಾರೆ. ಕೋಟ್ಯಂತರ ರೂ ಅನುದಾನ ಬಿಡುಗಡೆ–ಯಾಗದ ಕಾರಣ ತೀವ್ರ ಸಂಕಷ್ಟ ಎದುರಿಸುತ್ತಿರುವುದಾಗಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ಗುತ್ತಿಗೆದಾರರಿಂದ ಒತ್ತಡ:

ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಸಬ್‌ಗುತ್ತಿಗೆದಾರರು ಮನೆಯ ಮುಂದೆ ಬಂದು ಗಲಾಟೆ ಮಾಡುತ್ತಿದ್ದರು. ಅಲ್ಲದೆ, ಪ್ರತಿದಿನ ದೂರವಾಣಿ ಕರೆ ಮಾಡಿ ಕಿರುಕುಳ ನೀಡುತ್ತಿದ್ದರು. ಇದರಿಂದ ತಾವು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿರುವುದಾಗಿ ಫರ್ವೀಜ್ ಪತ್ರದಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ.ಅನುದಾನ ಬಿಡುಗಡೆ ಮಾಡಿ ಸಮಸ್ಯೆ ಬಗೆಹರಿಸುವಂತೆ ಹಾಗೂ ತಮ್ಮ ಬದಲಿಗೆ ಬೇರೆ ಎಇಇಯನ್ನು ನಿಯೋಜಿಸುವಂತೆ ಅವರು ಮನವಿ ಮಾಡಿರುವುದಾಗಿ ತಿಳಿದುಬಂದಿದೆ. ತಮ್ಮ ಕುಟುಂಬದವರಿಗೆ ಯಾವುದೇ ರೀತಿಯ ಕಿರುಕುಳ ನೀಡಬಾರದು ಎಂದೂ ಪತ್ರದಲ್ಲಿ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಬೆಂಗಳೂರಿಗೆ ತೆರಳಿದ್ದ ಫರ್ವೀಜ್: ಕಳೆದ ಸೆಪ್ಟೆಂಬರ್ 12ರಂದು ಪತ್ರ ಬರೆದಿದ್ದ ಫರ್ವೀಜ್, ಸೆಪ್ಟೆಂಬರ್ 13ರಂದು ಬೆಂಗಳೂರಿನಲ್ಲಿ ಸಭೆ ಇದೆ ಎಂದು ಹೇಳಿ ತೆರಳಿದ್ದರು. ಬಳಿಕ ಅವರು ವಾಪಸ್ ಬಾರದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹುಡುಕಾಟ ನಡೆಸಿದ್ದಾರೆ. ಸೆಪ್ಟೆಂಬರ್ 16ರಂದು ಅವರು ನಾಪತ್ತೆಯಾಗಿರುವ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.